ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈ ತಿದ್ದುಪಡಿಯನ್ನು ಅನುಮೋದಿಸುತ್ತೇನೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಪ್ರಜಾ ಸರ್ಕಾರ ಬಂದಮೇಲೆ ಈಗ ನಾಲ್ಕನೆಯ ವರ್ಷ ನಡೆಯುತ್ತಿದೆ. ಈಗ ನಾವು ದೇಶದಲ್ಲಿ ನಿಜವಾಗಿ ಎಷ್ಟುಮಟ್ಟಿಗೆ ಪ್ರಗತಿಸಾಧನೆಯಾಗಿದೆ, ಯಾವ ಧ್ಯೇಯದಿಂದ ಈ ಸರ್ಕಾರ ಆಡಳಿತ ವಹಿಸಿದೆ, ಅದನ್ನು ಎಷ್ಟು ಮಟ್ಟಿಗೆ ಕಾರ್ಯರೂಪಕ್ಕೆ ತಂದಿದ್ದಾರೆ, ಎಂಬುದನ್ನು ಸ್ವಲ್ಪಮಟ್ಟಿಗೆ ವಿಚಾರ ಮಾಡಬೇಕಾದ್ದು ನಮ್ಮ ಕರ್ತವ್ಯ ಎಂದು ನಾನು ಭಾವಿಸುತ್ತೇನೆ. ಮುಖ್ಯವಾಗಿ ಸಾಮಾನ್ಯ ಜನಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕಾದ್ದಕ್ಕೆ ಪ್ರಯತ್ನ ಪಟ್ಟಿದ್ದಾರೆಯೇ ಎಂದು ತಿಳಿಯಲು ಶ್ರೀಮನ್ಮಹಾರಾಜರವರು ದಯಪಾಲಿಸಿದ ಭಾಷಣವನ್ನು ನೋಡಿದರೆ ನಮಗೆ ಬಹಳ ನಿರಾಶಾದಾಯಕವಾಗಿದೆ. ಸರ್ಕಾರದ ಆಡಳಿತಗಾರರು ತಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಆಹಾರದ ಉತ್ಪತ್ತಿಯ ವಿಚಾರವಾಗಿ ನ್ಯಾಯವಿಧಾಯಕ ಸಭೆಯಲ್ಲಿ ಹೇಳುತ್ತಿದ್ದುದನ್ನು ಅವರ ಅವಗಾಹನೆಗೆ ತರುತ್ತೇನೆ. ಈ ಹತೋಟಿ ಹೋಗುವವರೆಗೂ ದೇಶದಲ್ಲಿ ಅಧಿಕ ಆಹಾರ ಉತ್ಪತ್ತಿಯಾಗುವುದಿಲ್ಲ, ರೈತರಿಗೆ ಎಂದಿಗೂ ಸೌಖ್ಯವಿರುವುದಿಲ್ಲ, ಇನ್ನೂ ಹೆಚ್ಚು ತೊಂದರೆಯಾಗಿ ಉತ್ಪತ್ತಿಯೂ ಕೂಡ ಕಡಮೆಯಾಗುತ್ತದೆ. ನಾವು ಬಂದ ಕೂಡಲೆ ಜೋಳಿಗೆ ತೆಗೆದುಕೊಂಡು ಮನೆ ಮನೆಗೂ ಹೋಗಿ ಆಹಾರವನ್ನು ತಂದು ಕೊಡುತ್ತೇವೆ ಎಂದು ಈಗಿನ ಸರ್ಕಾರದವರು ಹೇಳುತ್ತಿದ್ದರು. ಆದರೆ ಈ ದಿವಸ ಏನಾಗಿದೆಯೆಂದರೆ ಬರಬರುತ್ತಾ ಹತೋಟಿಗಳು ಹೆಚ್ಚು ಹೆಚ್ಚು ಕಠಿಣವಾಗಿ ದೇಶದಲ್ಲಿ ಪ್ರಯೋಗ ಮಾಡಲ್ಪಡುತ್ತಿವೆ. ಹತೋಟಿ ಬಂದು ಆಗಲೇ ಬಹುಕಾಲವಾಯಿತು. ಅಲ್ಲಿಂದ ಒಂದೇ ಸಮನೆ ಸರ್ಕಾರದ ಗಮನಕ್ಕೆ ಈ ವಿಚಾರವನ್ನು ತರುತ್ತಿದ್ದೇವೆ. ಹತೋಟಿಯು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಮನುಷ್ಯನಿಗೆ ಸರಿಯಾಗಿ ಪದಾರ್ಥಗಳನ್ನು ಒದಗಿಸದೇ ಹೋದರೆ ಅದರಿಂದ ಕೆಡುಕೇ ಹೊರತು ಅನುಕೂಲವಿಲ್ಲ ಎಂದು ನಾವು ಹೇಳುತ್ತಿದ್ದೇವೆ.

(ಶ್ರೀ ಬಿ. ಹುಚ್ಚೇಗೌಡರು.)

ಆಹಾರದ ಹತೋಟಿಯನ್ನು ತೆಗೆದು ಹಾಕಿದ ಹೊರತು ಆಹಾರದ ಕೊರತೆ ಮತ್ತು ಅದರಿಂದಾಗುವ ತೊಂದರೆ ದೇಶಕ್ಕೆ ತಪ್ಪುವುದೇ ಇಲ್ಲ. ಇದನ್ನು ಸರ್ಕಾರದವರು ಇನ್ನು ಹತ್ತು ವರ್ಷ ಮುಂದುವರಿಸಿದರೂ ನಮ್ಮ ದೇಶದಲ್ಲಿ ಸ್ವಪರಿಪೂರ್ಣತೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವಿಚಾರವನ್ನು ಪ್ರತಿ ಅಧಿವೇಶನದಲ್ಲಿಯೂ ನಾವು ಹೇಳುತ್ತಲೇ ಇದ್ದೇವೆ. ಸರ್ಕಾರದವರೂ ಈ ಅಭಿಪ್ರಾಯವನ್ನು ಒಪ್ಪುತ್ತಾರೆ. ಆದರೆ ಇಂಡಿಯಾ ಸರ್ಕಾರದವರ ಅಭಿಪ್ರಾಯದಂತೆ ನಡೆಯಬೇಕೆಂದು ಹೇಳುತ್ತಾರೆ. ಹಾಗಾದರೆ ನಾನೊಂದು ಪ್ರಶ್ನೆ ಕೇಳುತ್ತೇನೆ. ಇಂಡಿಯಾ ದೇಶದಲ್ಲೆಲ್ಲಾ ಒಂದೇ ರೀತಿಯ ಹತೋಟಿ ಜಾರಿಯಲ್ಲಿದೆಯೆ ! ಒಂದೇ ಧಾರಣೆ ಇದೆಯೆ ! ಬಟ್ಟೆಗಳನ್ನು ಒಂದೇ ಸಮನಾಗಿ ಎಲ್ಲಾ ಪ್ರದೇಶಗಳಿಗೂ ಹಂಚುತ್ತಿದ್ದಾರೆಯೇ ! ಇದನ್ನೆಲ್ಲಾ ಅವರು ಯೋಚನೆ ಮಾಡಲಿ, ಒಂದೊಂದು ಕಡೆ ಒಂದೊಂದು ರೀತಿಯ ಆಜ್ಞೆಗಳೂ ನಿಬಂಧನೆಗಳೂ ಇವೆ. ಈ ವಿಚಾರಗಳನ್ನೆಲ್ಲಾ ಇಂಡಿಯಾ ಸರ್ಕಾರದ ಗಮನಕ್ಕೆ ತಂದು ನಮ್ಮ ಮಂತ್ರಿಗಳು ಆ ಸರ್ಕಾರದ ಮೇಲೆ ತಮ್ಮ ಪ್ರಭಾವವನ್ನು ಬೀರಲಾರದಿದ್ದರೆ ನಾವು ಏಕೆ ಇವರನ್ನು ನಮ್ಮ ಸರ್ಕಾರದವರೆಂದು ಹೇಳಬೇಕೋ ಗೊತ್ತಿಲ್ಲ. ಹೆಚ್ಚು ಆಹಾರ ಬೆಳೆಯುವ ಸಂಬಂಧವಾಗಿ ಇಲ್ಲಿಯವರೆಗೆ ಸಾಮಾನ್ಯವಾಗಿ ಬರಿಯ ಪ್ರಚಾರ ಮಾಡಿದ್ದಾರೆ. ಇದು ಬರಿಯ ಜೊಳ್ಳು ಪ್ರಚಾರ. ರೈತರು ತಮ್ಮ ಜಮೀನಿನಲ್ಲಿ ಬರಿಯ ಆಹಾರದ ಬೆಳೆಗಳನ್ನು ಬೆಳೆಯಬೇಕು, ಸರ್ಕಾರಕ್ಕೆ ಕೊಡಬೇಕು ಎಂದು ಹೇಳುತ್ತಾರೆ. ಇದೇ ರೀತಿ ಮಿಕ್ಕ ಎಲ್ಲ ಜನರಿಗೂ ಹೇಳಲು ಇವರಿಗೆ ಆಗುವುದಿಲ್ಲ. ರೈತ ಮಾತ್ರ ದೇಶಾಭಿಮಾನಿಯಾಗಿರಬೇಕು, ಸ್ವಾರ್ಥ ರಹಿತನಾಗಿರಬೇಕು, ತಾನು ಕಷ್ಟ ಪಟ್ಟು ಬೆಳೆದದ್ದನ್ನು ಇತರರಿಗೆ ಹಂಚಬೇಕು ಎಂದು ಹೇಳುತ್ತಾರೆ. ಅವನ ವಾಸಕ್ಕೆ ಗುಡಿಸಲಿಲ್ಲದಿದ್ದರೆ ಅದನ್ನು ಯಾರೂ ಕೊಡುವುದಿಲ್ಲ, ಅವನಿಗೆ ವ್ಯವಸಾಯಕ್ಕೆ ಎತ್ತುಗಳಿಲ್ಲದಿದ್ದರೆ ಕೊಡಲು ಇವರಿಗೆ ಸಾಧ್ಯವಿಲ್ಲ. ದೇಶದಲ್ಲಿರುವ ಎಲ್ಲ ರೈತರಿಗೂ ಸೇರಿ ತಕಾವಿ ಸಾಲಗಳಿಗಾಗಿ ಈ ಸಾರಿ ಒದಗಿಸಿರುವ ಮೊಬಲಗು ಒಂದು ಲಕ್ಷ ರೂಪಾಯಿ ಮಾತ್ರ. ಇದರಿಂದ ಎಷ್ಟು ಮಟ್ಟಿಗೆ ಕಾರ್ಯ ಸಾಧನೆಯಾಗುತ್ತದೆಂಬುದನ್ನು ತಾವೇ ಹೇಳಬೇಕು. ತಾವು ಅನೇಕ ವರ್ಷಗಳ ಅನುಭವವುಳ್ಳವರಾಗಿದ್ದೀರಿ. ಈಚೆಗೆ ಇಂಡಿಯಾ ಸರ್ಕಾರದವರು ಆಹಾರ ಸರಬರಾಯಿ ಸಂಬಂಧವಾಗಿ ಕೊಡತಕ್ಕ ಸಹಾಯ ದ್ರವ್ಯವನ್ನು ಸಿಟಿಗಳಿಗೆ ಮಾತ್ರ ಕೊಡುತ್ತೇವೆ, ಬೇರೆ ಕಡೆಗಳಿಗೆ ಕೊಡುವುದಿಲ್ಲವೆಂದು ಹೇಳಿದ್ದಾರೆ. ಹಣವನ್ನುಳಿಸಲು ಅವರು ಈ ರೀತಿ ಮಾಡಿದ್ದಾರೆ. 1952ನೆಯ ಇಸವಿಯಿಂದ ನಾವು ಧಾನ್ಯಗಳನ್ನು ಹೊರಗಿನಿಂದ ತರಿಸುವುದಿಲ್ಲ ಸ್ವಪರಿಪೂರ್ಣತೆ ಇರಬೇಕು ಎಂದು ಹೇಳುತ್ತಾರೆ. ಈ ಹೊತ್ತು ಪಂಡಿತ ನೆಹರೂರವರು ಇನ್ನು ಐದಾರು ವರ್ಷಗಳ ವರೆಗೆ ಈ ಆಹಾರ ಕೊರತೆಯನ್ನು ನಮ್ಮ ದೇಶದಲ್ಲಿ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ, ಹೊರದೇಶಗಳಿಂದ ಯಾರು ಕೊಟ್ಟರೂ ಧಾನ್ಯಗಳನ್ನು ತರಿಸಲು ಸಿದ್ಧವಾಗಿದ್ದೇವೆಂದು ಹೇಳಿದ್ದಾರೆ. ಒಂದು ಕಡೆ 1952ನೆಯ ಇಸವಿಯ ಹೊತ್ತಿಗೆ ಸ್ವಪರಿಪೂರ್ಣತೆ ಇರಬೇಕೆಂದು ಹೇಳುತ್ತಾರೆ, ಇನ್ನೊಂದುಕಡೆ ಬೇರೆರೀತಿ ಹೇಳುತ್ತಾರೆ. ನಮ್ಮ ಹಾರೈಕೆಗಳನ್ನೆಲ್ಲಾ ಭಗವಂತನು ನಡೆಸುವುದಾಗಿದ್ದರೆ ನಮಗೆ ಇಷ್ಟು ಕಷ್ಟವೇ ಇರುತ್ತಿರಲಿಲ್ಲ ! ಯಾವ ಕಾರಣದಿಂದ ನಮಗೆ ಆಹಾರದ ಕೊರತೆಯುಂಟಾಗಿದೆ ಎಂಬುದನ್ನು ಕಂಡುಹಿಡಿಯದೆ ಸುಮ್ಮನೆ ಕಾಗದದ ಮೇಲೋ ಅಥವಾ ಅನುಭವವಿಲ್ಲದ ಜನರಿಂದಲೋ ಪ್ರಚಾರ ಮಾಡಿಸಿದರೆ ಅದರಿಂದ ಗುರಿ ಮುಟ್ಟುವುದಕ್ಕಾಗುವುದಿಲ್ಲ. ಬೇರೆ ಉದ್ಯೋಗಗಳನ್ನು ಮಾಡತಕ್ಕವರಿಗೆ ಯಾವ ರೀತಿ ಸಂಪಾದನೆ ಇದೆಯೋ ಅಷ್ಟೇ ಸಂಪಾದನೆ ನಮ್ಮ ರೈತರಿಗೂ ಬರುವಂತೆ ಆಗಬೇಕು. ಕಾರ್ಖಾನೆ ಕೆಲಸದಿಂದ ಮತ್ತು ಬೇರೆ ಬೆಳೆಗಳನ್ನು ಬೆಳೆಯುವುದರಿಂದ ಎಷ್ಟು ಹಣ ಬರುತ್ತದೆಯೋ ಅಷ್ಟು ಹಣ, ಧಾನ್ಯವ್ಯವಸಾಯ ಮಾಡುವವನಿಗೂ ಬರಬೇಕು. ಅಲ್ಲದೆ ಬೆಳೆ ಬೆಳೆಯುವವರಿಗೆ ಯಾವ ರೀತಿಯಲ್ಲಿಯೂ ತೊಂದರೆ ಇರಬಾರದು. ಈಗ ಬೆಳೆಯನ್ನು ಕೊಯ್ಯಬೇಕಾದರೆ ಅಮಲ್ದಾರರ ಅನುಮತಿ ಪಡೆಯಬೇಕು. ಅದನ್ನು ಮನೆಗೆ ತರಬೇಕಾದರೆ ಅನುಮತಿ ಪಡೆಯಬೇಕು. ಸರ್ಕಾರದವರು ಕೇಳಿದಷ್ಟು ಕೊಡಬೇಕು. ರೈತನ ಮನೆಯಲ್ಲಿ ಅಕ್ಕಿ ಇಲ್ಲದಿದ್ದರೂ ಕೂಡ ಒಂದು ಪಾವು ಕೊಡದೆ ಅವನಿಂದ ಇತರ ಧಾನ್ಯ ವಸೂಲು ಮಾಡಿ ತಂದರೆ ಅವನಿಗೆ ಸಂಕಟವಾಗುವುದಿಲ್ಲವೆ ? ರೈತರು ತಮ್ಮ ಅನುಕೂಲಕ್ಕೆ ತಕ್ಕಂತೆ ತಮಗೆ ಲಾಭದಾಯಕವಾದ ಯಾವ ಬೆಳೆಯನ್ನಾದರೂ ಬೆಳೆಯುವ ಹಾಗಿಲ್ಲ. ಹತ್ತಿ ಬೆಳೆಯನ್ನು ಬೆಳೆಯಬಾರದು, ಕಡಲೆಕಾಯಿ ಬೆಳೆಯಬಾರದು, ಎಂದು ಹೇಳುತ್ತಾರೆ. ಏಕೆ ಬೆಳೆಯಬಾರದು ! ರೈತರ ಸ್ಥಿತಿಯನ್ನು ನೋಡಿ ನಾನು ಮಾತನಾಡುತ್ತಿದ್ದೇನೆ. ಈಗ ಕಡಲೆಕಾಯಿ ಬೆಳೆಯುವವನಿಗೆ ಎಕರೆಗೆ ಇನ್ನೂರು ರೂಪಾಯಿ ಸಿಕ್ಕಿ, ರಾಗಿ ಬೆಳೆಯುವವನಿಗೆ ಐವತ್ತು ರೂಪಾಯಿ ಮಾತ್ರ ಬಂದರೆ ಏಕೆ ರಾಗಿ ಬೆಳೆಯ ಬೇಕು ? ಅವನ ಉಪಯೋಗಕ್ಕೆ ಬೇಕಾದಷ್ಟು ಮಾತ್ರ ರಾಗಿ ಬೆಳೆದು ಮಿಕ್ಕ ಜಮೀನಿನಲ್ಲಿ ಕಡಲೆಕಾಯಿ ಬೆಳೆಯುತ್ತಾನೆ. ಯಾವ ಮನುಷ್ಯನಿಗೆ ತಾನೆ ತಾನೂ ಇತರರಂತೆ ಹಣ ಸಂಪಾದನೆಮಾಡಿ ಸುಖವಾಗಿರಬೇಕೆಂಬ ಆಸೆ ಇರುವುದಿಲ್ಲ! ದೇಶಕ್ಕೆ ಆಧಾರವಾಗಿರತಕ್ಕ ರೈತನನ್ನು ಎಷ್ಟು ದಿವಸ ಈ ರೀತಿ ತುಳಿದು ತೊಂದರೆಗೀಡುಮಾಡುತ್ತಾರೆಯೋ ಅಷ್ಟು ದಿನವೂ ಆಹಾರ ಕೊರತೆ ನಿವಾರಣೆಯಾಗುವುದಿಲ್ಲ. ಬಾಯಿ ಇರತಕ್ಕವರು, ಗಲಾಟೆ ಮಾಡತಕ್ಕ ಬಂಡವಾಳಗಾರರು, ಇಂಥವರ ಅಧೀನವಾಗಿ ಸರ್ಕಾರವನ್ನು ನಡೆಸಿದರೆ ಎಂದಾದರೂ ಬೇಗೆ ದೊಡ್ಡದಾಗಿ ದೇಶದಲ್ಲಿ ಹರಡಿ ಎಲ್ಲರನ್ನೂ ಸುಟ್ಟುಹಾಕುತ್ತದೆಂದು ನಾನು ಹೇಳಲೇಬೇಕಾಗಿದೆ. ಆದುದರಿಂದ ನಮ್ಮ ಖಚಿತವಾದ ಅಭಿಪ್ರಾಯವನ್ನು ಈಗಲಾದರೂ ಸರ್ಕಾರದವರು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕು. ಅಲ್ಲದೆ ಇಂಡಿಯಾ ಸರ್ಕಾರದ ಗಮನಕ್ಕೂ ತರಬೇಕು. ಈ ವಿಚಾರದಲ್ಲಿ ಭಾರತ ಸರ್ಕಾರದ ಈಗಿನ ಆಹಾರ ಮಂತ್ರಿಗಳೂ ಕೂಡ ತಮ್ಮ ಅಭಿಪ್ರಾಯವನ್ನು ಈಗಾಗಲೇ ಕೊಟ್ಟಿದ್ದಾರೆ. ಆಹಾರ ಹತೋಟಿಯನ್ನು ಮುಂದುವರಿಸಿಕೊಂಡು ಹೋಗುವುದರಿಂದ ಭಾರತ ಸರ್ಕಾರಕ್ಕೆ ಪ್ರತಿ ವರ್ಷವೂ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತದೆಂದು ಅವರು ಹೇಳಿದ್ದಾರೆ. ಹೀಗೆ ಆಹಾರಕ್ಕಾಗಿ ಸಹಾಯ ದ್ರವ್ಯವನ್ನು ಕೊಡಲು ಎಷ್ಟು ಖರ್ಚು ಮಾಡುತ್ತಾರೋ ಅದರಲ್ಲಿ ಹತ್ತನೆಯ ಒಂದು ಭಾಗವನ್ನು ಕೂಡ ಆಹಾರ ಬೆಳೆಯಲು ಖರ್ಚು ಮಾಡುತ್ತಿಲ್ಲ. ಈಗೀಗ ಸ್ವಲ್ಪ ಸ್ವಲ್ಪ ಕೊಡುತ್ತಿದ್ದಾರೆ. ಮೊದಲಿನಿಂದಲೂ ಇಷ್ಟಾದರೂ ಕೊಡುತ್ತಾ ಬಂದಿದ್ದರೆ, ಇಷ್ಟು ಹೊತ್ತಿಗೆ ಸರಿಹೋಗುತ್ತಿತ್ತು. ಬೆಳೆಯುವವರಿಗೆ ಪ್ರೋತ್ಸಾಹ ಕೊಡುವ ವಿಚಾರದಲ್ಲಿ ಸರಿಯಾದ ನೀತಿಯನ್ನನುಸರಿಸಿದ್ದರೆ ಈಗ ನಮಗೆ ಇಷ್ಟು ಕಷ್ಟ ಬರುತ್ತಿರಲಿಲ್ಲ. ಶ್ರೀಮನ್ಮಹಾರಾಜರವರ ಭಾಷಣದಲ್ಲಿ ನಮ್ಮ

ಸರ್ಕಾರದಲ್ಲಿ ಯಾವ ವಿಧವಾದ ಪ್ರೋತ್ಸಾಹಕರವಾದ ನೀತಿಯೂ ನಮಗೆ ಕಂಡು ಬರಲಿಲ್ಲ. ದೇಶದಲ್ಲಿ ವ್ಯವಸಾಯ, ವಿದ್ಯಾಭ್ಯಾಸ, ಕೈಗಾರಿಕೆ ವಗೈರೆ ಯಾವುದೂ ಕೂಡ ನಾವು ಎಷ್ಟು ನಿರೀಕ್ಷಣೆ ಮಾಡಿದ್ದೆವೋ ಅಷ್ಟು ಸಮರ್ಪಕವಾಗಿ ನಡೆಯುತ್ತಿಲ್ಲ. ವಿದ್ಯಾಭ್ಯಾಸದ ವಿಚಾರವನ್ನು ತೆಗೆದುಕೊಂಡರೆ, ಹಿಂದೆ practical compulsory education ಎಂದು ಕೆಲವು ಕಡೆ ಜಾರಿಯಲ್ಲಿತ್ತು. ಕಾಂಗ್ರೆಸ್ಸಿನವರು ಕೂಡ ಇದು ಒಳ್ಳೆಯದೆಂದು ಹೇಳಿ ಒಪ್ಪಿದ್ದರು. ಈಗ ಅದನ್ನು ಕೂಡ ಕೆಲವು ಕಡೆ ರದ್ದು ಮಾಡಿದ್ದಾರೆ. ಇದುವರೆಗೆ ಯಾರಿಗೆ ವಿದ್ಯಾಭ್ಯಾಸವಿಲ್ಲವೋ ಅವರಿಗೆ ಮುಂದೆಯೂ ಇಲ್ಲವೇ ಇಲ್ಲ. ವಿದ್ಯಾಭ್ಯಾಸ ಪಡೆದಿರುವವರಿಗೆ ಮುಂದೆಯೂ ಉಂಟು. ಹೀಗಾಗಿದೆ, ಅವರು ಈಗ ಮಾಡಿರುವುದು. ಯಾರು ಯೋಗ್ಯರೋ, ಯಾರು ಪ್ರೋತ್ಸಾಹಕ್ಕರ್ಹರೋ ಅಂಥವರನ್ನು ಸರ್ಕಾರದವರು ಕೈಬಿಟ್ಟಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಇನ್ನೂ ಮಾತನಾಡುವುದಿದ್ದರೆ ಆ ಮೇಲೆ ಮಾತನಾಡಬಹುದು.

The House will now rise for lunch and meet again at four of the clock.

The Assembly adjourned for lunch at Thirty Minutes past Three of the Clock and re-assembled at Four of the Clock, Mr Speaker the Hon'ble Sri V. Venkatappa in the Chair.

ಶ್ರೀ ಬಿ. ಹುಚ್ಚೇಗೌಡರು (ಮುಂದುವರೆದುದು).—ಸ್ವಾಮಿ, ಇಂಟೆಗ್ರೇಷನ್ ವಿಚಾರದಲ್ಲಿ ಇಂಡಿಯಾ ದೇಶದಲ್ಲೆಲ್ಲಾ ಒಂದೇ ಪ್ರಭುತ್ವ ಆಗಬೇಕು ಮತ್ತು ಯೂನಿಯನ್ ಭದ್ರತೆಗೆ ಯಾವ ತೊಡಕೂ ಇರಬಾರದು ಎನ್ನುವುದನ್ನು ನಾನೂ ಕೂಡ ಸಮರ್ಥಿಸುವವನಾಗಿದ್ದೇನೆ. ಆದರೆ ಈ ರೀತಿ ಸಮ್ಮೇಳನದಲ್ಲಿ ಎಷ್ಟೆಷ್ಟು ಅನುಕೂಲ ಮತ್ತು ಅನಾನುಕೂಲಗಳಿವೆ ಎಂಬುದನ್ನು ಅದರಲ್ಲೂ ಕೂಡ ಮೈಸೂರಿಗೆ ಆಗಿರತಕ್ಕ ಅನ್ಯಾಯವನ್ನೂ ಅಷ್ಟಿಷ್ಟೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ದಿನ ಮೈಸೂರು ಎಷ್ಟು ಪ್ರತಿಭಾಶಾಲಿಯಾಗಿ ಆಡಳಿತ ದಕ್ಷತೆಯಿಂದ ನಡೆದು ಮಾದರೀ ಸಂಸ್ಥಾನವಾಗಿದೆ ಎನ್ನುವುದು ಇಡೀ ಇಂಡಿಯಾ ದೇಶದಲ್ಲಿ ಗೊತ್ತಿದೆ. ಇದನ್ನು ಇತರ ದೇಶಗಳೊಡನೆ ಸೇರಿಸಿದುದರಿಂದ ನಮಗೆ ಆರ್ಥಿಕವಾಗಿಯೂ ಮತ್ತು ಆಡಳಿತದಲ್ಲೂ ಕೂಡ ಎಷ್ಟು ಮಟ್ಟಿಗೆ ಅನಾನುಕೂಲವಾಯಿತು ಎಂಬುದು ಪ್ರತಿಯೊಬ್ಬರ ಗಮನಕ್ಕೂ ಬಂದಿದೆ. ಈಗಾಗಲೇ ಜನಾಬ್ ಇಮಾಂರವರು ಮಿಲಿಟರಿ ಸರ್ವೀಸನ್ನು ಇಂಟೆಗ್ರೇಟ್ ಮಾಡಿದ್ದರಿಂದ ಎಷ್ಟು ಅನ್ಯಾಯವಾಗಿದೆ ಎಂಬುದನ್ನು ಹೇಳಿದ್ದಾರೆ. ಈ ಬಾಬಿಗೆ ಕೊಡತಕ್ಕ 80 ಲಕ್ಷ ರೂಪಾಯಿಗಳನ್ನು ನಮ್ಮ ಮೇಲೆ ಹೊರಿಸಿದ್ದಾರೆ. ಈ ಖರ್ಚಿನಲ್ಲಿ ಸುಮಾರು ⅔ ಭಾಗ ಖೋತಾ ಆಯಿತು. ಆ ದುಡ್ಡು ಇಂಡಿಯಾ ಸರ್ಕಾರದವರಿಗೆ ಉಳಿಯುತ್ತದೆ. ಇದು ಒಂದು ಆಯಿತು, ಮುಂದೆ ಈ ⅔ ಭಾಗ ತೆಗೆಯುವುದರಲ್ಲಿ ಯಾವ ರೀತಿ ಅದನ್ನು ಆಚರಣೆಗೆ ತರುತ್ತಾರೆ ಎಂಬುದನ್ನು ನೋಡಿದರೆ ಬಹಳ ಸಂಕಟವಾಗುತ್ತದೆ. ರಿಟೈರ್‌ಮೆಂಟ್ ಸಂದರ್ಭದಲ್ಲಿ ಸಾಮಾನ್ಯವಾಗಿ ಇಲ್ಲಿರತಕ್ಕ ಅಧಿಕಾರಿಗಳನ್ನು ಅವರು ರಿಟೈರ್ ಆದ ಹಾಗೆ absorb. ಮಾಡಿಕೊಂಡು ಖಾಲಬದ್ಧ ಜಾಗಕ್ಕೆ ಭರ್ತಿ ಮಾಡಬೇಕಾದ್ದು ಒಂದು ಅನುಕೂಲವಾದ ವ್ಯವಸ್ಥೆ. ಅದನ್ನು ಬಿಟ್ಟುಬಿಟ್ಟರು. ಇಲ್ಲಿ ಏನೋ ಒಂದು ಸಮಿತಿ ಮಾಡಿ ಅದರೊಳಗೆ ಯಾವುದೋ ಒಂದು ನೀತಿ ಇಟ್ಟುಕೊಂಡು ಎಲ್ಲರನ್ನೂ ಡಿಸ್‌ಕ್ವಾಲಿಫೈ ಮಾಡಿಬಿಟ್ಟಿದ್ದಾರೆ. ಅಲ್ಲದೆ ಇಂಡಿಯಾ ಸರ್ಕಾರದಲ್ಲಿ ಹಂಗಾಮಿ ಅಧಿಕಾರಿಗಳು ಇದ್ದರೆ ಅವರಿಗೆ ಬದಲಾಗಿ ಇಲ್ಲಿ ಖಾಯಂ ಆಗಿದ್ದ ಶಿಬ್ಬಂದಿಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಇಂಡಿಯಾ ದೇಶದ ಸೈನ್ಯದಲ್ಲಿ ಹಂಗಾಮಿ ಶಿಬ್ಬಂದಿಗಳು ಸಾವಿರಾರು ಆಫೀಸರುಗಳು ಇದ್ದಾರೆ. ಅವರನ್ನು ಖಾಯಂ ಮಾಡಿಕೊಳ್ಳುತ್ತಾ, ಇಲ್ಲಿಗೆ ತಂದು ಹಾಕಿದ್ದಾರೆ. ಈಗಾಗಲೇ ನಮ್ಮ ಮುಖ್ಯ ಮಂತ್ರಿಗಳೂ ಕೂಡ ಹೇಳಿದ್ದಾರೆ, ನಮ್ಮ ಸೈನ್ಯ ಎಲ್ಲಾ ಕಡೆಯೂ ಚೆನ್ನಾಗಿ ಕೆಲಸ ಮಾಡಿದೆ ಎಂದು ಇಂಡಿಯಾ ದೇಶದ ಪರವಾಗಿ ಕಾಶ್ಮೀರ ಮತ್ತು ಹೈದರಾಬಾದುಗಳಲ್ಲಿ ಶ್ರಮಪಟ್ಟು ನಮ್ಮ ಸೈನಿಕರು ಕೆಲಸ ಮಾಡಿದ್ದಾರೆ, ಅದಕ್ಕೆ ತಕ್ಕ ಗೌರವವನ್ನು ಸಲ್ಲಿಸಿದ್ದಾರೆ ಎಂಬ ವಿಷಯ ಈ ಸಭೆಯಲ್ಲೂ ಬಂದಿದೆ. ಅಂಥಾ ದಕ್ಷತೆಯಿಂದ ಕೂಡಿದ ಅಧಿಕಾರಿಗಳು ಏಕಾಏಕೀ ಮನೆಗೆ ಹೋಗಬೇಕೆಂದರೆ ಏನು ಕಾರಣ ಎಂಬುದನ್ನು ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ. ಒಟ್ಟಿನಲ್ಲಿ ದಕ್ಷಿಣ ದೇಶದವರಿಗೆ ಅಲ್ಲಿ ಯಾವ ಮಾನ್ಯತೆಯೂ ದೊರೆಯುತ್ತಿಲ್ಲ ಎಂಬ ಒಂದು ಆಕ್ಷೇಪಣೆ ಇದೆ. ನಾವು ಇಂಡಿಯಾದೇಶದ ಆಡಳಿತದಲ್ಲಿ ಸೇರಿಕೊಂಡಿದ್ದರೂ ಕೂಡ ಅವರು ನಮ್ಮನ್ನು ಬೇರೆ ತರಹ ನೋಡುವುದಾದರೆ ಅದನ್ನು ನಾವು ಎಷ್ಟು ದಿನ ಸುಮ್ಮನೆ ಸಹಿಸಿಕೊಂಡಿರುವುದಕ್ಕೆ ಸಾಧ್ಯ ಎನ್ನುವುದನ್ನೂ ಸಭೆಯ ಅವಗಾಹನೆಗೆ ತರಬಚ್ಛಿಸುತ್ತೇನೆ. ಅದರಂತೆಯೇ ಈ ಅಡ್ಮಿನಿಸ್ಟ್ರೇಟಿವ್ ಸರ್ವೀಸ್ ಕೂಡ ಈಗ ಏನಾಗಿದೆಯೆಂದರೆ ಉನ್ನತ ದರ್ಜೆಯಲ್ಲಿರತಕ್ಕ ಸುಮಾರು 36 ಜನರಲ್ಲಿ 28 ಜನರನ್ನು ಮಾತ್ರ ಅವರು ತೆಗೆದುಕೊಳ್ಳುತ್ತಾರೆ. ಉಳಿದ 8 ಅಧಿಕಾರಿಗಳನ್ನು ಸಂಸ್ಥಾನದ ಕೆಳದರ್ಜೆಯ ಅಧಿಕಾರಿಗಳಿಂದ ಭರ್ತಿಮಾಡಿಕೊಳ್ಳುತ್ತಾರೆ. ಹೀಗೆ ಮಾಡಿದರೆ ಕೆಳದರ್ಜೆಯವರ ಗತಿ ಮುಂದೆ ಯಾವ ರೀತಿ ಪರಿಣಮಿಸಬಹುದು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಹಿಂದಿನಿಂದಲೂ ಕೂಡ ಮೈಸೂರಿನವರು ದಕ್ಷತೆಯಿಂದ ಆಡಳಿತ ನಡೆಸುತ್ತಿದ್ದಾರೆ. ಇವತ್ತಿನ ದಿನ ದೆಹಲಿ ಸೆಕ್ರೆಟೇರಿಯಟ್‌ನಲ್ಲೂ ಕೂಡ ಇಷ್ಟು ದಕ್ಷತೆಯಿಂದ ಕೂಡಿರತಕ್ಕ ಅಧಿಕಾರಿಗಳಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಅಂಥವರು ಇರುವಾಗ ಅವರ ಮುಂದಿನ ಅಭಿವೃದ್ಧಿಯನ್ನು ಪೂರ್ಣವಾಗಿ ತೊಡೆದುಹಾಕುವುದೆಂದರೆ ದೇಶದ ಅಧಿಕಾರಿಗಳಲ್ಲಿ ಎಷ್ಟರ ಮಟ್ಟಿಗೆ ಅತೃಪ್ತಿ, ಅಸಮಾಧಾನ ಉಂಟಾಗುತ್ತದೆ ಎಂಬುದನ್ನು ಈಗಾಗಲೇ ಅನೇಕವೇಳೆ ಸರ್ಕಾರದವರ ಗಮನಕ್ಕೆ ತಂದಿದ್ದೇವೆ. ಈ ಇಂಟೆಗ್ರೇಷನ್ ವಿಚಾರದಲ್ಲಿ ಅಧಿಕಾರಿಗಳ ಮುಂದಿನ ಆಗುಹೋಗುಗಳನ್ನು ಸರಿಯಾಗಿ ಗಮನಿಸದೆ, ಒಂದು ವಿಚಾರವನ್ನೂ ಚರ್ಚೆಮಾಡದೆ, ಅದಕ್ಕೆ ಒಪ್ಪಿ ಅಧಿಕಾರಿಗಳನ್ನೂ ಆಗಲೇ ಹೇಳಿದಹಾಗೆ ಸ್ಕ್ರೀನಿಂಗ್ ಅಂತ ಮಾಡಿ, ಎಂಥ ದಕ್ಷರನ್ನು ಕೂಡ ಅವರು ತಿರಸ್ಕಾರಮಾಡುವ ಪರಿಸ್ಥಿತಿ ಬಂದಿದೆ. ಇದು ಬರೀ ಅಧಿಕಾರಿಗಳಿಗೆ ಮಾತ್ರವಲ್ಲ, ನಮ್ಮ ಪ್ರಜಾಮುಖಂಡರಿಗೂ ಮತ್ತು ಮೈಸೂರಿಗೂ ಅವಮಾನಕರವಾದ ವಿಷಯ. ಇದಕ್ಕೆ ಅದಷ್ಟು ಜಾಗ್ರತೆ ಸರ್ಕಾರದವರು ಗಮನಕೊಡುತ್ತಾರೆಂದು ಆ ಭಾಷಣದಲ್ಲಿ ಹೇಳಿದೆ. ಅವರು ನಮ್ಮೊಡನೆ ಸಮಾಲೋಚನೆಮಾಡುತ್ತಾರೆ ಎಂದರೆ ಅದರಿಂದ ನಮಗೆ ಉಪಯೋಗವಾದ ಹಾಗಾಯಿತ ? ನಮ್ಮ ಅಧಿಕಾರಿಗಳನ್ನು ಇಂಡಿಯಾ

(ಶ್ರೀ ಬಿ. ಹುಚ್ಚೇಗೌಡರು).—

ದೇಶದ ಅಧಿಕಾರಿಗಳ ದರ್ಜೆಗಳಿಗನುಸಾರವಾಗಿ ಅವರೊಡನೆ ಮಿಳನಮಾಡುವುದಾದರೆ ತಂಟೆಯೇ ಇಲ್ಲ. ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದರೆ ಅದು ಈ ಸಮ್ಮೇಳನಕ್ಕೆ ವಿರೋಧ ಎಂದು ಹೇಳುತ್ತಾರೆ. ಅದು ಬಹಳ ಅನುಚಿತವಾದದ್ದು ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ನಾವು ಯಾವುದರಲ್ಲೂ ಕೂಡ ಇಂಟಿಗ್ರೇಷನ್‌ಗೆ ವಿರೋಧವಾಗಿಲ್ಲ. ಆದರೆ ಅದು ಆಗಬೇಕಾದರೆ ಸರ್ವರಿಗೂ ಸಮಾಧಾನ, ತೃಪ್ತಿಯುಂಟಾಗುವ ರೀತಿಯಲ್ಲಿ ಮಾಡಬೇಕಾದ್ದು ನಮ್ಮ ಸರ್ಕಾರದವರ ಕರ್ತವ್ಯವಾಗಿದೆ. ಇದಲ್ಲದೆ ಈ ರೀತಿ ಇಂಟಿಗ್ರೇಷನ್ ಮಾಡಬೇಕಾದರೆ ಈ ಸಭೆಯ ಒಪ್ಪಿಗೆ ತೆಗೆದುಕೊಳ್ಳಲಿಲ್ಲ. ಮತ್ತು ಒಂದು ಪ್ರವೀಣರ ಸಮಿತಿಯನ್ನು ನೇಮಕಮಾಡಿ ಅಧಿಕಾರಿಗಳ ಅಭಿಪ್ರಾಯ ಕೇಳಿ, ನಿಮಗೆ ಯಾವ ರೀತಿ ಅನುಕೂಲಮಾಡಿ ಕೊಡಬೇಕು, ಅದರಿಂದ ನಿಮಗೆ ಯಾವ ರೀತಿ ಪರಿಣಾಮ ಉಂಟಾಗಬಹುದು, ತೊಂದರೆ ಸಂಭವಿಸಬಹುದು ಎಂಬುದನ್ನು ಕೂಡ ತಿಳಿದುಕೊಳ್ಳಲಿಲ್ಲ. ಏಕಾಏಕಿ ಈ ರೀತಿ ಒಪ್ಪಿಬಿಟ್ಟಿರುವುದು ಈಗ ಸರಿಯಾಗಿ ಕೆಲಸಮಾಡತಕ್ಕ ಅಧಿಕಾರಿಗಳಿಗೆ ಅವರ ಮನಸ್ಸಿನಲ್ಲಿ ಒಂದು ತರಹ ಜಿಗುಪ್ಸೆಯಾಗಿ, ಅದರಿಂದ ದೇಶದಲ್ಲಿ ಆಡಳಿತ ವ್ಯವಸ್ಥೆ, ಅವ್ಯವಸ್ಥೆಗೆ ಬರುತ್ತದೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ಒತ್ತಾಯಪೂರ್ವಕವಾಗಿ ತರಬಿಚ್ಛಿಸುತ್ತೇನೆ.

ಇದೂ ಅಲ್ಲದೆ, ಆರ್ಥಿಕ ವಿಲೀನೀಕರಣದ ವಿಷಯವನ್ನು ನೋಡಿ! ಇದು ಸರ್ವನಾಶದವರೆಗೂ ಪರಿಣಮಿಸುತ್ತದೆಂದು ನನ್ನ ಭಾವನೆ. ಒಂದು ಸಂದರ್ಭ ತೆಗೆದುಕೊಳ್ಳೋಣ. ಆರ್ಥಿಕ ಸಮ್ಮೇಳನ ಏರ್ಪಡಿಸಿದಾಗ ನಮ್ಮ ರೈಲ್ವೆಯನ್ನು ಅವರು ವಹಿಸಿಕೊಳ್ಳಬೇಕಾದರೆ ಬುಕ್‌ವ್ಯಾಲ್ಯು ಮೇಲೆ, ಅದರಲ್ಲೂ ಡಿಪ್ರಿಸಿಯೇಷನ್ ಫಂಡು ಸೇರಿಸಿಕೊಂಡು ತೆಗೆದುಕೊಂಡರು. ಕನ್ನಂಬಾಡಿ ವಿಚಾರ ಬಂದಾಗ್ಗೆ, ಅದು ಲಾಭದಾಯಕವಲ್ಲ ಎಂದು 507 ಲಕ್ಷ ರೂಪಾಯಿ ಹಾಕುವುದಕ್ಕೆ ಬದಲಾಗಿ 150 ಲಕ್ಷ ರೂಪಾಯಿ ಹಾಕಿ, ಬರಿ 3—4 ಲಕ್ಷ ರೂಪಾಯಿ ಉತ್ಪನ್ನ ಇದೆ ಎಂದು ಅಭಿಪ್ರಾಯಪಟ್ಟರು. ಅದೇರೀತಿ ರೈಲ್ವೆಯನ್ನೂ ಬೆಲೆ ಕಟ್ಟುತ್ತಿದ್ದಾರೆಯೆ? ಇವತ್ತಿನ ದಿವಸ ಹಾಗೆ ಬೆಲೆ ಕಟ್ಟುವುದಾದರೆ ಇದಕ್ಕೆ ಏನಿಲ್ಲವೆಂದರೂ 30-35 ಕೋಟಿ ರೂಪಾಯಿಗಳಾಗುತ್ತೆ. ಈ ಪ್ರಕಾರ ಅವರು ತಮಗೆ ಯಾವುದು ಅನುಕೂಲವಾಗಿದೆಯೋ ಅಲ್ಲಿ ಪುಸ್ತಕದ ಲೆಕ್ಕಗಳ ಪ್ರಕಾರ ಬೆಲೆ ಕಟ್ಟುವುದು, ಮಿಕ್ಕ ಸಂದರ್ಭಗಳಲ್ಲಿ ಬೇರೆ ರೀತಿ ಮಾಡುವುದು ಸರಿಯಲ್ಲ.

Sri G. A. ACHARYA.—They have assessed at Rs. 111 lakhs while the actual assets according to the books are some crores. It is for the purpose of finding out the yield.

ಶ್ರೀ ಬಿ. ಹುಚ್ಚೇಗೌಡರು.—ಅದೇ ಅಂದಾಜಿನ ಮೇರೆಗೆ ಅವರು ರೈಲ್ವೆಗೂ ಬೆಲೆ ಕಟ್ಟಿದ್ದರೆ ರೈಲ್ವೆಗಳಿಂದ ನಮಗೆ ಎಷ್ಟೋ ಕೋಟಿ ರೂಪಾಯಿಗಳು ಬರುತ್ತಿತ್ತು.

Sri G. A. ACHARYA.—Who has purchased? Has there been any purchase between the Centre and the Mysore Government? No one has purchased it.

Sri M. V. KRISHNAPPA.—We have sold our Railways.

Sri G. A. ACHARYA.—It is not true.

ಶ್ರೀ ಬಿ. ಹುಚ್ಚೇಗೌಡರು.—ನಮ್ಮ ದೇಶದ ಪ್ರಗತಿಯನ್ನು ಸ್ವಲ್ಪ ಕಾಲ ತಡೆಗಟ್ಟಿ ಇಂಥಾ ಕೈಗಾರಿಕೆಯಿಂದ ಮುಂದೆ ನಮಗೆ ಹೆಚ್ಚಿನ ಅನುಕೂಲವಾಗುತ್ತದೆಂದು ಭಾವಿಸಿ ಹೊಟ್ಟೆಬಟ್ಟೆ ಕಟ್ಟಿ ಈ ರೈಲ್ವೆಯನ್ನೂ ಮತ್ತು ಇತರ ಕೆಲವು ಕೈಗಾರಿಕೆಗಳನ್ನೂ ಅಭಿವೃದ್ಧಿಗೆ ತಂದೆವು. ಆದರೆ, ಇಂದು ಅವೆಲ್ಲಾ ಕೇಂದ್ರಕ್ಕೆ ಹೊರಟುಹೋದುವು. ಅದಕ್ಕೆ ಖರ್ಚುಮಾಡಿದಂಥ ಹಣವನ್ನೇ ಎಲೆಕ್ಟ್ರಿಸಿಟಿ ಮುಂತಾದ ಬೇರಾವ ಕೈಗಾರಿಕೆಗಳಿಗಾದರೂ ಉಪಯೋಗಿಸಿ ಅವುಗಳನ್ನು ಮುಂದುವರಿಸಿದ್ದರೆ ನಮ್ಮ ದೇಶದ ಆರ್ಥಿಕಸ್ಥಿತಿ ಇನ್ನೂ ಎಷ್ಟೋ ಉತ್ತಮಗೊಳ್ಳುತ್ತಿರಲಿಲ್ಲವೆ! ನಮಗೆ ಹೆಚ್ಚಿಗೆ ಆದಾಯಬರುವ ಬಾಬುಗಳನ್ನೆಲ್ಲಾ ಕೇಂದ್ರದವರು ವಹಿಸಿಕೊಂಡುಬಿಟ್ಟರು. ಅದಕ್ಕೆ ಬೆಲೆಕಟ್ಟಿರುವುದಾದರೂ 1946-47ನೇ ಇಸವಿಯ ದರವಲ್ಲ. ಅದರಂತೆಯೇ ನಮಗೆ ಪರಿಹಾರದ್ರವ್ಯ ಕೊಡುತ್ತಿರುವುದು. ಹೀಗಾಗಿ, ಈ ಆರ್ಥಿಕ ವಿಲೀನೀಕರಣಕ್ಕೆ ಮುಂಚೆ, ನಮಗೆ ಏನೇನು ಅನುಕೂಲಗಳಿತ್ತೋ ಅವೆಲ್ಲಾ ಹೋಗಿ ನಮಗೆ ಅದಕ್ಕೆ ಬದಲಾಗಿ ಬರುವ ಪರಿಹಾರವೂ ಕಡಿಮೆಯಾಯಿತು. ಆದಾಯ ತೆರಿಗೆ ಬಾಬು ನೋಡಿ: ಇಂದು ಅದರ ದರ ಎಷ್ಟು ಹೆಚ್ಚುಮಾಡಿದ್ದಾರೆ? ಅದರಿಂದ ಹಿಂದಿಗಿಂತ ಎಷ್ಟು ಹೆಚ್ಚಿಗೆ ಬರುವುದಾಗಿದೆ! ಇನ್ನು ಇದರ ದರವನ್ನು ಕೇಂದ್ರದಲ್ಲಿರುವ ದರಕ್ಕೇ ಏರಿಸಿದರೆ ಇನ್ನೂ ಎಷ್ಟಾಗುತ್ತದೆ ನೋಡಿ. ಹೀಗಿದ್ದರೂ, ನಾವು ಕೊಟ್ಟಿರುವ ಇಲಾಖೆಗಳಲ್ಲಿ ಖರ್ಚನ್ನೂ ಕೂಡ ತೆಗೆದುಹಾಕಿ ಮಿಕ್ಕ ಹಣವನ್ನು ಮಾತ್ರ ಕೊಟ್ಟರು. ಮುಂದೆ ಆ ಬಾಬುಗಳನ್ನು ರೂಢಿಸಿದ ಮೇಲೆ ಎಷ್ಟು ಹೆಚ್ಚಿಗೆ ಬರಬಹುದೆಂಬುದನ್ನು ಲೆಕ್ಕಕ್ಕೇ ತೆಗೆದುಕೊಳ್ಳಲಿಲ್ಲ. ನಮ್ಮಿಂದ ತೆಗೆದುಕೊಂಡ ಮೇಲೆ ಈಗಾಗಲೇ ಅವರು ಒಂದಕ್ಕೆರಡರಷ್ಟು ಹೆಚ್ಚಿಗೆ ಆದಾಯ ತೆರಿಗೆ ತೆಗೆದುಕೊಳ್ಳುತ್ತಿದ್ದಾರೆ. ನಮಗೆ ಮಾತ್ರ ಇದರಲ್ಲಿ ಯಾವ ಭಾಗವೂ ಇಲ್ಲ! ಇಂಥಾದ್ದನ್ನೆಲ್ಲಾ ಸಹಿಸಿಕೊಂಡು ನಮ್ಮ ಸರ್ಕಾರದವರು ಸುಮ್ಮನಿರುವುದು ಹೇಗೆ? ನಮ್ಮ ಅಭಿಪ್ರಾಯಗಳನ್ನು ಇನ್ನು ಹೇಗೆ ತಾನೆ ವ್ಯಕ್ತಪಡಿಸುವುದಕ್ಕೆ ಸಾಧ್ಯ? ಮತ್ತೆ ಮತ್ತೆ ಹೇಳಿದರೆ ಹಾಡಿದ್ದನ್ನೇ ಹಾಡಿದರೆಂದು ಹೇಳುತ್ತೀರಿ. ಆದರೆ ಹಾಗೆ ಹಾಡದೆ ವಿಧಿಯಿಲ್ಲ. ಅಂಚೆ ವಿಷಯ ತೆಗೆದುಕೊಳ್ಳಿ: ಒಬ್ಬ ಪಟೇಲನು ಸರ್ಕಾರಕ್ಕೆ ಒಂದು ರಿಪೋರ್ಟ್ ಕಳುಹಿಸಿಕೊಡಬೇಕಾದರೂ ದುಡ್ಡು ಕೊಡಬೇಕಾಗಿದೆ. ಈ ಇಲಾಖೆಯಿಂದ ನಮಗೆ ಕೊಡುತ್ತಿರುವುದಾದರೂ ಎಷ್ಟು? ಕೇವಲ 21 ಲಕ್ಷ ರೂಪಾಯಿ ಮಾತ್ರ. ಇದಕ್ಕೆ ಒಂದಕ್ಕೆ ನಾಲ್ಕರಷ್ಟು ಸರ್ಕಾರದವರೇ ಕೊಡಬೇಕಾಗಿದೆ. ಇದರಮೇಲೆ ಡಿಸ್ಟ್ರಿಕ್ಟ್ ಬೋರ್ಡು, ಲೋಕಲ್ ಬೋರ್ಡುಗಳಿಂದ ಖರ್ಚಾಗುವ ಹಣವು ಬೇರೆ ಇದೆ. ಇವನ್ನೆಲ್ಲಾ ನೋಡಿಕೊಂಡು ಅವರು ಪರಿಹಾರ ಕೊಡುತ್ತಾರೆಯೆ? ಇವುಗಳನ್ನೆಲ್ಲಾ ಪರಿಗಣನೆಗೆ ತೆಗೆದುಕೊಂಡರೆ ಅವರು ನಮ್ಮಿಂದ ತೆಗೆದುಕೊಳ್ಳದೆಯೇ ಇನ್ನೂ ಎಷ್ಟೋ ಕೊಡಬೇಕಾಗಿತ್ತು. ಅವರಿಂದ ನಮಗೆ ಬಂದಿರುವ ಸಹಾಯವಾದರೂ ಏನು? 75 ಲಕ್ಷ ರೂಪಾಯಿ ಗ್ರಾಂಟೆಂಬುದು ಒಂದು. ಇಷ್ಟಕ್ಕಾಗಿ ಈ ಭಾಷಣದಲ್ಲಿ ಅವರಿಗೆ ನಾವು ಹೊಗಳಬೇಕಾಗಿದೆಯೇ? ಇದಲ್ಲದೆ sea-borne trade ನಿಂದ ಕೂಡ ನಮಗೆ ಯಾವ ಭಾಗವೂ ಬರುತ್ತಿಲ್ಲ. ಈ ಇಲಾಖೆಗಳನ್ನು

ದೇಶದ ಹಿತದೃಷ್ಟಿಯಿಂದ ಅವರು ತೆಗೆದುಕೊಳ್ಳುವುದೇನೋ ವಿಹಿತವಾಗಿರಬಹುದು. ಆದರೂ ಅವರು ತೆಗೆದುಕೊಂಡ ಮೇಲೆ ಅದಕ್ಕೆ ತಕ್ಕಂತೆ ಪರಿಹಾರವನ್ನು ನಮಗೆ ಕೊಡಬೇಡವೇ? ಆದ್ದರಿಂದ ಮುಖ್ಯವಾಗಿ ವಿಲೀನೀಕರಣದ ವಿಷಯದಲ್ಲಿ ಈಗಲಾದರೂ ಮತ್ತೊಂದು ಸಾರಿ ಎಲ್ಲಾ ಅಂಶಗಳನ್ನೂ ಇಂಡಿಯಾ ಸರ್ಕಾರದವರ ಗಮನಕ್ಕೆ ತಂದು ನಮಗೆ ಸರಿಯಾಗಿ ಪ್ರತಿಫಲ ದೊರೆಯುವಂತೆ ಮಾಡಿಕೊಳ್ಳದೆ ಹೋದರೆ ನಮ್ಮ ದೇಶಕ್ಕೆ ಮೋಕ್ಷವಿಲ್ಲ. ಏಕೆಂದರೆ ಮುಂದೆ ಬರಬರುತ್ತಾ ಈಗ ಕೊಡುತ್ತಿರತಕ್ಕ ಕಂಟ್ರಿಬ್ಯೂಷನ್ ಇನ್ನೂ ಕಡಿಮೆಯಾಗುತ್ತಾ ಹೋಗುತ್ತದೆ. ಅಲ್ಲದೆ ಪೂರ್ತಿ ನಿಲ್ಲುತ್ತದೆ. ಆಗ್ಗೆ ನಮ್ಮ ಸ್ಥಿತಿ ಏನಾಗುತ್ತದೆಂಬುದನ್ನು ನೀವೇ ಯೋಚನೆಮಾಡಿ.

ಇನ್ನು ಪಾನನಿರೋಧದ ವಿಚಾರ...............

ಅಧ್ಯಕ್ಷರು.—ಪಾನನಿರೋಧದ ವಿಚಾರದಲ್ಲಿ ಈ ಭಾಷಣದಲ್ಲೇನು ಹೇಳಿದ್ದಾರೆ?

ಶ್ರೀ ಬಿ. ಹುಚ್ಚೇಗೌಡರು.—"To impove the happiness and standard of living of the people" ಎಂದು ಹೇಳಿದ್ದಾರೆ.

(ಸಭೆಯಲ್ಲಿ ನಗು!)

ಈ ರೀತಿಯಾಗಿ ಅಪಹಾಸ್ಯಮಾಡಬೇಕಾಗಿಲ್ಲ. ಕಾಂಗ್ರೆಸ್ಸಿನವರೇ ಅನೇಕಸಾರಿ ಹೇಳಿದ್ದಾರೆ, ದೇಶದಲ್ಲಿನ ಸಾಮಾನ್ಯ ಜನರಿಗೆ ಅನುಕೂಲವಾಗಬೇಕಾದರೆ ಪಾನನಿರೋಧವನ್ನು ಜಾರಿಗೆ ತರುವುದು ಬಹಳ ಮುಖ್ಯವೆಂದು ಹೇಳಿದ್ದಾರೆ. ಹಿಂದೆ ಸ್ವಾತಂತ್ರ್ಯದರೆ ಮಹಾತ್ಮಾ ಗಾಂಧಿಯವರ ಹೆಸರು ಹೇಳಿ ಅವರು ಹೇಳಿದಂತೆ ಪಾನನಿರೋಧ ಮುಂತಾದುವುಗಳನ್ನು ಜಾರಿಗೆ ತರಬೇಕೆಂದೂ, ಅವರು ಹಾಕಿಟ್ಟ ದಾರಿಬಿಟ್ಟು ಯಾರೂ ಹೋಗಕೂಡದೆಂದೂ ಹೇಳುತ್ತಿದ್ದವರು ಈಗ ಅವರು ತೋರಿಸಿದ ದಾರಿಯಲ್ಲಿ ಯಾವುದನ್ನಾದರೂ ಕೂಡ ಅನುಸರಿಸುತ್ತಿದ್ದೇವೆಂದು ಯಾರಾದರೂ ಎದೆ ಮುಟ್ಟಿ ಹೇಳಬಲ್ಲರೇ? ಈಗ ನಮ್ಮ ದೇಶದಲ್ಲಿ 5 ಡಿಸ್ಟ್ರಿಕ್ಟಿನಲ್ಲಿ ಪಾನನಿರೋಧವನ್ನು ಜಾರಿಗೆ ತಂದಿದೆಯೆಂದು ಹೇಳಿದರೂ ಕುಡಿತವೇನಾದರೂ ಕಡಿಮೆಯಾಗಿದೆಯೇ? ಏನೂ ಇಲ್ಲ! ಪರಿಣಾಮವೇನಾಗಿದೆಯೆಂದರೆ, ಈ ಊರಿನಲ್ಲಿ ಕುಡಿಯುವುದಕ್ಕೆ ಅವಕಾಶವಿದೆ, ಅದೇ ಪಕ್ಕದ ಊರಿನಲ್ಲಿ ಕುಡಿಯುವವನನ್ನು ಜೈಲಿಗೆ ಹಾಕುವುದಕ್ಕೆ ಅವಕಾಶವಾಗಿದೆ ಅಷ್ಟೆ. ಕಾನೂನು ಹೀಗೆ ವಿಚಿತ್ರವಾಗಿದೆ!

ಇನ್ನೊಂದು ವಿಷಯವೆಂದರೆ ಪಬ್ಲಿಕ್‌ಸರ್ವಿಸ್ ಕಮಿಷನ್ನು. ಇದರ ವಿಚಾರದಲ್ಲಿ 1949ರ ಷುರುವಿನಲ್ಲೇ ಭಾರತ ರಾಜ್ಯಾಂಗದ 348ನೆಯ ವಿಧಿಯ ಪ್ರಕಾರ ಒಂದು ಹುಕುಮನ್ನು ರಾಜಪ್ರಮುಖರು ಹೊರಡಿಸಿದರು. ಅದರ ಪ್ರಕಾರ "There shall be a public service Commission constituted for the State of Mysore; it shall come into force at once; and it shall consist of a Chairman and two Members" ಎಂದು ಹೇಳಿದ್ದಾರೆ. ಆದರೂ ಇಂಥಾ ಘೋಷಣೆಗಳಿಗೆ, ಇಂಥಾ ಸರ್ಕಾರಿ ಹುಕುಮುಗಳಿಗೆ ತಾವೇ ಏನು ಬೆಲೆ ಕೊಟ್ಟಿದ್ದೀರಿ? ಇಂಡಿಯಾ ರಾಜ್ಯಾಂಗ ಶಾಸನವನ್ನು ಸರ್ಕಾರದವರೇ ಬದಿಗಿಟ್ಟಿದ್ದಾರೆ!! ಇದನ್ನೆಷ್ಟು ದಿವಸ ಸಹಿಸಿಕೊಂಡಿರುವುದು? ಹೋದಸಾರಿ ಇದೇ ವಿಷಯವನ್ನು ಚರ್ಚೆಮಾಡಿದಾಗ್ಗೆ ಈ ಸಭೆ ಮತ್ತೆ ಸೇರುವುದರೊಳಗೆ ಇದನ್ನು ತೀರ್ಮಾನ ಮಾಡುತ್ತೇವೆಂದು ಮಾನ್ಯಮಂತ್ರಿಗಳು ಹೇಳಿದ್ದರು. ಹೀಗಿರುವಲ್ಲಿ, ಅಕ್ಟೋಬರಿನಲ್ಲಿ ಸೇರಬೇಕಾಗಿದ್ದ ಈ ಸಭೆ ಈಗ ಜನವರಿಯಲ್ಲಿ ಸೇರಿದರೂ ಇನ್ನೂ ಏನೂ ಮಾಡಿಲ್ಲ. ಏನಾದರೂ ತಮಗ ಬೇಕಾದವರಿಗೆ ಯಾರಿಗಾದರೂ ಉದ್ಯೋಗ ಕೊಡುವುದಕ್ಕೆಂದು ಇದನ್ನು ಮಿಗಿಸಿಕೊಂಡಿದ್ದಾರೋ, ಅಥವಾ ಉದಾಸೀನತೆಯಿಂದಲಾಗಲೀ ಕಾರ್ಯದಕ್ಷತೆಯಿಲ್ಲದೆಯಾಗಲೀ ಹೀಗೆ ಮಾಡುತ್ತಿದ್ದಾರೆಯೋ ಗೊತ್ತಿಲ್ಲ. ದೇಶದ ಆಡಳಿತದ ಪ್ರತಿಯೊಂದು ವಿಚಾರದಲ್ಲಿಯೂ ದಕ್ಷತೆ ಉಡುಗಿಹೋಗಿದೆಯೆಂದು ಹೇಳಬಹುದಾಗಿದೆ. ಯಾವುದರಲ್ಲೇ ಆಗಲಿ ಒಂದು ಖಚಿತವಾದ ನೀತಿಯಾಗಲೀ, ದಕ್ಷತೆಯಿಂದ ಕೆಲಸಮಾಡಿದ್ದಾಗಲೀ ಕಾಣುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಮತ್ತೊಂದು ಅಂಶವೆಂದರೆ ಈಗ ತಾವು ರಚಿಸಿರುವ ಹನ್ನೊಂದು ಸಮಿತಿಗಳ ವಿಚಾರ. ಇವೇನು ಆಕಸ್ಮಿಕವಾಗಿ ಬಂದುಬಿಟ್ಟವೋ ಇಲ್ಲವೇ ಅವಶ್ಯಕವಾಗಿಯೇ ಬಂದುವೋ ಗೊತ್ತಿಲ್ಲ! ಇಲ್ಲವೇ, ಆ ಪಕ್ಷದಲ್ಲಿರುವ 66 ಜನರನ್ನೂ ಒಂದೊಂದಕ್ಕೂ ಆರಾರು ಜನರಂತೆ ಹಂಚಿಹಾಕುವುದಕ್ಕೆ ತಂದಿದ್ದಾರೋ ಏನೋ!!

ಶ್ರೀ ಎ. ಭೀಮಪ್ಪನಾಯಕರು.—ಆರು ಜನ ಮಂತ್ರಿಗಳಂತೂ ಆ ಸಮಿತಿಗಳಲ್ಲಿರುವುದಿಲ್ಲ. ಈ ಮಾನ್ಯ ಸದಸ್ಯರನ್ನೂ ಅವುಗಳಲ್ಲಿ ಯಾವುದಕ್ಕಾದರೂ ಸೇರಿಸಿಕೊಳ್ಳಬಹುದು.

ಶ್ರೀ ಬಿ. ಹುಚ್ಚೇಗೌಡರು.—ಅಂತೂ ಆ ರೀತಿಯಾಗಿ ಆರೋಪಣೆ ಬರುತ್ತಿವೆ. ಅದೇನೇ ಇರಲಿ, ಅಂತೂ ಈ ಸಮಿತಿ ಮುಂತಾದುವುಗಳನ್ನು ಮಾಡುವುದು, ಅವುಗಳಿಂದಬಂದ ವರದಿಗಳನ್ನು ನಿಧಾನವಾಗಿ ಪರಿಶೀಲನೆಗೆ ತೆಗೆದುಕೊಂಡು ಸಾವಧಾನವಾಗಿ ಒಂದು ಹುಕುಂ ಹೊರಡಿಸುವುದು—ಈ ತರಹವೆಲ್ಲಾ ಹಿಂದೆ ಬ್ರಿಟಿಷರವರು ಇಲ್ಲಿದ್ದು ಆಡಳಿತ ನಡೆಸುತ್ತಿದ್ದ ಮಾದರಿಯಲ್ಲಿಯೇ ಇದೆ. "ಏನೋ, ಸದ್ಯಕ್ಕೆ ಬೀಸುವ ದೊಣ್ಣೆ ತಪ್ಪಿಸಿಕೊಂಡರೆ ಮುಂದೆ ನೋಡೋಣ" ಎಂಬ ರೀತಿಯಲ್ಲಿ ಸರ್ಕಾರ ಹೋಗುತ್ತಿರುವಂತೆ ಕಾಣುತ್ತದೆ! ಅವರು ಎಲ್ಲವನ್ನೂ ಮಾಡಿ ಮುಗಿಸಿದನಂತರ ಪುನಃ ನೀವೇ ಮತ್ತು ನಿಮ್ಮಿಂದಲೇ ಈ ಸಮಿತಿಗಳನ್ನೆಲ್ಲಾ ಮಾಡಬೇಕಾಗಿ ಬಂದಿತು ಎಂದು ಹೇಳಿಬಿಡುತ್ತಾರೆ. ಆದರೆ ಹಾಗೆ ಸಮಿತಿಗಳನ್ನು ನೇಮಕ ಮಾಡುವಾಗ ಅವರು ಯಾರನ್ನೂ ಕೇಳುವುದಿಲ್ಲ. ಒಂದು ವೇಳೆ ಅವರ ಪಕ್ಷದವರನ್ನು ಅವರು ಕೇಳಿಕೊಳ್ಳಬಹುದು.

ಇದೂ ಅಲ್ಲದೆ ಇನ್ನೊಂದು ದೊಡ್ಡ ವಿಚಾರವಿದೆ. ಸ್ವಾಮಿ. ನ್ಯಾಯಾಂಗದ ಬಾಬಿನಲ್ಲಿ ಜಾಗ್ರತೆ ನ್ಯಾಯತೀರ್ಮಾನವನ್ನು ಕೊಡುತ್ತಿಲ್ಲ. ಆರ್ಗ್ಯುಮೆಂಟ್ ಮುಗಿದು............

ಅಧ್ಯಕ್ಷರು.—ಶ್ರೀಮನ್ಮಹಾರಾಜರವರ ಭಾಷಣದ ಸಂಬಂಧದಲ್ಲಿ ಮಾತನಾಡುವಾಗ ಈ ವಿಚಾರಗಳೆಲ್ಲಾ ಹೇಗೆ ಬರುತ್ತವೆ? ನೀವು ಆ ಭಾಷಣದ ವಿಚಾರವಾಗಿ ಚರ್ಚೆ ಮಾಡುತ್ತಿರುವಾಗ ಆ ಭಾಷಣಕ್ಕೂ ಈ ವಿಷಯಗಳಿಗೂ ಏನು ಸಂಬಂಧ?

ಶ್ರೀ ಬಿ. ಹುಚ್ಚೇಗೌಡರು.—ಸಂಬಂಧವಿದೆ; ಆದುದರಿಂದಲೇ ನಾನು ಇದನ್ನು ಹೇಳುತ್ತಿರುವುದು. ಈ ತಿದ್ದುಪಡಿ ಸೂಚನೆಯಲ್ಲಿ.........

ಅಧ್ಯಕ್ಷರು.—ಆ ಸೂಚನೆ ಮಂಡಿಸಿರತಕ್ಕವರು ನಿಮ್ಮ ನಾಯಕರು. ಆದರೆ ಅದೀಗ ಪ್ರಾಮುಖ್ಯವಲ್ಲ. ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಏನು ಅಪ್ಪಣೆ ಕೊಡಿಸಿದ್ದಾರೋ ಆ ಬಗ್ಗೆ ತಾವು ಈಗ ಮಾತನಾಡಬಹುದು ಅಷ್ಟೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಆದರೆ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಯಾವ ವಿಚಾರವನ್ನು ಪ್ರಸ್ತಾಪಮಾಡದೆ ಬಿಟ್ಟಿದ್ದಾರೆಯೋ ಅಂಥಾ ವಿಚಾರಗಳ ಮೇಲೆ ನಾವೀಗ ಮಾತನಾಡಬೇಕಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ನಾವು ಈ ರೀತಿ ಮಾಡಿದ್ದೇವೆ, ನಾವು ಇಂಥಾದ್ದನ್ನು ಮಾಡಿದ್ದೇವೆ ಎಂದು ಅಪ್ಪಣೆ ಕೊಡಿಸಿದ್ದಾರೆ.

ಅಧ್ಯಕ್ಷರು.—ಹಾಗಿಲ್ಲದೆ, ಅವರು ತಮ್ಮ ಭಾಷಣದಲ್ಲಿ ಮತ್ತೇನು ವಿಚಾರ ಹೇಳಬೇಕಾಗಿತ್ತು.

ಶ್ರೀ ಬಿ. ಹುಚ್ಚೇಗೌಡರು.—ನಾನು ಹೇಳತಕ್ಕದ್ದು, ಅವರು ಮಾಡಿರತಕ್ಕ ಭಾಷಣವು ದೇಶದಲ್ಲಿರತಕ್ಕ ಪ್ರತಿಯೊಬ್ಬರಿಗೂ ಕೂಡ ಸರ್ವರೀತಿಯಿಂದಲೂ ಸರ್ವರಿಗೂ ಅನ್ವಯಿಸುವಂಥ ಒಂದು ರೀತಿನೀತಿಯಲ್ಲಿ ಸರ್ವರಿಗೂ ಸೌಕರ್ಯ ಸಂತೃಪ್ತಿಉಂಟಾಗುವ ರೀತಿಯಲ್ಲಿ ಇರಬೇಕಾಗಿತ್ತು ಎಂದು.

ನಾನಾಗಲೇ ಹೇಳಿದಂತೆ ಇವರಿವರಲ್ಲೇ ಗಲಾಟೆ ಹಚ್ಚಿಕೊಂಡು ಕೇಸುಗಳ ಆರ್ಗ್ಯುಮೆಂಟ್ ಮುಗಿದು ಹೋಗಿ 2 ವರ್ಷಗಳು ಕಳೆದಿದ್ದಾಗ್ಯೂ ಒಂದು ಕೇಸಿನ ಬಗ್ಗೆ ತೀರ್ಪೇ ಇನ್ನೂ ಹೊರಬಿದ್ದಿಲ್ಲ! ಕಾರಣ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಾಕಬೇಕೆಂಬ ನೀತಿ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಅವರ ತಿದ್ದುಪಡಿ ಸೂಚನೆಯಲ್ಲಿ ಇದೆಲ್ಲಾ ಅಡಕವಾಗಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ದೇಶದಲ್ಲಿರತಕ್ಕ ಸರ್ವರೂ ಒಂದೇ ಎಂಬ ಭಾವನೆ ತಮ್ಮಲ್ಲಿ ಮೂಡಬೇಕು. ಕೇವಲ ತಾತ್ಕಾಲಿಕವಾದ ಸೌಲಭ್ಯ, ಆಡಳಿತ ಲಾಲಸೆಗಳಲ್ಲಿ ನಿರತರಾಗಿರದೆ ದೇಶದಲ್ಲಿರತಕ್ಕ ೯೦ ಲಕ್ಷ ಪ್ರಜೆಗಳ ಏಳಿಗೆಗೆ ಅನುಕೂಲವಾಗುವಂಥ ರೀತಿ ನೀತಿಗಳನ್ನು ತಾವು ಹಾಕಿಕೊಂಡು ಕಾರ್ಯಾಚರಣೆ ಮಾಡಿದಲ್ಲಿ ಮಾತ್ರವೇ ದೇಶ ಪ್ರಗತಿ ಹೊಂದಲು ಅವಕಾಶವಾಗುತ್ತದೆ. ಆದರ ತಮ್ಮ ಆಡಳಿತದಲ್ಲಿ ಅಂಥಾ ರೀತಿನೀತಿಗಳೇ ಕಂಡುಬರುತ್ತಿಲ್ಲವಾದುದರಿಂದ ನಾನು ಈ ತಿದ್ದುಪಡಿ ಸೂಚನೆಯನ್ನು ಅನುಮೋದಿಸುತ್ತೇನೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಶ್ರೀಮನ್ಮಹಾರಾಜರವರು ಈ ಸಭೆಯಲ್ಲಿ ನಿನ್ನೆಯ ದಿವಸ ಅಪ್ಪಣೆ ಕೊಡಿಸಿರುವ ಭಾಷಣದ ಮೇಲೆ, ಅವರಿಗೆ ಈ ಸಭೆಯು ಕೃತಜ್ಞತೆಯನ್ನು ಸಲ್ಲಿಸತಕ್ಕ ಈ ಸಮಯದಲ್ಲಿ ಬಹಳ ವಿಷಾದದಿಂದ ಒಂದೆರಡು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ.

ಶ್ರೀಮನ್ಮಹಾರಾಜರವರು ಇಲ್ಲಿಗೆ ನಾಲ್ಕು ತಿಂಗಳ ಹಿಂದೆ ಇದೇ ರೀತಿಯಾಗಿ ಈ ಸಭೆಯನ್ನುದ್ದೇಶಿಸಿ ಒಂದು ಭಾಷಣ ಮಾಡಿದ್ದಾರೆ. ಹಾಗೆ ಮಾಡಿದ ನಂತರ ಅಲ್ಲಿಂದೀಚೆಗೆ ದೇಶದಲ್ಲಿ ಪ್ರಗತಿದಾಯಕವಾದ ಹೊಸ ಹೊಸ ಕಾರ್ಯಕ್ರಮಗಳೇನು ನಡೆದಿರುತ್ತವೆ, ಅಥವಾ ಅಂಥಾ ಪ್ರಗತಿದಾಯಕ ಮಾರ್ಗವನ್ನು ಹೇಗೆ ಮುಂದುವರಿಸಿ ಹೆಚ್ಚಿಸಲಾಗಿದೆ ಎಂಬ ಅಂಶಗಳನ್ನು ಅವರು ತಮ್ಮ ಭಾಷಣದಲ್ಲಿ ಸೂಚಿಸಬೇಕಾಗಿತ್ತು. ಆದರೆ ಹಾಗೆ ಸೂಚಿಸಬೇಕಾದ ಹೊಸ ಅಂಶಗಳಿಲ್ಲದೆ ಇದ್ದಲ್ಲಿ ಆ ರೀತಿ ಹೇಳಿ ಸರ್ಕಾರದವರು ಈ ಸಭೆಯ ಮುಂದೆ ತರಬೇಕೆಂದಿರುವ ಮಸೂದಾ ಕಾನೂನುಗಳನ್ನು ಸಭೆಯು ಪರಿಶೀಲಿಸಬೇಕೆಂದು ಹೇಳಿದ್ದರೆ ಸಾಕಾಗಿತ್ತು. ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರತಕ್ಕ ಇಂದಿನ ಭಾಷಣವನ್ನು ನೋಡಿದರೆ, ಹಿಂದೆ ಅವರು ತಮ್ಮ ಭಾಷಣದಲ್ಲಿ ಏನು ಹೇಳಿದ್ದಾರೆಯೋ ಅದೇ ವಿಷಯಗಳು ಹಿಂದೆ ಯಾವ ನೀತಿಯ ಪ್ರಕಾರ ಕೆಲಸ ಕಾರ್ಯಗಳು ನಡೆದುವೆಂದು ಹೇಳಿದ್ದಾರೋ ಇಂದೂ ಅದೇ ರೀತಿಯಲ್ಲಿ ಕೆಲಸ ಕಾರ್ಯಗಳು ಜರುಗುತ್ತಿವೆಯೆಂದು ಹೇಳಿದ್ದಾರೆ. ಇದರಲ್ಲಿ ಹೊಸದಾದ ಅಂಶವೇನೂ ಇಲ್ಲ. ಆದರೆ ಅವರು ಹೀಗೆ ಹೇಳಿದ್ದನ್ನೇ ಮತ್ತೆ ಪುನಃ ಹೇಳದೆ ದೇಶದಲ್ಲಿ ಹಿಂದೆ ನಡೆಸಿರುವುದಕ್ಕಿಂತ ಈಗ ಹೊಸದಾದ ವಿಧಾನದಲ್ಲಿ ಕೆಲಸ ಕಾರ್ಯ ನಡೆಸತಕ್ಕಂಥ ಒಂದು ರೀತಿ ನೀತಿಯನ್ನಾಗಲೀ ಅಥವಾ ಇಂತಿಂಥ ಹೊಸ ಏರ್ಪಾಡುಗಳನ್ನು ಮಾಡಲಾಗಿದೆಯೆಂದಾಗಲೀ ತಿಳಿಸಿದ್ದರೆ ಚೆನ್ನಾಗಿತ್ತೆಂದು ನನಗೆ ಅನ್ನಿಸುತ್ತದೆ. ಉದಾಹರಣೆಗೆ ಹೇಳುವುದಾದರೆ, ಶ್ರೀಮನ್ಮಹಾರಾಜರವರು ಹಿಂದೆಯೂ ಈ ಕೈಗಾರಿಕಾ ನೀತಿಯ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಇಂದಿನ ಭಾಷಣದಲ್ಲೂ ಕೂಡ ಅದೇ ರೀತಿಯಾಗಿ ಪ್ರಸ್ತಾಪಮಾಡಿದ್ದಾರೆ. ಇದರಲ್ಲಿ ಹೊಸದಾದ ಅಂಶಗಳೇನೂ ಇಲ್ಲ. ಹಿಂದೆ ಈ ಸಭೆಯಲ್ಲಿ ಬಜೆಟ್ಟನ್ನು ಮಂಡಿಸುವಾಗ ಸರ್ಕಾರದವರ ಪರವಾಗಿ ಹಣ ಕಾಸಿನ ಮಾನ್ಯ ಸಚಿವರು ಏನೊಂದು ವಿಷಯಗಳನ್ನು ತಿಳಿಸಿದ್ದರೋ ಅದನ್ನೇ ಇಂದೂ ಇವರು ಸೂಚಿಸಿದ್ದಾರೆ. ಇದರಲ್ಲಿ ಅಂಥಾ ಹೊಸ ಬದಲಾವಣೆಯೇನೂ ನನಗೆ ಕಂಡುಬರುತ್ತಿಲ್ಲ. ನಾನು ಈ ಹಿಂದೆ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಆಗ ತಾವು ಸರ್ಕಾರದವರ ಪರವಾಗಿ ಏನು ಉತ್ತರ ಕೊಟ್ಟಿದ್ದೀರೆಂದರೆ ಮೇಜರ್ ಇರಿಗೇಷನ್ ವರ್ಕ್ಸ್‌ಗಳ ವಿಚಾರದಲ್ಲಿ 1950ಕ್ಕೆ ಹಿಂದೆಯೇ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದಿತೋ ಆ ಬಗ್ಗೆ 1950ನೆಯ ಇಸವಿಯ ಬಜೆಟ್ಟನ್ನು ಸಭೆಯ ಮುಂದೆ ಮಂಡಿಸುವಾಗ ಸರ್ಕಾರದ ಪರವಾಗಿ ಮಾನ್ಯ ಹಣಕಾಸಿನ ಸಚಿವರು ಈಗಿನ ಹಣ ಕಾಸಿನ ಪರಿಸ್ಥಿತಿಗನುಸಾರವಾಗಿ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುತ್ತದೆಂದೂ, ಹಣದ ಅಭಾವ ಹೆಚ್ಚಾಗಿರುವುದರಿಂದ ಹೊಸ ಹೊಸ ಯೋಜನೆಗಳನ್ನು ಸದ್ಯಕ್ಕೆ ನಿಲ್ಲಿಸಲಾಗಿದೆಯೆಂದು ತಿಳಿಸಿದ್ದರು. ಆಗ ಅದೇ ಸಂದರ್ಭದಲ್ಲಿ ಮತ್ತೊಂದು ವಿಷಯ ಅವರು ಹೇಳಿದುದೇನೆಂದರೆ, ಹಿಂದಿನಿಂದ ಇಲ್ಲಿಯತನಕ ವಿಶೇಷವಾಗಿ ಹಣವನ್ನು ಖರ್ಚು ಮಾಡಿರುವ ನೀರಾವರಿ ಕಾಮಗಾರಿಗಳನ್ನು ಅವುಗಳಿಗೆ ಹಾಕಿರುವ ಬಂಡವಾಳ ಹಾಳಾಗದಂತೆ ನೋಡಿಕೊಳ್ಳಲಾಗುತ್ತದೆಂದೂ ಕೂಡ ಸೂಚಿಸಿದ್ದರು. ಅಂಥಾ ಕಾಮಗಾರಿಗಳನ್ನೆಲ್ಲಾ ಒಂದು ಮಟ್ಟಕ್ಕೆ ತಂದು ನಿಲ್ಲಿಸುವುದಾಗಿ ತಿಳಿಸಿದ್ದರು. ಪುನಃ ಈ ದಿವಸ ಬೆಳಿಗ್ಗೆ ನಾನು ಇದನ್ನು ಓದಿದಾಗ್ಯೆ ಲಕ್ಕವಳ್ಳಿ, ತುಂಗಾ ಮತ್ತು ನುಗು ಇವುಗಳ ಬಗ್ಗೆ ಒಂದು ಹೇಳಿಕೆಯನ್ನು ಸಹ ಕೊಟ್ಟಿದ್ದಾರೆ. ಈ ಬಗ್ಗೆ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುವ ಭಾಷಣದಲ್ಲಿ ಹೀಗೆ ಹೇಳಲಾಗಿದೆ:

> "While every attention has to be paid for the completion of short term projects, it is obvious that the necessity for having a long range plan to meet the growing needs of an increasing population cannot be lost sight of. Major irrigation works like Lakkavalli, Thunga, Nugu and others must, therefore, continue to have their due share of attention."

ಇದನ್ನು ನಾನು ಓದಿದಾಗ್ಯೆ ನನ್ನ ಮನಸ್ಸಿನಲ್ಲಿ ಏನೊಂದು ಅಭಿಪ್ರಾಯ ಮೂಡಿತೆಂದರೆ ಹಿಂದೆ ಸರ್ಕಾರ ಯಾವ ರೀತಿ ಇಂಥಾ ಕಾಮಗಾರಿಗಳನ್ನು ಒಂದು ಮಟ್ಟಕ್ಕೆ ತಂದು ನಿಲ್ಲಿಸುವುದಕ್ಕೆ ಬದಲಾಗಿ ಮುಂದುವರಿಸಿಕೊಂಡು ಹೋಗುತ್ತಾರೆಂಬ ಆಶಾಭಾವನೆ

ಮಾಡಿತ್ತು. ಆದರೆ ಈ ದಿವಸ ಬೆಳಿಗ್ಗೆ ಪ್ರಶ್ನೋತ್ತರಗಳ ಕಾಲದಲ್ಲಿ ಒಂದು ಸನ್ನಿವೇಶ ಒದಗಿದಾಗ ಹಿಂದೆ ಹಾಗೆ ಕೈಕೊಳ್ಳಲಾಗಿದ್ದ ಕಾಮಗಾರಿಗಳ ವಿಚಾರದಲ್ಲಿ ಅವರ ನೀತಿ ಬದಲಾವಣೆಯಾಗಿಲ್ಲವೆಂಬುದು ಸ್ಪಷ್ಟವಾಗಿ ತಿಳಿಯಿತು. ಪರಿಸ್ಥಿತಿ ಹಾಗಿದ್ದಲ್ಲಿ ಮತ್ತೆ ಈ ವಿಷಯವನ್ನು ಅವರಿಂದ ಈ ಭಾಷಣದಲ್ಲಿ ಹೇಳಿಸಬೇಕಾದ ಆವಶ್ಯಕತೆ ಏನಿತ್ತು! ಕೈಗಾರಿಕಾ ವಿಚಾರಗಳಲ್ಲಿಯೂ ಇದೇ ರೀತಿ ಇದೆ. ಹಿಂದೆಯೇ ಇದಕ್ಕೆ...

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಮತ್ತು ಕೈಗಾರಿಕಾ ಸಚಿವರು).—ಅವುಗಳನ್ನು ನಿಲ್ಲಿಸಲಾಗಿದೆ ಎಂದು ಹೇಳಲಿಲ್ಲ. ಈಗ ಪ್ರೊಡಕ್ಟೀವ್ ಸ್ಕೀಮುಗಳ ಕಡೆ ಮಾತ್ರ ಗಮನ ಕೊಡುತ್ತಿದ್ದೇವೆಂದು ಹೇಳಿದ್ದೇವೆ.

ಶ್ರೀ ಎಲ್. ಸಿದ್ದಪ್ಪನವರು.—ಏನೂ ಅಂಥ ಹೊಸ ರೀತಿನೀತಿಗಳಾಗಲೀ ಅಥವಾ ಹೊಸ ಹೊಸ ಕಾರ್ಯಕ್ರಮಗಳಾಗಲೀ ಇಲ್ಲದಿದ್ದಲ್ಲಿ ಈ ವಿಷಯವನ್ನು ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಲು ಕಾರಣವಾದರೂ ಏನಿದೆ!

ಮಾನ್ಯ ಶ್ರೀ ಎಚ್. ದಾಸಪ್ಪನವರು.—ನಮ್ಮ ದೇಶದಲ್ಲಿ ಇಲ್ಲಿಯತನಕ Iron and Steel Works of Bessemer Electric Duplex Steel Plant and Additional Billet and Light Structural Mill ಇರಲಿಲ್ಲ. ಅದಕ್ಕಾಗಿ ಈಗ ಅದನ್ನು ಮಾಡಲಾಯಿತು. ಇದರಿಂದ ನಮಗೆ ಹೆಚ್ಚು ಉಕ್ಕು ದೊರೆಯುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಇದೇ ರೀತಿ ಕಳೆದ ಮೂರು ವರ್ಷಗಳಿಂದಲೂ ಶಿವಮೊಗ್ಗ ಸಕ್ಕರೆ ಕಾರ್ಖಾನೆಯ ವಿಚಾರ ಹೇಳುತ್ತಲೇ ಇದ್ದೀರಿ. ನನಗಂತೂ ಕೇಳಿಕೇಳಿ ಸಾಕಾಗಿಹೋಗಿದೆ. 1947ರಿಂದಲೂ ಹೇಳುತ್ತಲೇ ಇದ್ದಾರೆ. 1951ನೆ ಇಸವಿ ಬಂದಾಗ್ಯೂ ಏನೂ ಕಾರ್ಯಕ್ರಮ ನಡೆದಿಲ್ಲ. 4 ವರ್ಷಗಳನಂತರ ಇದನ್ನು ಯೋಚಿಸಬೇಕಾದಂಥ ಪ್ರಮೇಯವೇನಿದೆಯೋ ನನಗಂತೂ ತಿಳಿಯದಾಗಿದೆ. ಇದೇ ವಿಚಾರವನ್ನು ಶ್ರೀಮನ್ಮಹಾರಾಜರವರೂ ಕೂಡ ತಮ್ಮ ಭಾಷಣದಲ್ಲಿ ಹೇಳಿದ್ದಾರೆ:

"Arrangements for the establishment of a Sugar Factory at Shimoga are well under way"

ಇದರಿಂದ ನಮಗೆ ಏನು ಅಷ್ಟು ತೃಪ್ತಿ ಆದಂತಾಯಿತು! ನಾಲ್ಕು ವರ್ಷಗಳಾದರೂ ಆಗದೆ ಇರುವಾಗ ಈಗಲೂ ಕೂಡ ಹಿಂದೆ ಹೇಳುತ್ತಿದ್ದುದನ್ನೇ ಇಂದೂ ಹೇಳಿದಂತಾಯಿತು.

The Hon'ble Sri H. C. DASAPPA.—That very Board which was constituted prior to our coming, dit not do anything.

Sri L. SIDDAPPA.—That Board was constituted only six or eight months before you came to office. After you came to office, you had four years' time. What did you do during this long period?

The Hon'ble Sri H. C. DASAPPA.—We had to see that the Board did something.

Sri L. SIDDAPPA.—It was your duty to have scrapped the Board and to have appointed an officer, if you had thought that a Board would not function properly and that a certain individual would be able to do it. You should have taken action in that direction.

The Hon'ble Sri H. C. DASAPPA.—That is just what we have done.

Sri L. SIDDAPPA.—Do you require three years to scrap a Board which was established by the previous regime?

Sri H. K. VEERANNA GOWDA (Mandya District–General).—The Board was given an opportunity to do some work.

Sri L. SIDDAPPA.—I am stressing this point to say that there is absolutely nothing new in the Address that has been delivered to this House by His Highness the Rajpramukh. There are only one or two points which the Rajpramukh has brought to the notice of this House. That is, with regard to the Financial Integration. He has said. . . . . .

The Hon'ble Sri H. C. DASAPPA.—That was also old.

Sri L. SIDDAPPA.—I am referring to it because there are certain problems which were brought to the notice of this House and about which no mention has been made.

ಆರ್ಥಿಕ ವಿಲೀನೀಕರಣದ ವಿಚಾರದಲ್ಲಿ ಈ ಸಂಸ್ಥಾನದ ಪ್ರಜೆಗಳ ಮನಸ್ಸನ್ನು ಆಕರ್ಷಿಸಿದ್ದ ಒಂದೆರಡು ಸಮಸ್ಯೆಗಳಿದ್ದುವು. 1949ನೆಯ ಇಸವಿಯಲ್ಲಿ ಆಗಿನ ದಸರಾಧಿವೇಶನದಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಒಂದೆರಡು ಮುಖ್ಯ ವಿಷಯಗಳನ್ನು ಆಗಿನ ಸಭೆಯ ಗಮನಕ್ಕೆ ತಂದೆ. ಪುನಃ 1950ನೆಯ ಇಸವಿಯ ಬಡ್ಜೆಟ್ ಅಧಿವೇಶನದಲ್ಲಿ ಈ ವಿಷಯ ಮತ್ತು ಇನ್ನೊಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಲು ಒಂದು ನಿರ್ಣಯವನ್ನು ಮಂಡಿಸಬೇಕೆಂದಿದ್ದೆ. ಆದರೆ ಟೆಕ್ನಿಕಲ್ ಕಾರಣಗಳಿಂದ ಅವಕಾಶವಾಗಲಿಲ್ಲ. ಈಗ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಕೇಂದ್ರದಿಂದ ಸಂಸ್ಥಾನಕ್ಕೆ ಕೊಡಬೇಕಾದ ಮೊಬಲಗು 345 ಲಕ್ಷ ರೂಪಾಯಿಗಳೆಂದೂ ಅದಕ್ಕಾಗಿ ಸಂತೋಷಪಡಬೇಕಾಗಿದೆಯೆಂದೂ ಹೇಳಿದ್ದಾರೆ. ಆದರೆ ಬಡ್ಜೆಟ್ ಮೆಮೊರ್ಯಾಂಡಂ ಪ್ರಕಾರ 375 ಲಕ್ಷ ಬರಬೇಕಾಗಿತ್ತು. ಅಂದಾಜಪ್ರಕಾರ ಮಾಡಿದ್ದ ಅಂಕಿಅಂಶಗಳು ಬಹುಶಃ ಸರಿಯಾಗಿ ಲೆಕ್ಕಾಚಾರವಾದಮೇಲೆ ಸ್ವಲ್ಪ ಕಡಮೆಯಾಗಿರಬಹುದು. ಕೇವಲ ಸ್ವಲ್ಪ ವ್ಯತ್ಯಾಸವಿರುವ ವಿಚಾರ ಅದು.

ಇನ್ನೊಂದು ಮುಖ್ಯವಾದ ಅಂಶ ರೈಲ್ವೆ ವಿಚಾರ. ರೈಲ್ವೆಯನ್ನು ನಮ್ಮ ಸಂಸ್ಥಾನದಿಂದ ಕೇಂದ್ರಕ್ಕೆ ವಹಿಸಿದ ರಿಸರ್ವ್ ಫಂಡಿನಲ್ಲಿ ನಿಗದಿಯಾದ ಮೊಬಲಗಿ

(SRI L. SIDDAPPA.)

ಗಿಂತ ಹೆಚ್ಚಾಗಿ 146ಲಕ್ಷವಿತ್ತು. ಅಸೆಟ್ಸ್‌ನ 1/60ನೆಯ ಭಾಗದಂತೆ ಡಿಪ್ರೀಸಿಯೇಷನ್ ಮೊಬಲಗು ತೆಗೆಯಬೇಕೆಂದು ರೈಲ್ವೆ ಬೋರ್ಡಿನವರೇ ನಿರ್ಧರಿಸಿರುತ್ತಾರೆ. ಅದಕ್ಕಿಂತ ಹೆಚ್ಚಾಗಿರುವ 146 ಲಕ್ಷ ರೂಪಾಯಿಗಳನ್ನು ವಾಪಸ್ಸು ಪಡೆಯಬೇಕೆಂದು ಪದೇಪದೇ ಒತ್ತಿಒತ್ತಿ ಹೇಳಿದರೂ ಕೂಡ ಶ್ರಮವಹಿಸಿ ಕೇಂದ್ರ ಸರ್ಕಾರದಿಂದ ಆ ಮೊಬಲಗನ್ನು ಪಡೆಯಲು ತಕ್ಕ ಕಾರ್ಯಕ್ರಮ ನಡೆಸಿಲ್ಲ.

ಇನ್ನೊಂದು ಮುಖ್ಯ ಅಂಶ. ಆ ವಿಷಯವನ್ನು ಶ್ರೀ ಹುಚ್ಚೇಗೌಡರು ಹೇಳಿದಾಗ ಶ್ರೀ ಆಚಾರ್ಯರು 'ಅಸೆಟ್ಸ್ ಎಲ್ಲಿ ತೆಗೆದುಕೊಂಡು ಹೋಗಿದ್ದಾರೆ, ಅಲ್ಲೇ ಬಿಟ್ಟಿದ್ದಾರೆ'' ಎಂದು ಹೇಳಿದರು. ಈ ಅಸೆಟ್ಸ್ ತಾಳೆ ಮಾಡುವಾಗ ಅದರಿಂದ ಆಗಿರುವ ತೊಂದರೆ, ನಷ್ಟ ಸಂಸ್ಥಾನಕ್ಕೆ ಎಷ್ಟುಮಟ್ಟಿಗೆ ಎಂಬುದನ್ನು ಹಿಂದೆಯೇ ಈ ಸಭೆಯಲ್ಲಿ ಹೇಳಿದೆ. ಕೆಲವು ಅಸೆಟ್ಸ್‌ನಿಂದ ವರಮಾನ ಬರುತ್ತಿಲ್ಲ. ಅದರ ಬೆಲೆ ಕಟ್ಟುವಾಗ ವರಮಾನವೇನು ಬರುತ್ತದೆ ಎಂಬುದನ್ನು ನೋಡಬೇಕು, ಸಾಮಾನ್ಯವಾಗಿ ಸಾಲ ತೆಗೆದುಕೊಂಡರೆ ಬಡ್ಡಿ ಕೊಡುವುದು ಸೇಕಡ $4\frac{1}{2}$. ನಮಗೆ ಬರುವ ಉತ್ಪತ್ತಿ ನೋಡಿದರೆ ಸೇಕಡ ಒಂದು. ಎರಡರಿಂದ 7—8ರ ವರೆಗೆ ಕೆಲವು ಕಡೆ ಉತ್ಪತ್ತಿಯಿದೆ. ರೈಲ್ವೆಯಲ್ಲಿ ಸೇಕಡ 8 ರವರೆಗೆ ಬರುವುದು. ನಮ್ಮ ಸಲಹೆಯನ್ನು ಕೇಂದ್ರದವರು ಸ್ವಲ್ಪಮಟ್ಟಿಗೆ ಒಪ್ಪಿದ್ದಾರೆ. ಕೃಷ್ಣರಾಜಸಾಗರಕ್ಕೆ ಬೆಲೆ ಕಟ್ಟುವಾಗ ಹಣ ಖರ್ಚುಮಾಡಿರುವುದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಅದರಿಂದ ಬರುವ ಲಾಭ ಸೇಕಡ $3\frac{1}{2}$ ಎಂದು ನಿರೀಕ್ಷಿಸಿ ನಿರ್ಧರಿಸಿದ್ದಾರೆ. ಅದೇ ರೀತಿಯಲ್ಲಿ ರೈಲ್ವೆಯಿಂದ $7\frac{1}{2}$ ಯಂತೆ ಲಾಭ ಬರುವಾಗ ಅದರ ಬೆಲೆ ಏನು, ಸಾಲ ಯಾವದರದಲ್ಲಿ ತೆಗೆದುಕೊಂಡಿದೆ ಎಂಬುದನ್ನು ನೋಡಿ, ಅದರ ಪ್ರಕಾರ ಬೆಲೆ ಹೆಚ್ಚಿಸುವುದರಿಂದ ಅನುಕೂಲವಾಗುತ್ತದೆ. ಯಾವ ರೀತಿಯಲ್ಲಿ ಅನುಕೂಲವಾಗುತ್ತೆ ಎಂದು ಆಚಾರ್ಯರು ಕೇಳಬಹುದು.

Sri G. A. ACHARYA (Bangalore District—General).—Are you not using the Railways?

Sri L. SIDDAPPA.—If we make use of the Railways, we have been purchasing tickets and we have been paying for the services rendered to us by the Railway Department.

ಇಂಡಿಯಾ ಸರ್ಕಾರದವರು ರೈಲ್ವೆಯ ಆಡಳಿತವನ್ನು ನಮ್ಮಿಂದ ವಹಿಸಿಕೊಂಡಾಗ ಅಸೆಟ್ಸ್ ಮಾತ್ರ ತೆಗೆದುಕೊಂಡರೆ ಸಾಲದು, ಅದರ ಜೊತೆಗೆ ಸಾಲದಲ್ಲೂ ಕೊಂಚ ಭಾಗ ತೆಗೆದುಕೊಳ್ಳಬೇಕು ಎಂದು ಸಮಿತಿಯು ಶಿಫಾರ್ಸು ಮಾಡಿತ್ತು. ಅದನ್ನು ನಮ್ಮ ಸಂಸ್ಥಾನ ಮತ್ತು ಕೇಂದ್ರ ಸರ್ಕಾರ ಒಪ್ಪಿವೆ. ಆದರೆ ಆ ರೀತಿ ಹಂಚುವಾಗ $\frac{2}{3}$ ಭಾಗ ಅವರು ತೆಗೆದುಕೊಳ್ಳುವುದಕ್ಕೆ ಬದಲಾಗಿ $\frac{1}{3}$ ಭಾಗ ಲಯಬಿಲಿಟೀಸ್ ತೆಗೆದುಕೊಂಡಿದ್ದಾರೆ. ಇದು ಬಹಳ ಮುಖ್ಯ ಅಂಶ. ಇದರಿಂದ ನಮಗೆ ನಷ್ಟವಾಗಿದೆ. ಈ ವಿಚಾರದಲ್ಲಿ ಅವರೊಡನೆ ಹೋರಾಡಿ ಸಂಸ್ಥಾನಕ್ಕೆ ನ್ಯಾಯ ಸಲ್ಲುವಂತೆ ಏರ್ಪಾಡುಮಾಡಬೇಕೆಂದು ಎಷ್ಟು ವಿಧವಾಗಿ ಹೇಳಿದರೂ ಇದುವರೆಗೂ ಏನೂ ಮಾಡಿರುವುದಿಲ್ಲ. ಮಾನ್ಯ ಹಣಕಾಸಿನ ಸಚಿವರು ಹಿಂದೆ ಹೈದರಾಬಾದಿಗೆ ದಯಮಾಡಿಸಿದ್ದಾಗ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಂದರ್ಭದಲ್ಲಿ ಆ ವಿಚಾರ ಸಮರ್ಪಕವಾಗಿ ಇತ್ಯರ್ಥವಾಗುತ್ತದೆಯೆಂಬ ಭರವಸೆಯನ್ನು ಹೇಳಿದ್ದರು. ಆದರೆ ಆ ವಿಷಯದಲ್ಲಿ ಇದುವರಗೆ ಏನಾಗಿದೆ ಎಂಬುದನ್ನು ಈ ಸಭೆಗಾಗಲಿ ಅಥವ ಪ್ರಜೆಗಳಿಗಾಗಲಿ ತಿಳಿಸದೇಯಿರುವುದು ತುಂಬಾ ವಿಷಾದಕರವಾದ ಸಂಗತಿಯಾಗಿದೆ. ಇತ್ಯರ್ಥವಾಗಿಲ್ಲವೆಂದು ತಿಳಿದುಕೊಳ್ಳಬೇಕೆ? ಒಂದು ವೇಳೆ ಇತ್ಯರ್ಥವಾಗಿದ್ದರೆ ಈ ಭಾಷಣದಲ್ಲಿ ಆ ವಿಚಾರವು ನಮೂದಾಗಿಲ್ಲವಾದ್ದರಿಂದ ಅದು ಅನುಕೂಲವಾಗಿಲ್ಲ ಎಂದು ಅರ್ಥಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಂತಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಈ ಭಾಷಣದಲ್ಲಿ ಏನೂ ಹೇಳಿಲ್ಲವೆ?

Sri L. SIDDAPPA.—You have not stated anything. All tbat is found in the Address is;

"The House is already aware of the financial Integration Agreement between the Government of India and Mysore and the question of the determination of the Revenue gap was a subject matter of negotiation during the year. It is a matter for satisfaction that the Government of India took a liberal view of the points at issue and have agreed that the net gap payable annually to the State by the Centre shall be Rs. 345 lakhs for the stipulated period"

Not a word has been stated even about the return of Rs. 46 lakhs which they have taken away and which is over and above the usual depreciation fund or regarding the liability they have to take calculated in the manner in which I suggested.

ಎರಡನೆಯದಾಗಿ ರಿಟ್ರೆಂಚ್‌ಮೆಂಟ್ ವಿಚಾರ. ಆ ವಿಚಾರವನ್ನು ಕೂಡ ಪ್ರಸ್ತಾಪಿಸುವಾಗ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಹೇಳಿರುವುದು ಮೂರು ಲೈನುಗಳು ಮಾತ್ರ.

"The report of the Economy Officer was considered by Government and wherever possible, retrenchments have been and are being effected"

ಎಂದು ಮಾತ್ರ ಹೇಳಿದ್ದಾರೆ. ಇದರ ವಿಚಾರವನ್ನೂ ಸಹ ಈ ಸಭೆಯಲ್ಲಿ ಮೂರು ಅಧಿವೇಶನಗಳಲ್ಲೂ ಪ್ರಶ್ನೆಗಳ ಮೂಲಕ, ಬೋತಾ ಸೂಚನೆಗಳ ಮೂಲಕ ಮತ್ತು ನಿರ್ಣಯಗಳ ಮೂಲಕ ಪ್ರಸ್ತಾಪ ಮಾಡಿದೆ. ಆದರೆ ಪ್ರಶ್ನೆಗಳಿಗೆ ಜವಾಬು ಕೊಡುವಾಗ ಈ ಸಭೆಯನ್ನು ಸರ್ಕಾರದವರು ನಂಬಿಕೆಗೆ ಅರ್ಹವಾದುದೆಂದು ಭಾವಿಸಲು ಇಷ್ಟಪಡಲಿಲ್ಲ. ಇದು ಹೇಗೆ ಗೊತ್ತಾಯಿತೆಂದು ಕೇಳಬಹುದು. ಇದು ಅವರು ಕೊಟ್ಟಿರುವ ಉತ್ತರದಿಂದಲೇ ಗೊತ್ತಾಗುತ್ತದೆ.

ಈ ವಿಷಯವನ್ನು ಸಭೆಗೆ ಸರಿಯಾಗಿ ತಿಳಿಸದೇ ಹೋದ ಪಕ್ಷದಲ್ಲಿ ಹೇಗೆ ಗೊತ್ತಾಗಬೇಕು? ಯಾವ್ಯಾವ ಬಾಬಿನಲ್ಲಿ ಎಷ್ಟೆಷ್ಟು ಕಡಿಮೆಯಾಗಿದೆ ಎಂಬ ವಿಚಾರದಲ್ಲಿ ಎರಡು ಸಾರಿ ಪ್ರಶ್ನೆ ಬಂದಿದೆ. ಆದರೆ ಅದಕ್ಕೆ ಸರಿಯಾದ ಅಂಕಿ ಅಂಶಗಳನ್ನು ಕೊಡಲು ಸರ್ಕಾರದವರು ತಯಾರಿಲ್ಲ. ಇನ್ನೂ ಹೇಳುವುದಾದರೆ ಈ ವಿಚಾರದಲ್ಲಿ ಎಷ್ಟು ತೀವ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅಷ್ಟು ತೆಗೆದುಕೊಳ್ಳುತ್ತಿಲ್ಲ. 1950ನೆಯ ಇಸವಿಯ ಬಡ್ಜೆಟ್ ಮಂಡಿಸಿದಾಗಲೇ ಭಾಷಣ

ಮಾಡುವಾಗ ತೀವ್ರವಾದ ಕಾರ್ಯಕ್ರಮ ಕೈಕೊಳ್ಳುತ್ತೇವೆಂದು ಹೇಳಿದ್ದರು. ಅಲ್ಲಿಂದೀಚೆಗೆ ಎರಡು ಅಧಿವೇಶನಗಳಾದುವು. ಆದರೆ ಈ ದಿವಸ ಕೂಡ ಯಾವ್ಯಾವ ಬಾಬಿನಲ್ಲಿ ಎಷ್ಟೆಷ್ಟು ಉಳಿತಾಯವಾಗಿದೆಯೆಂದು ಹೇಳಲು ಅವರು ಸಮರ್ಥರಾಗಿಲ್ಲ.

ಇನ್ನೊಂದು ವಿಚಾರ ಹೇಳುವುದಾದರೆ ಆಡಳಿತದ ವೆಚ್ಚಗಳು ಕಡಿಮೆಯಾಗುವುದಕ್ಕೆ ಬದಲಾಗಿ ಹೆಚ್ಚಾಗುತ್ತಿವೆ. ಒಂದೆರಡು ಉದಾಹರಣೆ ಕೊಡುತ್ತೇನೆ. ಈ ವಿಚಾರದಲ್ಲಿ ಆಗಲೇ ನನ್ನ ಮಾನ್ಯ ಮಿತ್ರರಾದ ಶ್ರೀ ಹುಚ್ಚೇಗೌಡರು ಸರ್ಕಾರದ ಸೆಕ್ರೆಟರಿಗಳ ಸಂಖ್ಯೆ ಹಿಂದೆ ಇದ್ದುದಕ್ಕಿಂತ ಎರಡು ಹೆಚ್ಚಿದೆಯೆಂದು ಹೇಳಿದರು. ಇನ್ನೂ ಕೆಲವು ಹೊಸ ಹೊಸ ಹುದ್ದೆಗಳನ್ನೇ ಮಾಡಿದ್ದಾರೆ. ಉದಾಹರಣೆಗೆ, A special officer to negotiate matters in Delhi ಎಂದು ಮಾಡಿದ್ದಾರೆ. ಸಂಸ್ಥಾನದ ಹಣಕಾಸಿನ ಸ್ಥಿತಿ ಚೆನ್ನಾಗಿತ್ತು ಹೆಚ್ಚು ಖರ್ಚನ್ನು ತಡೆದುಕೊಳ್ಳುವ ಚೈತನ್ಯ ಸರ್ಕಾರಕ್ಕಿದ್ದರೆ ಅಂತಹ ಕಾಲದಲ್ಲಿ ಇಂತಹ ಹೊಸ ಹುದ್ದೆಗಳನ್ನು ಮಾಡಬಹುದು. ಆದರೆ ಸಂಸ್ಥಾನದ ಹಣಕಾಸಿನ ಸ್ಥಿತಿ ಇಷ್ಟು ಕ್ಲಿಷ್ಟವಾಗಿರುವಾಗ ಹೊಸ ಹುದ್ದೆಗಳನ್ನು ಮಾಡುತ್ತಿರುವುದು, ಸಿಬ್ಬಂದಿಯನ್ನು ಕಡಿಮೆ ಮಾಡಲು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳದೇಯಿರುವುದು ಮಹಾಪರಾಧವೆಂದು ನಾನು ಹೇಳುತ್ತೇನೆ. ಕಳೆದ ಎರಡು ತಿಂಗಳಿಂದ ಎರಡು ಡೆಪ್ಯುಟಿ ಕಮಿಷನರ ಹುದ್ದೆಗಳು ಖಾಲಿ ಬಿದ್ದವು. ಒಂದು ಡೆಪ್ಯುಟಿ ಕಮೀಷನರ ಸ್ಥಾನ ಖಾಲಿ ಬಿದ್ದರೆ ಇಬ್ಬರನ್ನು ಪ್ರಮೋಟ್ ಮಾಡುವುದು ವಿಚಿತ್ರ! ನನಗೇ ತಿಳಿದಿರುವ ಹಾಗೆ ಕಳೆದ ತಿಂಗಳು ಒಂದು ಸ್ಥಾನ ಖಾಲಿ ಬಿತ್ತು. ಅದಕ್ಕೆ ಬೇರೆ ಇಲಾಖೆಯಲ್ಲಿರುವವರನ್ನು ಪ್ರಮೋಟ್ ಮಾಡಿದರು. ಹೇಗೆಂದರೆ, he was seconded as Deputy Commissioner and posted to work in the same department. ಅಲ್ಲಿಗೆ ಮತ್ತೆ ಇನ್ನೊಬ್ಬರನ್ನು ಪ್ರಮೋಟ್ ಮಾಡಿದರು. ಸರ್ಕಾರದ ಆಡಳಿತ ನೀತಿ ಹೀಗಿರುವಾಗ ಖರ್ಚು ಕಡಿಮೆಯಾಗಬೇಕೆಂದರೆ ಹೇಗಾಗುತ್ತದೆ! ಯಾವ ಕೆಲಸದಲ್ಲಾಗಲಿ ವಿಧಾನ ನೀತಿ! ಇದು ಸರ್ವಥಾ ಸಮರ್ಪಕವಲ್ಲ. ಇದೆಲ್ಲಕ್ಕೂ ಇನ್ನೂ ಹೆಚ್ಚಿನ ಗಮನ ಕೊಡಬೇಕು. ಸಭೆ ಸೇರಿದಾಗೆಲ್ಲ ಒಂದಲ್ಲ ಒಂದು ವಿಧದಲ್ಲಿ ಈ ವಿಚಾರಗಳನ್ನು ಸದಸ್ಯರು ಸರ್ಕಾರದವರ ಗಮನಕ್ಕೆ ತಂದರೂ ಕೂಡ ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳದೆ ಇರುವುದನ್ನು ನೋಡಿದರೆ ನಮಗೆ ವಿಷಾದವಾಗುತ್ತದೆ.

ಕೊನೆಯದಾಗಿ ನಾನು ಹೇಳುವುದಿಷ್ಟೆ. ನನ್ನ ಮಾನ್ಯ ಸ್ನೇಹಿತರು ಹೇಳಿರುವುದನ್ನೇ ಪುನಃ ಹೇಳಲು ನಾನು ಇಷ್ಟಪಡುವುದಿಲ್ಲ. ಕೆಲವು ಸ್ಥಾಯಿ ಸಮಿತಿಗಳನ್ನು ನೇಮಕ ಮಾಡುವುದಾಗಿ ಸರ್ಕಾರದವರು ಹೇಳಿದ್ದಾರೆ. ಶ್ರೀಮನ್ಮಹಾರಾಜರವರೂ ತಮ್ಮ ಭಾಷಣದಲ್ಲಿ ಹೀಗೆ ಹೇಳಿದ್ದಾರೆ:

"My Government have decided to constitute several standing advisory Committees of members of this House to enable the Government to have the benefit of their advice."

ಈ ವಿಚಾರದಲ್ಲಿ ನೆನ್ನೆಯ ದಿವ ಈ ಸಭೆಯ ಮಾನ್ಯ ನಾಯಕರು ಒಂದು ನಿರ್ಣಯವನ್ನು ಸಭೆಯ ಮುಂದಿಟ್ಟಾಗ ನಾನು procedural grounds ಮೇಲೆ ಮಾತನಾಡುತ್ತಾ, ಈ ಸಭೆಯ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ನಿಬಂಧನೆಗಳಲ್ಲಾಗಲೀ ಅಥವಾ ಭಾರತ ರಾಜ್ಯಾಂಗದಲ್ಲಾಗಲೀ ಇಂತಹ ಸಮಿತಿಗಳನ್ನು ನೇಮಕ ಮಾಡುವುದಕ್ಕೆ ಅವಕಾಶವಿಲ್ಲವೆಂಬ ಕಾರಣದ ಮೇಲೆ ಇದನ್ನು ವಿರೋಧಿಸುವುದಾಗಿ ಹೇಳಿದೆ. ನಂತರ ಉಪಾಹಾರವಾದಮೇಲೆ ಸರ್ಕಾರದವರು ಇದಕ್ಕೆ ಸಂಬಂಧಪಟ್ಟ ಒಂದು ಸರ್ಕಾರಿ ಆಜ್ಞೆಯನ್ನು ಸದಸ್ಯರ ಅವಗಾಹನೆಗೆ ಕಳುಹಿಸಿದರು. ಅದನ್ನು ನಾನು ಓದಿದ ಮೇಲೂ ಕೂಡ ಇಂತಹ ಸಮಿತಿಗಳು ಅನಾವಶ್ಯಕವೆಂದು ತೋರಿತು. ಈ ಸಮಿತಿಗಳನ್ನು ಅವರು ಯಾವ ಉದ್ದೇಶದಿಂದ ಮಾಡಬೇಕೆಂದಿದ್ದಾರೆಂಬ ವಿಚಾರಕ್ಕೆ ನಾನು ಹೋಗುವುದಿಲ್ಲ. ಆದರೂ ಇವುಗಳಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ. ಹಿಂದೆ ಇದೇ ರೀತಿಯ ಸಮಿತಿಗಳಿದ್ದುವೆಂದು ಈ ಸರ್ಕಾರಿ ಆಜ್ಞೆಯಲ್ಲಿ ನಮೂದಾಗಿದೆ. ಆದರೆ ಆ ಸಮಿತಿಗಳೇ ಬೇರೆ ರೀತಿಯವು. ಅವು ಯಾವುವೆಂಬುದು ನಮ್ಮೆಲ್ಲರಿಗೂ ಗೊತ್ತೇ ಇದೆ. Standing Committee for Local Self-Government, Sanitation and Public Health, Standing Committee for Finance and Taxation and Standing Committee for Railways, Electrical and Public Health Departments ಎಂಬುದಾಗಿ ಮೂರು ಸ್ಥಾಯಿ ಸಮಿತಿಗಳು ಮಾತ್ರ ಇದ್ದವು. ಆದರೆ ಈಗ ಸರ್ಕಾರದವರು ನೇಮಕ ಮಾಡಬೇಕೆಂದಿರುವುದು ಹನ್ನೊಂದು ಸ್ಥಾಯಿ ಸಮಿತಿಗಳನ್ನು. ಪ್ರತಿಯೊಂದರಲ್ಲಿಯೂ ಆರು ಜನ ಸದಸ್ಯರಿರಬೇಕೆಂದು ಮಾಡಿದ್ದಾರೆ. ಎಂದರೆ, ಒಟ್ಟು 66 ಜನ ಸದಸ್ಯರಿರಬೇಕೆಂದಹಾಗಾಯಿತು. ಈ ಸರ್ಕಾರಿ ಆಜ್ಞೆಯಲ್ಲಿ ತಿಳಿಸಿರುವಂತೆ ಈ ಸಮಿತಿಗಳನ್ನು ಯಾವ ಉದ್ದೇಶದಿಂದ ರಚಿಸಬೇಕೆಂದಿದ್ದಾರೆಂದರೆ, ಈ ಶಾಸನಸಭೆ ವರ್ಷಕ್ಕೆ ಎರಡು ಅಥವಾ ಮೂರು ಸಾರಿ ಮಾತ್ರ ಸೇರುತ್ತದೆ. ಆದಕಾರಣ ಸರ್ಕಾರದವರು ಆಡಳಿತದ ಅನೇಕ ಮುಖ್ಯ ವಿಷಯಗಳಲ್ಲಿ ಯಾವ ರೀತಿನೀತಿಗಳನ್ನನುಸರಿಸಿ ಕೆಲಸ ಮಾಡುತ್ತಾರೆಂಬುದನ್ನು ಆಗಾಗ ಈ ಸಭೆಯ ಗಮನಕ್ಕೆ ತರುವುದು ಸಾಧ್ಯವಾಗುವುದಿಲ್ಲ, ಆದುದರಿಂದ ಇಂತಹ ಸಮಿತಿಗಳನ್ನು ರಚನೆ ಮಾಡಿ ಅವುಗಳ ಮೂಲಕ ಈ ಸಭೆಯ ಸದಸ್ಯರುಗಳ ಗಮನಕ್ಕೆ ತರುವ ಉದ್ದೇಶದಿಂದ ಮಾಡಿರುವುದಾಗಿ ಹೇಳಿದ್ದಾರೆ. ಈ ಸಮಿತಿಗಳನ್ನು ವರ್ಷಕ್ಕೆ ಎರಡು ಸಾರಿಗೆ ಕಡಿಮೆಯಿಲ್ಲದಂತೆ ಕರೆಯುವುದಕ್ಕೆ ಏರ್ಪಾಡು ಮಾಡುತ್ತೇವೆಂದು ತಿಳಿಸಿದ್ದಾರೆ. ವರ್ಷಕ್ಕೆ ಎರಡು ಸಾರಿ ಅವುಗಳನ್ನು ಕರೆಯುವುದಾದರೆ, ಈ ಸಭೆಯೇ ಎರಡು ಮೂರು ಸಾರಿ ಸೇರುತ್ತದೆ. ಆಗ ಇಲ್ಲಿಯೇ ನಮಗೆ ಏನು ಹೇಳಬೇಕೋ ಅದನ್ನೆಲ್ಲಾ ಹೇಳಬಹುದು. ಪುನಃ ಈ ಹೊಸ ಸಮಿತಿಗಳೇಕೆ! ಆಡಳಿತದ ಖರ್ಚು ವೆಚ್ಚಗಳನ್ನು ಕಡಿಮೆ ಮಾಡಬೇಕೆಂದಿರುವಾಗ ಮತ್ತೆ ಹೀಗೆ ಖರ್ಚನ್ನು ಹೆಚ್ಚು ಮಾಡುವ ನೀತಿಯನ್ನೇ ಏಕೆ ಅನುಸರಿಸುತ್ತಾರೆ! ಒಂದು ವೇಳೆ ಅತ್ಯವಶ್ಯಕವಾಗಿ ಮಾಡಲೇಬೇಕಾಗಿ ಬಂದು, ಹಣಕಾಸಿನ ಸ್ಥಿತಿ ಎಷ್ಟೇ ಕಷ್ಟವಾಗಿದ್ದರೂ ಮಾಡಲೇಬೇಕೆಂಬ ಅಭಿಪ್ರಾಯವಿದ್ದರೆ ಮಾಡಬಹುದಾಗಿತ್ತು. ಈ ಸಮಿತಿಗಳನ್ನು ಮಾಡದಿದ್ದರೆ ಆಡಳಿತ ನಡೆಸುವುದಕ್ಕಾಗುವುದಿಲ್ಲವೆ? ಅಥವಾ ಇವುಗಳನ್ನು ಮಾಡುವುದರಿಂದ ಸರ್ಕಾರದ ಎಲ್ಲ ಕಾರ್ಯನೀತಿಗಳನ್ನು ಮತ್ತು ಕಾರ್ಯ ಚಟುವಟಿಕೆಗಳನ್ನು ಮುಂಚಿತವಾಗಿಯೇ ನಮಗೆ ತಿಳಿಸಿ ನಮ್ಮ ಸಲಹೆ ಪಡೆಯಲು ಸಾಧ್ಯವೆ! ಏಕೆಂದರೆ ಇವುಗಳು ಸೇರುವುದು ವರ್ಷಕ್ಕೆ ಎರಡು ಅಥವಾ ಮೂರು ಸಾರಿ ಮಾತ್ರ.

Sri H. K. VEERANNA GOWDA.—It may be four times.

Sri L. SIDDAPPA.—Why not say that the Standing Committees meet every month? No, that is not your intention. Under these circumstances, I submit that these Standing Committees serve absolutely no useful purpose. On the other hand, I may be permitted to say that these Standing Committees have been devised with a view to placate the Members of the Legislature.

A VOICE.—I do not agree.

Sri L. SIDDAPPA. The Hon'ble Member may not agree. But that is my view and I hold to that view.

The Hon'ble Sri H. C. DASAPPA.—It is a bit of reflection on one's own self.......

Sri L. SIDDAPPA.—I am the last person to cast any kind of reflection on anybody. Under what circumstances these committees were thought of, the country will judge.

The Hon'ble Sri K. CHENGALARAYA REDDY (Leader of the House).—May I inform the Hon'ble Member that the decision to form standing committees was taken at the end of September or the beginning of October at Mysore during Dasara? Only the Government Order was issued recently. But the decision was taken much earlier, not in recent days.

Sri L. SIDDAPPA.—There is no mention of that either in the Preamble or in the body of the Government Order.

The Hon'ble Sri K. CHENGALARAYA REDDY.—But that is a fact.

Sri L. SIDDAPPA.—I do not question the statement of the Hon'ble Leader of the House. But my honest opinion is that these Standing Committees serve no useful purpose. On the other hand, they may be the cause for a lot of delay in the despatch of Government business.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳುವುದಾದರೆ, ನಮ್ಮ ಸರ್ಕಾರದವರು ಸಮಿತಿಗಳನ್ನು ನೇಮಕ ಮಾಡುವ ವಿಧಾನ ವಿಚಿತ್ರವಾಗಿದೆ. ಉದಾಹರಣೆಗೆ, ಭೂಕಂದಾಯ ಸುಧಾರಣಾ ಸಮಿತಿಯನ್ನು ತೆಗೆದು ಕೊಳ್ಳೋಣ. ಅದರ ಸದಸ್ಯರ ಸಂಖ್ಯೆ ಎಷ್ಟಿದೆಯೆಂದರೆ, ಅವರ ಹೆಸರುಗಳನ್ನೆಲ್ಲಾ ಮುದ್ರಣ ಮಾಡಬೇಕಾದರೆ ಎರಡು ಪುಟಗಳು ಬೇಕಾಗುತ್ತವೆ. ಇಂಥ ಸಮಿತಿಗಳನ್ನು ನಮ್ಮ ಪಕ್ಕದಲ್ಲಿರತಕ್ಕ ಬೊಂಬಾಯಿ ಸರ್ಕಾರದವರೂ ಮಾಡಿದ್ದರು. ಇಂಥಾ ಸಮಿತಿಗಳನ್ನು ಮಾಡಿದರೆ ಆ ವಿಷಯದಲ್ಲಿ ಸರಿಯಾಗಿ ತಿಳಿವಳಿಕೆ ಕೊಡುವವರು ಯಾರೋ ಅವರನ್ನು ಸೇರಿಸಿ ಮಾಡುವುದು ಪದ್ಧತಿ. ಅದುಬಿಟ್ಟು 20-30 ಜನರನ್ನೊಳಗೊಂಡ ಸಮಿತಿಯನ್ನು ಮಾಡಿದರೆ ಆ ಸಮಿತಿಯ ಕೆಲಸ ಹೇಗೆ ಸುಸೂತ್ರವಾಗಿ ನಡೆಯಬೇಕು !

Sri H. K. VEERANNA GOWDA.—Only six members on each committee.

The Hon'ble Sri H. SIDDAIYA (Minister for Revenue and Excise).—It is old history. The Hon'ble Member made no such comment when it was formed.

Sri L. SIDDAPPA.—It was felt that Government would take a lesson from it but they did not take it. ಅದರಿಂದ ಕೆಲಸ ಸುಸೂತ್ರವಾಗಿ ನಡೆಯುವುದಿಲ್ಲ.

The Hon'ble Sri H. SIDDAIYA.—That is why the strength of each committee is reduced

Sri L. SIDDAPPA.—Thank you. ಒಂದು ಉದಾಹರಣೆ ಹೇಳುವುದಾದರೆ......

Sri M. V. KRISHNAPPA (Kolar District—General).—What about the Economic Conference?

Sri L. SIDDAPPA.—It is a conference and not a committee.

Sri H. K. VEERANNA GOWDA.—Hon'ble Member is beating a dead horse. The Committee's work is over.

Sri L. SIDDAPPA.—My observation is relevant in so far as the proposed Standing Committees are concerned. ಇದರಿಂದ ಏನಾಗುತ್ತದೆಂದರೆ ಕೆಲಸ ಸುಸೂತ್ರವಾಗಿ ಜಾಗ್ರತೆ ನಡೆಯುವುದಕ್ಕೆ ಅವಕಾಶವಾಗುವುದಿಲ್ಲ, ವ್ಯವಸಾಯದ ಕಾಲೇಜನ್ನು ಎಲ್ಲಿ ಸ್ಥಾಪಿಸಬೇಕೆಂಬ ವಿಷಯದಲ್ಲಿ ಸರ್ಕಾರದವರು ಒಂದು ಸಮಿತಿಯನ್ನು ನೇಮಕಮಾಡಿದರು. 194-ರಲ್ಲಿ ಆಯಿತು. ಆವಾಗಿ ಈಗ 3 ವರ್ಷವಾಗಿದೆ. ಎರಡು ಸಾರಿ ಈ ಸಭೆಯ ಮುಂದೆ ಚರ್ಚೆಗೂ ಬಂದಿತ್ತು. ಇವತ್ತಿಗೂ ಆ ಸಮಿತಿಯವರು ವರದಿ ಕಳುಹಿಸಿದ್ದಾರೋ ಇಲ್ಲವೊ ತಿಳಿಯದು. ಅದನ್ನು ಸರ್ಕಾರದವರು ಈ ಸಭೆಯ ಗಮನಕ್ಕೆ ತಂದಿಲ್ಲ.

Sri M. V. KRISHNAPPA.—The College is going on.

Sri L. SIDDAPPA.—The College is going on in Nissen huts; in sheds. Government also is going on. Why I am stressing these things is that if Government wants that its work should be carried on smoothly and promptly, ಅಂಥ ಸಮಿತಿಗಳಿಂದ ಪ್ರಯೋಜನವಾಗುವುದಿಲ್ಲ.

The Hon'ble Sri H. C. DASAPPA.—Then the Land Revenue Committee is useless! The Co-ordination Committee is useless! The Municipalities Committee also is useless!

Sri L. SIDDAPPA.—I do not say that these Committees are useless. In constituting the committees it is no good putting 30 or 40 members on them. The Government of Madras have constituted Committees. What is the strength of their committees? What is the strength of our Land Revenue Revision Committee? I must really congratulate the Hon'ble Member Sri Gundappa Gowda that he was able to send a report with so many members on the Committee. I know Government put pressure and issued repeated reminders to the Chairmen of these Committees to submit reports.

Rajamantrapravina H. B. GUNDAPPA GOWDA (Haassn District—General).—Not under duress.

Sri L. SIDDAPPA.—From a question in the previous report we can see that.

The Hon'ble Sri H. C. DASAPPA.—They have done very expeditiously.

Sri L. SIDDAPPA.—They have done. That is why I congratulated that in spite of the huge number of members they had submitted reports.

ಶ್ರೀ ಭೀಮಪ್ಪನಾಯಕರು ಸಮಿತಿಯವರಿಗೆ ಎಷ್ಟನೇ ತಾರೀಖಿನಲ್ಲಿ ವರದಿ ಒಪ್ಪಿಸಬೇಕೆಂದು ಹೇಳಿದ್ದರೋ ಆ ತಾರೀಖಿನಲ್ಲಿ ಒಪ್ಪಿಸಲು ಸಾಧ್ಯವಾಗಲಿಲ್ಲ. ಕಾಲಾವಕಾಶ ಕೊಡಿ ಎಂದು ಕೇಳಿದರು ಇದನ್ನು ಅವರ ವರದಿಯನ್ನು ಓದಿ ಹೇಳುತ್ತಿದ್ದೇನೆ. ಈ ರೀತಿ ಆದರೆ ಖಂಡಿತ.............

ಶ್ರೀ ಎ. ಭೀಮಪ್ಪನಾಯಕರು.—ಶ್ರೀ ಸಿದ್ದಪ್ಪನವರು ಹೇಳಿದ ವಿಷಯದಲ್ಲಿ ನಾನು ಕಾಲಾವಕಾಶ ಕೇಳಿದೆನೇ ಹೊರತು, ಸರ್ಕಾರದವರೇನೂ ನನಗೆ ರಿಮೈಂಡರ್ ಕಳುಹಿಸಲಿಲ್ಲ. ವಿಶದವಾಗಿ ವರದಿ ಕೊಡಬೇಕಾಗಿರುವುದರಿಂದ ಕಾಲಾವಕಾಶ ಸಾಲದು, ಆದ್ದರಿಂದ ಇನ್ನೂ ಸ್ವಲ್ಪ ಕಾಲ ಕೊಡಬೇಕೆಂದು ಹೇಳಿ ಕಾಲಾವಕಾಶ ತೆಗೆದುಕೊಂಡೆವು.

Sri L. SIDDAPPA.—It is a matter on record. I think it is better that we do not probe deep into the matter. At least Government files will bear out what it is.

ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರತಕ್ಕ ಈ ಭಾಷಣದಲ್ಲಿ ಒಂದು ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪನೆ ಮಾಡುತ್ತಾರೆಂದು ನಿರೀಕ್ಷೆ ಮಾಡಿದ್ದೆ. ಮಲೆನಾಡಿನ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಳ್ಳುವವರಾಗಿದ್ದಾರೆಂಬುದನ್ನು ಶ್ರೀಮನ್ಮಹಾರಾಜರವರು ಪ್ರಸ್ತಾಪಿಸುತ್ತಾರೆಂದು ನಿರೀಕ್ಷಿಸಿದ್ದೆ. ಆದರೆ ಆ ನಿರೀಕ್ಷೆ ಫಲಿಸಲಿಲ್ಲ ಎಂದು ನಾನು ನನ್ನ ಹಿಂದಿನ ಭಾಷಣದಲ್ಲಿ ಹೇಳಿದ್ದೆ. ಹಿಂದಿನ ಭಾಷಣದಲ್ಲಿ ಹೇಳಿದ್ದನ್ನು ಈಗಲಾದರೂ ತಿಳಿಸುತ್ತಾರೆಂದು ನಿರೀಕ್ಷಿಸಿದ್ದೆ. ಆ ವಿಷಯದಲ್ಲಿ ತುಂಬಾ ನಿರಾಶೆಯಾಗಿದೆ. ಇಂಡಿಯಾ ಸರ್ಕಾರದವರು ಒಂದು ಸಮಿತಿ ಮಾಡಿದ್ದಾರೆ, ಆ ಸಮಿತಿಯವರು ಕಾರ್ಯಕ್ರಮ ತೆಗೆದು ಕೊಳ್ಳುತ್ತಾರೆಂದು ಇದಕ್ಕೆ ಜವಾಬಾಗಿ ಹೇಳಬಹುದು. ಅವರು ಮಾಡಬೇಕಾದರೂ ಕೂಡ ಆಯಾಯಾ ಪ್ರಾಂತ್ಯಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಹಣ ಒದಗಿಸುವುದು ಆಯಾಯಾ ಸರ್ಕಾರಗಳವರೇ ಆದ್ದರಿಂದ ನಾನು ಹೇಳುವುದು ಇಷ್ಟೆ. ಅವರು ಎಷ್ಟೋ ಕೇಳಿದ್ದಾರೆ. ಅದನ್ನು ಕೊಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ ಮತ್ತು ಇಂತಿಂಥಾ ಬಾಬುಗಳಲ್ಲಿ ಮುಂದುವರಿಯಬೇಕೆಂದಿದ್ದಾರೆ. ಆ ರೀತಿ ಮುಂದುವರಿಸಿಕೊಂಡು ಹೋಗುವುದಕ್ಕೂ ನಮ್ಮ ಒಪ್ಪಿಗೆ ಇದೆ. ಇಷ್ಟಾದರೂ ಯಾವ ದೃಷ್ಟಿಯಿಂದ ನೋಡಿದರೂ ಈ ಭಾಷಣ ಬಹಳ ನಿರಾಶಾದಾಯಕವಾಗಿದೆ, ಆಶಾದಾಯಕವಾಗಿಲ್ಲ ಎಂದು ಹೇಳಿ ನನ್ನ ಮಾನ್ಯ ಮಿತ್ರರು ತಂದಿರತಕ್ಕ ಈ ತಿದ್ದುಪಡಿಯನ್ನು ಪುಷ್ಟೀಕರಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಮೊನ್ನೆ ಮಹಾರಾಜರವರು ಮಾಡಿದ ಭಾಷಣದಲ್ಲಿ ಅವರು ಮೈಸೂರು ಸರ್ಕಾರದ ನೀತಿಗಳನ್ನು ಸಾಂಪ್ರದಾಯಕವಾಗಿ ಪ್ರಸ್ತಾಪಿಸಿದ್ದಾರೆ. ಆ ಪ್ರಸ್ತಾವನೆಗೆ ಈ ಸಭೆ ತನ್ನ ಕೃತಜ್ಞತೆಯನ್ನು ಸೂಚಿಸಬೇಕೆಂದು ನಮ್ಮ ಸ್ನೇಹಿತರಾದ ಶ್ರೀ ಗೋವಿಂದರೆಡ್ಡಿಯವರು ಒಂದು ನಿರ್ಣಯವನ್ನು ಮಂಡಿಸಿದ್ದಾರೆ. ಈ ನಿರ್ಣಯವನ್ನು ಸಮರ್ಥಿಸತಕ್ಕಂಥಾ ಕಾಲದಲ್ಲಿ ನಾಲ್ಕು ಮಾತು ಹೇಳಬೇಕೆಂದು ನನ್ನ ಮನಸ್ಸಿಗೆ ಅನ್ನಿಸುತ್ತಿದೆ. ಜನಾಬ್ ಇಮಾಂರವರು ಇದಕ್ಕೆ ಒಂದು ತಿದ್ದುಪಡಿಯನ್ನು ಸೂಚನೆ ಮಾಡಿ ಕೆಲವು ಅಂಶಗಳನ್ನು ತಿಳಿಸಿದ್ದಾರೆ. ಮತ್ತು ಆ ತಿದ್ದುಪಡಿಯನ್ನು ಸಮರ್ಥನೆ ಮಾಡಿದಂಥ ಮಹಾಶಯರು ಸಹ ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಇದರಲ್ಲಿ ಒಂದು ವಿಷಯವನ್ನು ನಾವು ಈ ಸಂದರ್ಭದಲ್ಲಿ ನೋಡಬೇಕಾದ್ದು ಅತ್ಯಾವಶ್ಯಕ. ಪ್ರಜಾಪ್ರಭುತ್ವದಲ್ಲಿ, ಒಂದು ಹೊಸ ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ರಾಜಪ್ರಮುಖರ ಭಾಷಣದಲ್ಲಿ ಏನೇನು ಪ್ರಸ್ತಾಪನೆ ಮಾಡಿದ್ದಾರೋ ಅವುಗಳ ಮೇಲೆ ಎಷ್ಟೆಷ್ಟು ಮಟ್ಟಿಗೆ ವಿಮರ್ಶೆ ಮಾಡಬೇಕೆಂಬ ವಿಷಯದಲ್ಲಿ ಸತ್ಸಂಪ್ರದಾಯ ಹಾಕಬೇಕಾದ್ದು ಅತ್ಯಾವಶ್ಯಕವಾಗಿದೆ. ಈ ಭಾಷಣ ಶ್ರೀಮನ್ಮಹಾರಾಜರವರು ಮಾಡಿದಾಗ್ಯೂ ಕೂಡ ಅದು ಸರ್ಕಾರದ ಒಂದು ನೀತಿಯನ್ನು ಪ್ರತಿಪಾದಿಸುವುದು ಮತ್ತು ಪ್ರಸ್ತಾಪಿಸುವುದು ಎಂಬ ವಿಚಾರ ನಿರ್ವಿವಾದವಾದದ್ದು. ಈ ಭಾಷಣದಲ್ಲಿ ಏನೇನು ಅಂಶಗಳನ್ನು ಹೇಳಿರುತ್ತಾರೆ ಎಂಬುದನ್ನು ಜನತೆ ಕುತೂಹಲದಿಂದ ನೋಡುತ್ತಾ ಇರುತ್ತದೆ. ಸಾಮಾನ್ಯವಾಗಿ ಯಾವ ಪಾರ್ಟಿ ಅಧಿಕಾರದಲ್ಲಿದ್ದರೆ ಆ ಪಾರ್ಟಿ ಮುಖಂಡರು ಅನುಸರಿಸತಕ್ಕ ನೀತಿಯನ್ನು ರಾಜಪ್ರಮುಖರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸುವುದು ಸಂಪ್ರದಾಯ. ಯಾವ ಯಾವ ಹೊಸ ನೀತಿಗಳನ್ನು ಸರ್ಕಾರದವರು ಮನಸ್ಸಿನಲ್ಲಿಟ್ಟು ಕೊಂಡಿದ್ದಾರೆ, ಹಳೇ ನೀತಿಗಳಲ್ಲಿ ಯಾವ ಯಾವ ಮಾರ್ಪಾಡುಗಳನ್ನು ಮಾಡಬೇಕೆಂದಿದ್ದಾರೆ, ಇತ್ಯಾದಿ, ಇತ್ಯಾದಿ, ವಿಷಯಗಳನ್ನು ಜನತೆ ಕುತೂಹಲದಿಂದ ಕಾದು ನೋಡುತ್ತಾ ಇರುತ್ತದೆ. ಸರ್ಕಾರದ ಮುಖ್ಯ ಅಭಿಪ್ರಾಯವಾದರೂ ಜನತೆಯ ಜನಜೀವನ

(ಶ್ರೀ ಎಚ್. ಎಂ. ಚನ್ನಬಸಪ್ಪನವರು.)

ವನ್ನು ಸರ್ವ ವಿಧದಲ್ಲೂ ಉತ್ತಮಗೊಳಿಸಬೇಕೆಂಬುದೇ ಆಗಿದೆ. ಇದು ಯಾವ ಸರ್ಕಾರವೇ ಆಡಳಿತದಲ್ಲಿರಲಿ ಅವರ ಒಂದು ಮುಖ್ಯ ಉದ್ದೇಶವಾಗಿರುತ್ತದೆ. ಈ ಉದ್ದೇಶವನ್ನು ಯಾವ ರೀತಿ ಕಾರ್ಯಸಾಧನೆ ಮಾಡಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ಬರಬಹುದೇ ಹೊರತು ಮುಖ್ಯ ಗುರಿಯ ವಿಚಾರದಲ್ಲಿ ಯಾರದೂ ಭಿನ್ನಾಭಿಪ್ರಾಯವಿರುವುದಿಲ್ಲ. ಧ್ಯೇಯ ಸಾಧನೆ ಮಾಡತಕ್ಕ ರೀತಿ ನೀತಿಯ ವಿಚಾರದಲ್ಲಿ/ಹಿಂದಿನ ಅನುಭವ ಮತ್ತು ಮುಂದಿನ ಗುರಿ—ಇವೆರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು, ಅದರ ಜೊತೆಗೆ ಸಾಮಾನ್ಯವಾಗಿ ಪ್ರಜಾಪ್ರಭುತ್ವ ಮುಖ್ಯವಾಗಿ ಗಮನಿಸಬೇಕಾಗಿರುವಂಥ ಪ್ರಜಾಭಿಪ್ರಾಯವೇನೆಂಬುದನ್ನೂ ಅನುಸರಿಸಿಕೊಂಡು ನಮ್ಮ ನೀತಿಯನ್ನು ಬೆಳೆಸಿಕೊಂಡು ಹೋಗಬೇಕೆಂಬುದನ್ನು ಎಲ್ಲರೂ ಒಪ್ಪಬೇಕು. ಅಲ್ಲದೆ, ಯಾವ ನೀತಿಯೇ ಆಗಲಿ ಎಲ್ಲಾ ಕಾಲಕ್ಕೂ ಸಮರ್ಪಕವಾದುದೆಂದೂ ಹೇಳುವುದಕ್ಕೆ ಸಾಧ್ಯವಿಲ್ಲ. ಪ್ರಜಾಭಿಪ್ರಾಯ ಯಾವ ಯಾವ ರೀತಿ ಬದಲಾವಣೆ ಹೊಂದುತ್ತದೆಯೋ ಅದನ್ನು ನೋಡಿಕೊಂಡು ಜಾಗರೂಕತೆಯಿಂದ ಅದಕ್ಕನುಗುಣವಾಗಿ ನಮ್ಮ ನೀತಿಯನ್ನು ರೂಪಿಸಿಕೊಂಡು ಹೋಗುವುದು ಪ್ರಜಾಪ್ರಭುತ್ವದ ಸಲ್ಲಕ್ಷಣ. ಆದ್ದರಿಂದ, ಈಗ ಶ್ರೀಮನ್ಮಹಾರಾಜರವರು ಮಾಡಿರತಕ್ಕ ಭಾಷಣದಲ್ಲಿ ನೀತಿಗಳ ಬದಲಾವಣೆಗಳೇನಾದರೂ ಇದೆಯೇ, ಹೊಸ ನೀತಿಗಳ ಉದ್ಘಾಟನೆ ಏನಾದರೂ ಇದೆಯೇ ಎಂಬುದನ್ನು ಜನರು ಕಾತುರತೆಯಿಂದ ನೋಡುತ್ತಿದ್ದಾರೆಂದು ನಾನು ಮೊದಲೇ ಹೇಳಿದೆ. ಈ ವಿಚಾರದಲ್ಲಿ ನಾನೀಗ ನಾಲ್ಕಾರು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಶ್ರೀಮನ್ಮಹಾರಾಜರವರು ಪ್ರಸ್ತಾಪ ಮಾಡಿರತಕ್ಕ ವಿಷಯಗಳ ಮೇಲೆ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ.—ಹಣಕಾಸಿನ ವಿಚಾರದಲ್ಲಿ ಅವರು ಪ್ರಸ್ತಾಪ ಮಾಡುತ್ತಾ ತಿಳಿಸಿದ್ದಾರೆ, ನಮ್ಮ ಹಣಕಾಸಿನ ಸ್ಥಿತಿಯನ್ನು ಉತ್ತಮಪಡಿಸುವುದಕ್ಕಾಗಿ ಏಕಾನಮಿ ಆಫೀಸರವರು ಏನೇನು ಹೇಳಿದ್ದಾರೋ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಆಡಳಿತದಲ್ಲಿ ಜಾರಿಗೆತರಬೇಕೆಂದು ಸರ್ಕಾರದವರು ಅಭಿಪ್ರಾಯವುಳ್ಳವರಾಗಿದ್ದಾರೆಂದು ತಿಳಿಸಿದ್ದಾರೆ. ಇದೇನೋ ಸಾಧುವಾಗಿದೆ, ಅದಕ್ಕೆ ಯಾರೂ ಭಿನ್ನಾಭಿಪ್ರಾಯ ಪಡುವುದಿಲ್ಲ. ಆದರೆ ಮಾತ್ರ, ಇವುಗಳನ್ನು ಮಾಡುವುದರಲ್ಲಿ ಆದಷ್ಟು ಜಾಗ್ರತೆ ಮಾಡಿ, ಹಾಗೆ ಮಾಡದೆ ಹೋದರೆ ಮುಂದೆ ಇನ್ನೂ ಕಷ್ಟ ಬರುತ್ತದೆಂದು ಜನಾಭಿಪ್ರಾಯ ಮೂಡುವುದೂ ಸಾಧುವೇ. ಈ ದೃಷ್ಟಿಯಿಂದ ಸರ್ಕಾರದವರೂ ಕೂಡ ನಾವು ಮಾಡುವ ಟೀಕೆ ಟಿಪ್ಪಣಿಗಳನ್ನು ಸಹೃದಯದಿಂದ ರಚನಾತ್ಮಕ ಮನೋಭಾವದಿಂದ ತೆಗೆದುಕೊಳ್ಳಬೇಕೇ ಹೊರತು ಬೇರೆ ರೀತಿ ಭಾವಿಸಬಾರದು. ಒಂದು ಸದ್ಭಾವನೆಯಿಂದ ಸದಸ್ಯರುಗಳು ಟೀಕೆಮಾಡಿದ್ದಾರೆಂದು ಪರಿಗಣಿಸುವುದು ಒಳ್ಳೆಯದು. ಏಕೆಂದರೆ ಎಷ್ಟೋವೇಳೆ ಈ ಟೀಕೆಗಳನ್ನು ಬೈಗಳೆಂದು ಭಾವಿಸುವುದಕ್ಕೂ ಅವಕಾಶವಿದೆ, ಸದ್ಭಾವನೆಯಿಂದ ಮಾಡಿದ್ದೆಂದು ಭಾವಿಸುವುದಕ್ಕೂ ಅವಕಾಶವಿದೆ. ಆದ್ದರಿಂದ ನಾನು ಹೇಳುವುದನ್ನು ಮುಖ್ಯವಾಗಿ ರಚನಾತ್ಮಕ ದೃಷ್ಟಿಯಿಂದ ಹೇಳಿರುವುದೆಂದೂ, ತಮ್ಮಿಂದ ದೇಶಕ್ಕೆ ಇನ್ನೂ ಹೆಚ್ಚಿನ ಸೇವೆ ದೊರೆಯಲೆಂಬ ಉದ್ದೇಶದಿಂದ ಮಾಡಿದೆಯೆಂದೂ ಪರಿಗಣಿಸಿ ಕೆಲಸ ಮಾಡಿದರೆ ಮಾತ್ರ ಈ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯುತ್ತದೆಂದು ನಾನು ಅಭಿಪ್ರಾಯ ಪಡುತ್ತೇನೆ. ಆದಾಯ ಹೆಚ್ಚು ಮಾಡಿ, ಖರ್ಚು ಬಾಬುಗಳನ್ನು ಕಡಿಮೆಮಾಡಿ ಅದರಿಂದ ಜನತೆಗೆ ಹೆಚ್ಚಿನ ಉಪಯೋಗವನ್ನು ಉಂಟು ಮಾಡಿಕೊಡಬೇಕೆಂಬುದನ್ನು ಆದಷ್ಟು ಜಾಗ್ರತ ಮಾಡಬೇಕೆಂಬುದೇ ನನ್ನ ಅಭಿಪ್ರಾಯ. ಈಗ ಸರ್ಕಾರದವರು ಮಾಡುತ್ತಿರತಕ್ಕ ವೇಗ ಸಾಕೆಂದು ಸರ್ಕಾರದವರೂ ಕೂಡ ಅಭಿಪ್ರಾಯ ಪಡುತ್ತಾರೆಂದು ನಾನು ನಂಬುವುದಿಲ್ಲ. ಅವರ ಆಶಯವೂ ಇದೇ ಆಗಿದ್ದರೂ, ಕಾರ್ಯರೂಪಕ್ಕೆ ತರುವುದರಲ್ಲಿ ಮಾತ್ರ ನಿಧಾನವಾಗುತ್ತಿದೆ. ಆದ್ದರಿಂದ ಈ ನನ್ನ ಸೂಚನೆಯನ್ನು ತೆಗೆದುಕೊಂಡು ಮುಂದೆ ರಾಜಪ್ರಮುಖರವರು ಭಾಷಣಮಾಡುವಾಗ ಸರ್ಕಾರದವರು ಇಂತಿಂಥಾ ಕೆಲಸಗಳನ್ನು ಮಾಡಿದ್ದಾರೆಂಬುದನ್ನು ತಿಳಿಸಿದರೆ ಸರಿಹೋಗುತ್ತದೆ.

ಆಮೇಲೆ ಸಾಲಸೋಲಗಳ ವಿಚಾರದಲ್ಲಿ ಒಂದು ವಿಷಯ ಹೇಳಬೇಕು. ಮುಖ್ಯವಾಗಿ ನಾವು ಹೀಗೆ ಸಾಲವನ್ನು ತೆಗೆದುಕೊಳ್ಳತಕ್ಕ ಪರಿಸ್ಥಿತಿಯಲ್ಲಿದ್ದೇವಲ್ಲಾ ಎಂದು ವಿಷಾದಿಸುತ್ತೇನೆ. ಏಕೆಂದರೆ, 'ಸಾಲವನ್ನು ಕೊಂಬಾಗ ಹಾಲೋಗರುಂಡಂತೆ' ಇದ್ದು, ಅವನ್ನು ವಾಪಸ್ಸು ಕೊಡುವಾಗ ನಮಗೆ 'ಕಿಬ್ಬದಿಯ ಕೀಲು ಮುರಿದಂತೆ'' ಆಗುತ್ತದೆಂದು ಸರ್ವಜ್ಞ ಕವಿಯು ಹೇಳಿರುವುದು ನಮ್ಮ ಅನುಭವಕ್ಕೆ ಬರುತ್ತದೆ. ಆದಕಾರಣ ನಾವು ಯಾವಾಗ್ಯೂ ಹೆಚ್ಚು ಹಣವನ್ನು ಉಳಿತಾಯ ಮಾಡಿ ಅದನ್ನು ಮುಂದೆ ಆಗಬೇಕಾದ ದೇಶೋನ್ನತಿಯ ಕಾರ್ಯಗಳಿಗೆ ಖರ್ಚುಮಾಡಬೇಕೇ ಹೊರತು ಸಾಲ ಮಾಡಿ... ....

ಅಧ್ಯಕ್ಷರು.—ಅವೆಲ್ಲಾ ಸಂಸಾರಕ್ಕೆ ಸಂಬಂಧಪಟ್ಟದ್ದೇ ಹೊರತು ಪ್ರಕೃತ ವಿಷಯಕ್ಕೆ ಸಂಬಂಧಪಟ್ಟದ್ದಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದರಲ್ಲೂ ಈ ವಿಚಾರವನ್ನು ಶ್ರೀ ಚನ್ನಬಸಪ್ಪನವರು ಹೇಳುತ್ತಾರೆಯೇ ಎಂದು ನನಗೆ ಬಹಳ ಆಶ್ಚರ್ಯ !

ಶ್ರೀ ಎಚ್. ಎಂ ಚೆನ್ನಬಸಪ್ಪನವರು.—ಈಗ ತಾವು ಮಾಡುತ್ತಿರತಕ್ಕ ರೀತಿ ಸರಿಯಾಗಿಲ್ಲವೆಂಬುದನ್ನು ಹೇಳುತ್ತಿದ್ದೇನೆ, ಅಷ್ಟೆ.

ಅಧ್ಯಕ್ಷರು —ಸಾಲ ತೆಗೆದುಕೊಳ್ಳಬಾರದು, ತೆಗೆದುಕೊಳ್ಳುವುದು ಸರಿಯಲ್ಲ ಎಂಬುದು ಈಗ ಸಭೆಯ ಮುಂದಿರುವ ವಿಷಯವಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸಾಲವನ್ನು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿರುವುದು ಸರಿಯಲ್ಲವೆಂಬುದು ನನ್ನ ಅಭಿಪ್ರಾಯ.

ಜನಾಬ್ ಜೆ. ಮಹಮದ್ ಇಮಾಂರವರು.—ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರೇನಾದರೂ ಸಾಲ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಒಂದಾಣೆ ಸಾಲವನ್ನು ಯಾರಿಗೂ ಕೊಡಬೇಕಾಗಿಲ್ಲ.

ಒಟ್ಟಿನಲ್ಲಿ ನಾನು ಹೇಳುವುದು ಇನ್ನೊಬ್ಬರಿಗೆ ನಾವು ಸಾಲ ಕೊಡುವ ಸ್ಥಿತಿಯಲ್ಲಿದ್ದೇವೆ ಎನ್ನುವುದು ಸಂತೋಷದ ವಿಷಯ. ಅದಿಲ್ಲದೆ ನಾವೇ ಸಾಲ ತೆಗೆದುಕೊಳ್ಳಬೇಕಾಗಿದೆಯೆಂದರೆ ಅದರಲ್ಲಿ ಒಂದು ಸಂದಿಗ್ಧ ಸಂದರ್ಭ ಬಂದೊದಗುತ್ತದೆ. ಏನೆಂದರೆ, ಸಾಲ ಕೊಡುವವರು ಯಾವಾಗ್ಯೂ ನಮ್ಮ ಮೇಲೆ ಏನಾದರೊಂದು ಪ್ರತಿಬಂಧಕ ಹೇರುವುದು ವಾಡಿಕೆ. ಯಾವುದಕ್ಕೆ ಖರ್ಚುಮಾಡಬೇಕಾದರೂ ನಮ್ಮ ಒಪ್ಪಿಗೆ ತೆಗೆದುಕೊಂಡೇ ಮಾಡಬೇಕೆಂದು ಹೇಳುತ್ತಾರೆ. ಆದ್ದರಿಂದ ಗ್ರಾಂಟೇ ಆಗಲಿ, ಸಾಲಸೋಲಗಳೇ ಆಗಲಿ, ಏನೂ ತೆಗೆದುಕೊಳ್ಳದೆ ಯಾವುದೇ ಘನತೆ ಹೊಂದಿದ ಸರ್ಕಾರ ತನ್ನ ತನ್ನ ಕೆಲಸಗಳನ್ನೆಲ್ಲಾ ತನ್ನಿಚ್ಛೆಗೆ ಅನುಸಾರ

ವಾಗಿ ತನಗಿರುವ ಪ್ರಾಂತಿಕ ಸ್ವಾತಂತ್ರ್ಯದ ವಾತಾವರಣದಲ್ಲಿ ನಿರ್ವಹಣೆ ಮಾಡಿದ್ದಿದ್ದರೆ ಎಷ್ಟೋ ಉತ್ತಮವಾಗುತ್ತಿತ್ತೆಂದು ನನ್ನ ಅಭಿಪ್ರಾಯ. ಇದನ್ನೆಲ್ಲಾ ನಾನು ಹೇಳುವುದರ ಉದ್ದೇಶ ಮುಂದೆ ಸರ್ಕಾರದವರು ಯಾವ ರೀತಿ ಹೋಗಬೇಕು, ಯಾವ ರೀತಿ ತಮ್ಮ ನೀತಿಯನ್ನು ಬದಲಾಯಿಸಿಕೊಂಡು ಹೋದರೆ ಮುಂದಿನ ರಾಜಪ್ರಮುಖರ ಭಾಷಣದ ಹೊತ್ತಿಗೆ ದೇಶಕ್ಕೆ ಅನುಕೂಲಗಳೊದಗಿ ಅವುಗಳನ್ನೂ ಭಾಷಣದಲ್ಲಿ ಸೇರಿಸಲು ಸಹಾಯಕವಾಗಲಿ ಎಂದು ಮಾತ್ರ.

ಇದುವರೆಗೂ ಹಣಕಾಸಿಗೆ ಸಂಬಂಧಪಟ್ಟುದಾಯಿತು. ಇನ್ನು ಜನತೆ ಮುಖ್ಯವಾಗಿ ಈ ಭಾಷಣದಲ್ಲಿ ಏನು ನಿರೀಕ್ಷಣೆ ಮಾಡುತ್ತಿದ್ದಿತೆಂಬುದನ್ನು ಸೂಚಿಸುತ್ತೇನೆ. ಸರ್ಕಾರಿ ಖರ್ಚು ಬಾಬುಗಳನ್ನು ಕಮ್ಮಿಮಾಡುವ ಧೋರಣೆ, ಯಾವ ಯಾವ ವಿಚಾರದಲ್ಲಿ ಖೋತಾ ಮಾಡುತ್ತಾರೆಂಬ ಸೂಚನೆಯನ್ನೂ ಇಲ್ಲಿ ಕೊಡುತ್ತಾರೆಂದು ಜನರು ಭಾವಿಸಿದ್ದರು, ಆಹಾರದ ವಿಷಯದಲ್ಲಿ 'Service at cost' ಅನ್ನುವ ನೀತಿಯನ್ನು ರೂಢಿಗೆ ತಂದಾರೇ ಎಂದು ನೋಡುತ್ತಿದ್ದರು. ಇಡೀ ಜನತೆಯಲ್ಲಿ ಕೇವಲ ಒಂದು ಭಾಗಕ್ಕಾಗಿ ಸರ್ಕಾರದ ಹಣದಲ್ಲಿ ಬಹಳವಾಗಿ ಖರ್ಚುಮಾಡುತ್ತಿರುವುದನ್ನು ಅಂದರೆ ಆಹಾರಾದಳಿತಕ್ಕೆ ಸಂಬಂಧಪಟ್ಟ ಖರ್ಚುಗಳನ್ನು ಬಹಳಮಟ್ಟಿಗೆ ಖೋತಾ ಮಾಡುವ ಅಂಶವನ್ನು ಪರ್ಯಾಲೋಚನೆಮಾಡುತ್ತಾರೆಯೇ, ಅಂಥಾ ಸೂಚನೆಯನ್ನೇನಾದರೂ ಈ ಭಾಷಣದಲ್ಲಿ ಕೊಡುತ್ತಾರೆಯೇ ಎಂದು ನಿರೀಕ್ಷಣೆ ಮಾಡುತ್ತಲಿತ್ತು. ಒಂದು ವಿಧದಲ್ಲಿ ಆ ಅಂಶವನ್ನೂ ಇದರಲ್ಲಿ ಅಳವಡಿಸಿದ್ದರೆ ಚೆನ್ನಾಗಿರುತ್ತಿತ್ತು. ಇನ್ನಾದರೂ ಈ ಜನಾಭಿಪ್ರಾಯವನ್ನು ಮನಗಂಡು ಮುಂದಿನ ರಾಜಪ್ರಮುಖರ ಭಾಷಣದಲ್ಲಿ ಸೇರಿಸುವಂತೆ ಸರ್ಕಾರದವರು ಸೂಕ್ತ ಸಲಹೆ ಕೊಡುತ್ತಾರೆಂಬ ಭರವಸೆಯಿಂದಿದ್ದೇವೆ.

Sri A. BHEEMAPPA NAIK.—The House must support that.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—When the Government and the majority party lays down a policy, it is with the full confidence that the House will support it.

ನಾನು ಹೇಳಿದಂತೆ ನಿಜವಾಗಿಯೂ ಜನತೆ ಸರ್ಕಾರದವರು ಆಹಾರದ ನೀತಿಯ ವಿಷಯದಲ್ಲಿ ಏನಾದರೂ ಬದಲಾವಣೆಯನ್ನು ಸೂಚನೆಮಾಡಿಯಾರೇ ಎಂದು ಕಾದುನೋಡುತ್ತಿದ್ದರು. ಏಕೆಂದರೆ, ಈಗಿನ ಆಹಾರದ ಕಷ್ಟ ಪರಿಸ್ಥಿತಿಯಲ್ಲಿ 'ಜನರ ಮನಸ್ಸು ಅಷ್ಟುಮಟ್ಟಿಗೆ ಕಲಕಿಹೋಗಿ ಎಂದಾದರೂ ಈ ಪರಿಸ್ಥಿತಿ ಬದಲಾಯಿಸುತ್ತದೆಯೇ ಎನ್ನಿಸಿದೆ. ಆದ್ದರಿಂದ ನಾವು ಎಲ್ಲಿಯವರೆಗೆ ಪ್ರಜಾಪ್ರಭುತ್ವದಲ್ಲಿ ಕೃಪಾಬದ್ಧವಾಗಿ ಮುಂದುವರಿಯಬೇಕೆಂದು ಆಶಿಸುತ್ತೇವೆಯೋ ಅಲ್ಲಿಯವರೆಗೂ ನಾವು ಯಾವುದರಲ್ಲೂ ನಮ್ಮ ಹಿಂದಿನ ಅನುಭವ, ಮುಂದಿನ ನಮ್ಮ ಗುರಿ ಇದರ ಜೊತೆಗೆ ಪ್ರಜಾಭಿಪ್ರಾಯ—ಇವು ಮೂರನ್ನೂ ಹೊಂದಿಸಿಕೊಂಡುಹೋದರೇ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಈ ದಿವಸದ ಪರಿಸ್ಥಿತಿಯಲ್ಲಿ/ ನೀವು ಗ್ಯಾಲಪ್ ಓಟದ ವೇಗದಲ್ಲಿ ಹೋಗುತ್ತಿರುವಾಗ ಇತ್ತಲಾಗಿ ದೇಶದಲ್ಲಿ ಜನರ ಅಭಿಪ್ರಾಯ ಏನಾಗಿದೆ ಅಥವಾ ಮುಂದೆ ಇದರಿಂದ ಏನಾಗಬಹುದು ಎಂಬುದನ್ನು ಸ್ವಲ್ಪ ಆಲೋಚನೆ ಮಾಡಿ ನೋಡಿದರೆ, ಈ ಆಹಾರ ಹತೋಟಿ ಆಜ್ಞೆ ಅದಷ್ಟು ಬೇಗ ಹೋಗಬೇಕು, ಹೋಗಲೇಬೇಕು ಎಂಬ ಭಾವನೆ ಜನರಲ್ಲಿ ಮೂಡಿಹೋಗಿರಬಹುದೆಂದೂ ಮತ್ತು ಎಲ್ಲರೂ ಈ ಅಭಿಪ್ರಾಯವನ್ನೇ ಎದುರುನೋಡುತ್ತಿರಬಹುದೆಂದೂ ನನಗೆ ಅನಿಸುತ್ತದೆ. ಸರ್ಕಾರದವರ ದೃಷ್ಟಿಯಲ್ಲಿ ಈ ನಿಯಂತ್ರಣ ಆಜ್ಞೆಗಳನ್ನು ಏಕ್‌ದಂ ತೆಗೆದು ಹಾಕಿದರೆ ದೇಶದಲ್ಲಿ ಪರಿಸ್ಥಿತಿ ಏನಾಗುತ್ತದೆಯೋ, ಜನರಿಗೆಲ್ಲಿ ಅನಾನುಕೂಲವಾಗುತ್ತದೋ ಎಂಬ ಭಾವನೆ ಇದ್ದರೆ, ಇತ್ತ ಜನರ ರೀತಿ ನೀತಿಗಳು ದಿನದಿನಕ್ಕೂ ಏನಾಗುತ್ತಿವೆ ಎಂಬುದರ ಕಡೆಗೆ ಅವರು ತಮ್ಮ ದೃಷ್ಟಿಕೋಣವನ್ನು ತಿರುಗಿಸಿ ನೋಡುತ್ತಿಲ್ಲ ಎಂದು ಹೇಳಬೇಕಾಗುತ್ತದೆ. ಈ ಅಂಶದ ಕಡೆಗೂ ತಾವು ಮುಖ್ಯವಾಗಿ ತಮ್ಮ ಗಮನವನ್ನು ನೀಡಬೇಕಾಗಿದೆ. ಹಾಗೆ ಮಾಡದೆ ಇದೇ ರೀತಿ ಅನಿರ್ದಿಷ್ಟಕಾಲದವರೆಗೆ ನಮ್ಮ ಸರ್ಕಾರದವರು ಮತ್ತು ಭಾರತ ಸರ್ಕಾರದವರು ಈ ನಿಯಂತ್ರಣ ಆಜ್ಞೆಗಳನ್ನು ಎಂದಿನವರೆಗೆ ಮುಂದುವರಿಸುತ್ತಾ ಹೋಗುತ್ತಾರೋ ಅಂದಿನವರೆಗೂ ಜನರ ಮನೋಭಾವ ಖಂಡಿತ ಬದಲಾಗುವುದಿಲ್ಲ. ಅನೇಕರಲ್ಲಿ ಹಣದ ಆಸೆಯೆಂಬ ಪೈಶಾಚತ್ವವು ಬೇರೂರಿ ಹೋಗಿ ಅವರು ನೀತಿ ಬಾಹಿರರಾಗಲು ಅವಕಾಶವಾಗುತ್ತಿದೆ. ಯಾವಾಗ ನೀತಿಬಾಹಿರರಾಗುತ್ತಾರೋ ಆಗಲೇ ನಮ್ಮ ಸಂಸ್ಕೃತಿಯೂ ಹೊರಟುಹೋಗುತ್ತದೆ. ಒಂದಾವರ್ತಿ ಹೊರಟುಹೋದ ಸಂಸ್ಕೃತಿಯನ್ನು ಮತ್ತೆ ಸಂಪಾದಿಸಲು ತೀರಾ ಕಷ್ಟ. ಆದುದರಿಂದ ಇದಕ್ಕೆಲ್ಲಾ ಮೂಲಭೂತವಾದ ಕಾರಣ ಈ ನಿಯಂತ್ರಣ ಆಜ್ಞೆಗಳೇ ಆಗಿರುವುದರಿಂದ, ಇವು ಆದಷ್ಟು ಬೇಗ ಹೋಗಬೇಕೆಂದು ನನ್ನ ಅಭಿಪ್ರಾಯ. ಅಥವಾ ಇವುಗಳ ಕಾರ್ಯಾಚರಣೆಯು ನಿರ್ದಿಷ್ಟವಾಗಿ ಎಂದಿನವರೆಗೆ ಇರುತ್ತವೆಂಬುದನ್ನಾದರೂ ತಾವು ಖಚಿತವಾಗಿ ತಿಳಿಸದೆ, ಹೀಗೆ ಅನಿರ್ದಿಷ್ಟವಾಗಿ ಮುಂದುವರಿಸುತ್ತಾ ಹೋಗುವುದರಿಂದ ದೇಶಕ್ಕೆ ತುಂಬಾ ಹಾನಿಯಾಗುತ್ತದೆ. ಆದರೆ ಈಗ ನಾನು ಈ ಬಗ್ಗೆ ತಮ್ಮ ಕಾಲವನ್ನು ಹೆಚ್ಚಾಗಿ ತೆಗೆದುಕೊಳ್ಳಲು ನನಗೆ ಇಷ್ಟವಿಲ್ಲ. ಮುಂದೆ ಈ ಆಹಾರ ಸಮಸ್ಯೆ ವಿಚಾರ ಸಭೆಯಮುಂದೆ ಚರ್ಚೆಗೆ ಬಂದಾಗ ಆಗ್ಯೆ ನಾನು ಈ ಅವಕಾಶವನ್ನು ಉಪಯೋಗಿಸಿಕೊಂಡು ಇನ್ನೂ ಹೆಚ್ಚಿನ ಅಂಕಿ ಅಂಶಗಳೊಂದಿಗೆ ಇದರಲ್ಲಿ ಎಷ್ಟು ಅನಾನುಕೂಲ ಮತ್ತು ತೊಂದರೆಗಳಿವೆಯೆಂಬುದನ್ನು ಸರ್ಕಾರದವರಿಗೆ ತೋರಿಸಿಕೊಡುತ್ತೇನೆ. ಜನರಲ್ಲಿ ಹಣವನ್ನು ಆದಷ್ಟು ಬೇಗ, ಆದಷ್ಟು ಜಾಗ್ರತೆ ಗಳಿಸಬೇಕೆಂಬ ಈ ದುರಾಸೆಯಿಂದ ಈ ಹಣಕ್ಕಿಂತಲೂ ಬಹು ಬೆಲೆಯಾದ ಅವರ ಸಂಸ್ಕೃತಿ ಹೋಗುತ್ತಿದೆ. ಈ ದಿವಸ ನಮ್ಮ ಆರೋಗ್ಯ ಕಮ್ಮಿಯಾದರೆ ನಾವು ಪುನಃ ಅದನ್ನು ಬೇಗ ಸಂಪಾದಿಸಬಹುದು. ಆದರಿಂದ ಅಷ್ಟು ದೇಶಕ್ಕೆ ತೊಂದರೆಯಾಗಲಾರದು. ಈ ದಿವಸ ನಾವು ಗಳಿಸಿದ್ದ ಆಸ್ತಿಯನ್ನು ಕಳೆದುಕೊಂಡರೆ ಮತ್ತೆ ಅದನ್ನು ನಾವು ಸುಲಭವಾಗಿ ಗಳಿಸಬಹುದು. ಆದರೆ ಜನರು ಒಂದಾವರ್ತಿ ನೀತಿಬಾಹಿರರಾದರೆ ಪುನಃ ಅವರನ್ನು ನೀತಿವಂತರನ್ನಾಗಿ ಮಾಡಲು ತುಂಬಾ ಕಷ್ಟ. ಯಾವಾಗ ನೀತಿ ಹೋಗುತ್ತದೋ ಆಗ ಅವರಲ್ಲಿದ್ದ ಸಂಸ್ಕೃತಿಯೂ ಹೋಗಿಬಿಡುತ್ತೆ. ಹೀಗೆ ಸಾವಿರಾರು ವರ್ಷಗಳಿಂದ ಗಳಿಸಿದ್ದ ಸಂಸ್ಕೃತಿಯ ಬೆಲೆ ಎಲ್ಲಕ್ಕಿಂತಲೂ ಹೆಚ್ಚು ಬೆಲೆಯುಳ್ಳದ್ದು.

ನಿನ್ನೆ ಮೊನ್ನೆ ನಡೆದಿರುವಂಥ ಒಂದು ಸಣ್ಣ ಘಟನೆಯನ್ನು ನಾನು ಈಗ ತಮಗೆ ಈ ಸಂಬಂಧವಾಗಿ ಸೂಚಿಸಲಿಚ್ಛಿಸುತ್ತೇನೆ. ನಾನೂ ಮತ್ತು ಈ ಮಾನ್ಯಸಭೆಯ ಮತ್ತಿಬ್ಬರು ಮಾನ್ಯ ಸದಸ್ಯರೂ ಮೊನ್ನೆ ರಸ್ತೆಯಲ್ಲಿ ಹೋಗುತ್ತಿರುವಾಗ ಯಾರೋ ಒಬ್ಬ ಮನುಷ್ಯನ

(ಶ್ರೀ ಎಚ್. ಎಂ. ಚೆನ್ನಬಸಪ್ಪನವರು)

ಹೊಟ್ಟೆಗೆ ಅನ್ನವಿಲ್ಲದೆ ರಸ್ತೆಯಲ್ಲಿ ಬಿದ್ದಿದ್ದನು. ಅದೇ ರಸ್ತೆಯಲ್ಲಿ ಅಂದರೆ ಆತನು ಬಿದ್ದಿದ್ದ ಸ್ಥಳದಲ್ಲಿ ಪಕ್ಕದಲ್ಲೇ ಸಾವಿರಾರು ಜನರು, ಲಾರಿಗಳೂ, ಬಸ್ಸುಗಳೂ ತಿರುಗಾಡುತ್ತಲೇ ಇದ್ದವು. ಅಲ್ಲಿ ಅಷ್ಟೊಂದು ದೊಡ್ಡ ಜನಸಂದಣಿಯಿದ್ದಾಗ್ಯೂ ಜನರೆಲ್ಲಾ ಕಂಡರೂ ಕಾಣದಂತೆ ಆತನ ಕಡೆ ನಿರ್ಲಕ್ಷ್ಯವಾಗಿ ನೋಡುತ್ತಾ ಹೋಗುತ್ತಿದ್ದರು. ಇದನ್ನೆಲ್ಲಾ ನೋಡಿದಾಗ ನನ್ನ ಮನಸ್ಸಿಗೆ ಏನು ಅನ್ನಿಸಿತೆಂದರೆ ನಮ್ಮ ಭಾರತೀಯ ಸಂಸ್ಕೃತಿ ಹೇಗಿತ್ತು, ಈಗ ಏನಾಗಿಹೋಗಿದೆ, ಎಷ್ಟು ಕೆಳಕ್ಕೆ ಬಿದ್ದುಹೋಗಿದೆ! . . . .

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈಗ ತಾವೇನು ಮಾಡಿದಿರಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—You will hear from me afterwards outside this House, ಹಾಗೆ ಅನ್ನವಿಲ್ಲದೆ ಬೀದಿಯಲ್ಲಿ ಒಬ್ಬ ವ್ಯಕ್ತಿ ಬಿದ್ದಿದ್ದಾಗ್ಯೂ ಅತ್ತಕಡೆ ನೋಡುವುದಕ್ಕೂ ಕೂಡ ಜನರಿಗೆ ಮನಸ್ಸಿಲ್ಲದೆ ಅವರು ಎಷ್ಟು ನೀತಿ ಬಾಹಿರರಾಗಿರುತ್ತಾರೆಂಬುದು ಎದ್ದುಕಾಣುತ್ತಿತ್ತು. ನೀತಿಯೆಂಬುದು ಬಹಳ ದೊಡ್ಡದು. ಬಹಳ ಬೆಲೆ ಬಾಳತಕ್ಕದ್ದು. ಇದಕ್ಕಿಂತಲೂ ಹೆಚ್ಚಿನ ಬೆಲೆ ಬಾಳತಕ್ಕದ್ದು ಆ ಸಂಸ್ಕೃತಿ.

ಆದರೆ ತಾವು 1942-43ರ ಲಾಗಾಯಿತು 1950-51 ರವರೆಗೂ ಬಹಳ ಕಷ್ಟಪಟ್ಟು ಕೆಲಸಮಾಡಿದ್ದೀರಿ. ಆದಾಗ್ಯೂ ಅದೆಲ್ಲವೂ ಕೇವಲ ಪರೀಕ್ಷಾರ್ಥ ಮತ್ತು ಪ್ರಯೋಗ ಕ್ಷೇತ್ರವಾಯಿತೇ ವಿನಾ ಅಷ್ಟೇನೂ ಪ್ರಯೋಜನಕಾರಿಯಾಗಿ ಕಂಡುಬಂದಿಲ್ಲವೆಂಬ ಅಂಶವನ್ನು ಸರ್ಕಾರದವರೂ ಒಪ್ಪಿಕೊಂಡಿದ್ದಾರೆ. ಆದರೆ ಈ ಬಗ್ಗೆ ತಮ್ಮ ನೀತಿ ಬದಲಾಗಬೇಕು. ಇಂಥಾ ಮುಖ್ಯಾಂಶಗಳ ಬಗ್ಗೆಯೂ ರಾಜಪ್ರಮುಖರ ಭಾಷಣದಲ್ಲಿ ಏನಾದರೂ ಅಡಕವಾಗಿದೆಯೋ ಎಂಬುದನ್ನು ಜನರು ಕುತೂಹಲದಿಂದ ನಿರೀಕ್ಷಣೆ ಮಾಡಬೇಕಾಗಿದ್ದುದು ಅಗತ್ಯ ಮತ್ತು ಸಹಜವಾದದ್ದು. ಒಟ್ಟಿನಲ್ಲಿ 1942-43 ರಿಂದ 1949-50ರ ತನಕ ಅಂಥಾ ಪರಿಣಾಮಕರವಾದ ಸುಧಾರಣೆಯು ಯಾವ ರೂಪವಾಗಿಯೂ ಆಗಿಲ್ಲವೆಂಬುದನ್ನು ನಾನು ಅಂಕಿ-ಅಂಶಗಳೊಡನೆ ಪುಷ್ಟೀಕರಿಸಿ ತಿಳಿಸಬಯಸುತ್ತೇನೆ. 1942-43ರಲ್ಲಿ ಹಿಡುವಳಿಯಲ್ಲಿದ್ದಂಥ ಜಮೀನಿನಲ್ಲಿ ಈಗ 5 ಲಕ್ಷ ಎಕರೆಗಳು ಕಡಿಮೆಯಾಗಿಹೋಗಿವೆ. ಹಿಡುವಳಿಯಲ್ಲಿರತಕ್ಕ ಜಮೀನಿನಲ್ಲಿ current fallow ಬಿದ್ದಿರುವುದು 6·6 ಲಕ್ಷ ಚಿಲ್ಲರೆ ಎಕರೆ. ಹೆಚ್ಚಿಗೆ ಆಹಾರ ಸಾಮುಗ್ರಿಗಳನ್ನೇ ಬೆಳಸಲಾಗುತ್ತಿದ್ದಂಥ ಪ್ರದೇಶದಲ್ಲಿ ಕೂಡ ಅಂದರೆ 1942-43ರಲ್ಲಿ ಎಷ್ಟಿತ್ತೋ ಅದರಲ್ಲಿ ಈಗ 1 ಲಕ್ಷ 70 ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಆಹಾರ ಸಾಮಗ್ರಿಗಳನ್ನು ಬೆಳೆಯುವುದಕ್ಕೆ ಪ್ರತಿಯಾಗಿ ಬೇರೆ ಬೆಳೆಗಳನ್ನು ತೆಗೆಯುತ್ತಿರಲಾಗಿದೆ. ಇಷ್ಟೆಲ್ಲಾ ಆಗಿದ್ದರೂ ಈ "ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳುವ ಯೋಜನೆ" ಗಾಗಿ ಕೇಂದ್ರಸರ್ಕಾರದವರೂ ಮತ್ತು ನಮ್ಮ ಸರ್ಕಾರದವರೂ ವಿಶೇಷವಾಗಿ ಎಂದರೆ 10-15 ಕೋಟಿ ರೂಪಾಯಿಗಳ ತನಕ ವೆಚ್ಚ ಮಾಡಿದ್ದಾರೆ. ಆಷ್ಟಾಗಿಯೂ the area under foodcrop has come down by 3·2 lakhs acres. ಇಷ್ಟು ಬೆಳೆ ಆ ಹೊತ್ತಿಗೂ ಈ ದಿವಸಕ್ಕೂ ಕಡಿಮೆಯಾಗಿಹೋಗಿದೆ. ಬತ್ತ ಬೆಳೆಯುತ್ತಿದ್ದ ಪ್ರದೇಶವು 1943 ರಲ್ಲಿ ಎಷ್ಟಿತ್ತೋ ಇಂದೂ ಅಷ್ಟೇ ಇದೆ. ರಾಗಿಯ ಬೆಳೆಯನ್ನು ಬೆಳೆಯಲಾಗುತ್ತಿದ್ದ ಪ್ರದೇಶ ಅಂದು ಎಷ್ಟಿತ್ತೋ ಅದರಲ್ಲಿ ಇಂದು 3·55 ಲಕ್ಷ ಎಕರೆ ಕಮ್ಮಿಯಾಗಿದೆ. ಜೋಳದ ಬೆಳೆ ಎಷ್ಟು ಪ್ರದೇಶದಲ್ಲಿ ಬೆಳೆಯಾಗುತ್ತಿತ್ತೋ ಇಂದೂ ಅಷ್ಟೇ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ವ್ಯವಸಾಯ ಹೆಚ್ಚಾಗಿದೆಯೆಂದು ಹೇಳೋಣವೆಂದರೆ ವ್ಯವಸಾಯ ಮಾಡತಕ್ಕ ಜನರೇ ಕಮ್ಮಿಯಾಗಿದ್ದಾರೆ. ಇವೆಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಉತ್ಪನ್ನ ಹೆಚ್ಚಾಗಿದೆಯೋ ಅಥವಾ ಕಮ್ಮಿಯಾಗಿದೆಯೋ ಎಂಬುದು ತನ್ನಷ್ಟಕ್ಕೆ ತಾನೇ ಗೊತ್ತಾಗುತ್ತದೆ. ಆದುದರಿಂದ ತಮ್ಮ ನೀತಿ, ಈ ಸಂಬಂಧವಾಗಿ ಬದಲಾಗಬೇಕಾದುದು ಈಗ ಅತ್ಯಗತ್ಯವಾಗಿದೆ.

Rajamantrapravina H.B. GUNDAPPA GOWDA.—Do you rely on those statistics?

Sri H. M. CHANNABASAPPA.—That is a different thing. If it is questioned, then I have nothing to say. ಈ ಅಂಕಿ ಅಂಶಗಳನ್ನೆಲ್ಲಾ ಅಡ್ಮಿನಿಸ್ಟ್ರೇಟಿವ್ ರಿಪೋರ್ಟುಗಳಿಂದಲೇ ಶೇಖರಿಸಲಾಗಿದೆ. ಅದನ್ನು ಪರಿಶೀಲಿಸಿದರೆ ತಮಗೆಲ್ಲ ಗೊತ್ತಾಗಬಹುದು. ಆದರೆ ನಮಗೆ ಈ ಆಹಾರ ಕೊರತೆಯ ಬಗ್ಗೆ ಪ್ರಾಧಾನ್ಯವಾಗಿ ಬೇಕಾಗಿರುವುದು ಬತ್ತ; ಸುಮಾರು 8—9 ಲಕ್ಷ ಪಲ್ಲ ಬತ್ತ ಹೆಚ್ಚಾಗಿ ಒದಗಿಸಿಕೊಂಡರೆ ನಮಗೆ ಸಾಕೆಂದು ಗೊತ್ತಾಗುತ್ತದೆ. 8-9 ಲಕ್ಷ ಪಲ್ಲ ಬತ್ತವನ್ನು ಹೆಚ್ಚಾಗಿ ಬೆಳೆಸಬೇಕಾಗಿದ್ದರೆ ಈಗ ತರೀ ವ್ಯವಸಾಯ ನಡೆಯುತ್ತಿರುವ ಪ್ರದೇಶದ ವಿಸ್ತೀರ್ಣಕ್ಕಿಂತ ಹೆಚ್ಚಾಗಿ 40-50 ಸಾವಿರ ಎಕರೆ ಸಾಗು ಮಾಡಬೇಕಾಗುತ್ತದೆ.

Sri W. H. HANUMANTHAPPA (Bangalore District-General).—This debate is outside the scope of Rajpramkuh's Address nor it is on the amendment moved by Janab Imam.

Mr. SPEAKER.—He is not speaking on the motion before the House.

Sri W. H. HANUMANTHAPPA.—This is not budget discussion.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—I have not yielded. ಅಂತೂ ಈ ವಿಷಯದಲ್ಲಿ ನಿಮ್ಮ ನೀತಿ ಬದಲಾವಣೆಯಾಗಲೇಬೇಕೆಂಬ ಅಭಿಪ್ರಾಯ ಈಗ ಜನರಲ್ಲಿ ಮೂಡಿದೆ. ಆದುದರಿಂದ-ಇದು ಬಹಳ ಸೂಕ್ತವಾಗಿದೆಯೆಂಬುದನ್ನು ನಾನು ಅಂಕಿ ಅಂಶಗಳಿಂದ ಸಾಕಷ್ಟುಮಟ್ಟಿಗೆ ಸ್ಪಷ್ಟಪಡಿಸಿ ಮಾನ್ಯ ಸದಸ್ಯರಿಗೆಲ್ಲಾ ತೋರಿಸಿಕೊಟ್ಟಿದ್ದೇನೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಆ ಅಂಕಿ ಅಂಶಗಳನ್ನು ಮಾನ್ಯ ಸದಸ್ಯರು ನಮಗೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ತಾವು ಇದರ ಬಗ್ಗೆ ಅಷ್ಟು ಮನೋಭಿಲಾಷೆಯುಳ್ಳವರಾಗಿದ್ದರೆ as a personal obligation I will give them to you.

ಮತ್ತೊಂದು ಮುಖ್ಯಾಂಶವನ್ನು ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ಸಬ್‌ಸಿಡೈಸೇಷನ್ ಬಗ್ಗೆ ತಾವು ಎಂದಿನವರೆಗೆ ಇದನ್ನು ಒದಗಿಸುತ್ತ ಹೋಗುತ್ತೀರೋ ಅಂದಿನವರೆಗೂ ನಮಗೆ ಕಷ್ಟ ತಪ್ಪಿದ್ದಲ್ಲವೆಂಬ ಅಂಶವನ್ನು ಸರ್ಕಾರದವರು ಮನಗಂಡಿದ್ದಾರೆ. ಆದುದರಿಂದ ಇದನ್ನು ಆದಷ್ಟು ಜಾಗ್ರತೆ, ಶೀಘ್ರವಾಗಿ ತಪ್ಪಿಸಬೇಕೆಂದು ಸೂಚಿಸುತ್ತೇನೆ. ಇಲ್ಲವಾದಲ್ಲಿ ಮುಂದೆ ಇದರಿಂದ ಅನೇಕ ಅನರ್ಥಗಳು ಸಂಭವಿಸಲವೆ.

ತಾವು ಇಲ್ಲಿಯತನಕ ಸುಮಾರು 11 ಕೋಟಿ ರೂಪಾಯಿಗಳನ್ನು ಈ ಬಗ್ಗೆ ಖರ್ಚು ಮಾಡಿದ್ದೀರಿ. ಆದಾಗ್ಯೂ ಆಹಾರದ ಅಭಾವ ನೀಗಲಿಲ್ಲ. ಅಂದ ಮೇಲೆ ಹೀಗೆ ಖರ್ಚು ಮಾಡುವುದು ಯಾವ ದೇವರಿಗೆ ಪ್ರೀತಿ; ಈ ಸಂದರ್ಭದಲ್ಲಿ ನನಗೆ ಒಂದು ಸಣ್ಣ ಕಥೆ ಜ್ಞಾಪಕಕ್ಕೆ ಬರುತ್ತದೆ. ಯಾರೋ ಒಬ್ಬ ಮನುಷ್ಯನು ಬಹಳ ಪ್ರೀತಿಯಿಂದ ಒಂದು ಹುಲಿಯ ಮರಿಯನ್ನು ಹಾಲು ಹಾಕಿ ಸಾಕುತ್ತಿದ್ದನಂತೆ. ಆಗ ಅದು ತನ್ನ ಚಿಕ್ಕ ವಯಸ್ಸಿನಲ್ಲಿ ತನ್ನ ಒಡೆಯನನ್ನು ಪ್ರೀತಿಯಿಂದ ಮೈ ಕೈಯನ್ನೆಲ್ಲಾ ನೆಕ್ಕುತ್ತಿದ್ದು, ಬಲವಾದ ಮೇಲೆ ಅಂದರೆ ಬೆಳೆದ ನಂತರ ಒಡೆಯನು ಅದನ್ನು ಬೆದರಿಸಲಿಕ್ಕೆ ಹೋದಾಗ ಆತನನ್ನೇ ತಿನ್ನಲು ಹೋಯಿತಂತೆ. ಆಗ ಆ ಮನುಷ್ಯನು ತನ್ನ ಕೈಯಿಂದ ಹಾಲು ಹಾಕಿ ಸಾಕಿದಂಥ ಪ್ರಾಣಿಯನ್ನು ತಾನೇ ಗುಂಡಿಟ್ಟು ಕೊಂದು ಹಾಕಬೇಕಾದ ಪ್ರಸಂಗ ಬಂದಿತಂತೆ. ಅದರಂತೆಯೇ ಈಗ ಇದು ಆಗಬಹುದು. ಏನೋ ಒಂದು ಕಾರಣದಿಂದ ಯಾವುದೋ ಒಂದು ಯುದ್ಧ ಕಾಲದ ದೆಸೆಯಿಂದ ಇದು ತಲೆ ಹಾಕಿತು. ಆದರೆ ಇಂದು ಇದು ಬೃಹದಾಕಾರ ತಾಳುತ್ತಿದೆ. ಇದರ ಹಾಹಾಕಾರ ಎಲ್ಲೆಲ್ಲೂ ಹೆಚ್ಚಿ ಹೋಗಿ ಯಾರು ಯಾರು ಹೆಚ್ಚು ಆದಾಯಗಳಿಸಿ ಕುಬೇರರಾಗಬೇಕೆಂದಿದ್ದಾರೋ ಅವರಿಗೆಲ್ಲಾ ಇದು ಬಹಳ ಅನುಕೂಲವಾಗಿ ಹೋಗಿದೆ. ಅವರಲ್ಲಿ ಅಷ್ಟೊಂದು ಧನಪಿಶಾಚಿ ಅಂಟಿಕೊಂಡಿದೆ. ಇದರ ತತ್ಪರಿಣಾಮವಾಗಿಯೇ ಇಂದು ಈ 'ಕಾಸು' ಸರ್ಕಾರವನ್ನೂ ಕೂಡ ಹೆದರಿಸಲು ಹವಣಿಸುತ್ತಿದೆ. ಆದುದರಿಂದ ಇದು ಎಲ್ಲಿಯವರೆಗೆ ಇರಬೇಕೆಂಬುದನ್ನಾದರೂ ತಾವು ಒಂದು ಸೂಚನೆ ಕೊಟ್ಟರೆ ಬಹಳ ಅನುಕೂಲ. ಒಂದು ವರ್ಷವೇ, ಎರಡು ವರ್ಷಗಳೇ ಅಥವಾ ಮೂರು ವರ್ಷಗಳೇ ಎಂಬುದನ್ನಾದರೂ ತಾವು ಸೂಚಿಸಬೇಕು.

The Hon'ble Sri H. C. DASAPPA.—It is an "All India policy".

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇಂಡಿಯಾ ಸರ್ಕಾರಕ್ಕೂ ಸಹ ನಮ್ಮ ಸರ್ಕಾರ ಈ ಬಗ್ಗೆ ಒಂದು ಸೂಚನೆ ಕೊಡಬಹುದು. ಆ ಸರ್ಕಾರಕ್ಕೆ ನಮ್ಮ ಸರ್ಕಾರ ಅಷ್ಟೇನೂ ಅಡಿಯಾಳಾಗಿಲ್ಲ. ಆದರೆ ಅದರ ಒಂದು ಅಂಗವಾಗಿ ಮಾತ್ರ ಇರುತ್ತದಷ್ಟೆ. ನಾವು ಯಾವಾಗಲೂ ಪ್ರಭಾವಶಾಲಿಗಳಾಗೇ ನಡೆದುಕೊಂಡು ಬಂದಿದ್ದೇವೆ. ನಮಗೂ ಮರ್ಯಾದೆ ಬರಬೇಕು. ಇದನ್ನು ಅವರಿಗೆ ನಿರೂಪಿಸಲಿಕ್ಕೆ ತಮಗೆ ನಾನಾ ದಾರಿಗಳಿವೆ. ಇದನ್ನು ಮೊದಲು ತಾವು ನಡೆಸಿದರೆ ಮುಂದಕ್ಕೆ ದೇಶದಲ್ಲಿ ಇನ್ನೂ ಹೆಚ್ಚಿನ ಮಾರ್ಪಾಡುಗಳನ್ನು ಮಾಡಿ ದೇಶದ ಕೀರ್ತಿ ಮತ್ತು ಜನರ ನೀತಿಯನ್ನು ಮಾರ್ಪಾಡು ಮಾಡಲು ತಮಗೆ ಅನುಕೂಲವಾಗುತ್ತದೆ. ಅದಕ್ಕಾಗಿ ತಾವು ಎಲ್ಲಾ ಪ್ರಯತ್ನಗಳನ್ನು ಪಡಬೇಕೆಂದು ಸೂಚಿಸುತ್ತೇನೆ. ನಮಗೆ ಪ್ರಾಮುಖ್ಯವಾದವುಗಳೆಂದರೆ ನೀತಿ ಮತ್ತು ಸಂಸ್ಕೃತಿ. ಇಂಥಾ ಅಮೂಲ್ಯವಾದ ವಸ್ತುಗಳನ್ನು ಕಳೆದುಕೊಂಡು ಕುಲಗೆಟ್ಟು ನೀತಿಗೆಟ್ಟು ಬಾಳುವುದಕ್ಕಿಂತ ಬಾಳದಿರುವುದೇ ಲೇಸಾಗಿದೆ.

ಈ ನೀತಿಯು ಹೋಗಬೇಕು. ಈ ದಿವಸ ದುಡ್ಡು ಸಂಪಾದನೆ ಮಾಡುವುದು ದೊಡ್ಡದಲ್ಲ. ಇದರ ಜೊತೆಗೆ ಹಳ್ಳಿಗಾಡಿನ ಜನರಿಗಿರುವ ಕಿರುಕುಳ, ಹಿಂಸೆ ವಗೈರೆ ಯಾರೂ ತಪ್ಪಿಸುವುದಕ್ಕಾಗುವುದಿಲ್ಲ. ಯಾವ ಸರ್ಕಾರವೇ ಬಂದರೂ ಕೂಡ ಅದನ್ನು ಪೂರ್ಣವಾಗಿ ತಪ್ಪಿಸಲಾರರು. ಆದ್ದರಿಂದ ನಾನು ಯಾವ ಸರ್ಕಾರವನ್ನೂ ದೂಷಣೆ ಮಾಡುವುದಿಲ್ಲ; ಹಾಗೆ ಮಾಡುವುದೂ ಅನಾವಶ್ಯಕ. ಏಕೆಂದರೆ ನಾಳೆ ದಿವಸ ಬೇರೆ ಸರ್ಕಾರ ಬಂದರೂ ಸಹ ಈ ನಿಯಂತ್ರಣ ಜಾರಿಗೆ ಬರಬೇಕೆಂದರೆ ಜನರ ಮನೋಭಾವನೆ ಬದಲಾವಣೆಯಾಗ ಬೇಕು.

*ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಒಂದು ಕ್ರಿಯಾಲೋಪವನ್ನು ಸೂಚಿಸಬೇಕಾಗಿದೆ. ಈಗ ಎರಡು ಸೂಚನೆಗಳ ಮೇಲೆ ಚರ್ಚೆಯಾಗಬೇಕಾಗಿದೆ. ಒಂದು ಶ್ರೀ ಎಂ. ಗೋವಿಂದರೆಡ್ಡಿಯವರ ನಿರ್ಣಯ. ಎರಡನೆಯದು, ಜನಾಬ್ ಇಮಾಂರವರ ತಿದ್ದುಪಡಿ. ಯಾರಾದರೂ ಭಾಷಣ ಮಾಡಬೇಕಾದರೆ ಈ ಎರಡು ವಿಷಯಗಳಿಗೆ ಸಂಬಂಧಪಟ್ಟಹಾಗೆ ಮಾತನಾಡಬೇಕೇ ವಿನಾ ಬಡ್ಜೆಟ್ ಭಾಷಣವನ್ನು ಸಭೆಯ ಮುಂದೆ ಬಡ್ಜೆಟ್ ಮಂಡಿಸಿದಾಗ ಮಾಡುವಂತೆ ಮಾಡುವುದು, ಯಾವ ಗೊತ್ತುಗುರಿಯಿಲ್ಲದೆ, ವ್ಯಾಪ್ತಿಯಿಲ್ಲದೆ ಭಾಷಣ ಮಾಡುವುದು, ಸರ್ವವ್ಯಾಪ್ತಿಯಾಗಿ ಮಾತನಾಡುವುದು—ಹೀಗೆ ಮಾಡುವುದರಿಂದ ಕಷ್ಟವಾಗುತ್ತದೆ.

Sri L. SIDDAPPA.—It is a belated point of order. No useful purpose will be served by this point of order.

ಶ್ರೀ ಕೆ. ಪುಟ್ಟಸ್ವಾಮಿಯವರು.—ಕ್ರಿಯಾಲೋಪವನ್ನು ಯಾವಾಗ ಬೇಕಾದರೂ ಸೂಚಿಸಬಹುದು. ನಿರ್ಣಯ ಅಥವಾ ತಿದ್ದುಪಡಿಯ ಮೇಲೆ ಮಾತನಾಡದೆ ಹೀಗೆ ಮಾಡಿದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಕ್ರಿಯಾಲೋಪ ಸೂಚಿಸಿದ್ದೇನೆ. ಇದರ ಮೇಲೆ ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ಸರ್ಕಾರದ ನೀತಿಯೇನೆಂದು ಸದಸ್ಯರುಗಳು ಹೇಳುವುದಕ್ಕೆ ಅಧಿಕಾರವುಂಟು. ಹಾಗಿರುವಾಗ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಹೇಳಿರುವ ವಿಷಯದ ಮೇಲೆ ಮತ್ತು ನೀತಿಯ ಮೇಲೆ ಸದಸ್ಯರು ಭಾಷಣ ಮಾಡಬಾರದೆಂದು ಹೇಳುವುದಕ್ಕಾಗುವುದಿಲ್ಲ. ಆ ಅಧಿಕಾರ ಅಥವಾ ಹಕ್ಕು ಸದಸ್ಯರಿಗಿದೆ. ಆದ್ದರಿಂದ ಈ ಕ್ರಿಯಾಲೋಪವು ಸರಿಯಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗ ಪ್ರಜಾಪ್ರಭುತ್ವದ ಕಾಲವಾದ್ದರಿಂದ ಪ್ರಜೆಗಳಿಗೆ ಪ್ರೀತಿಯಾಗುವಂತೆ ಮಾತನಾಡಬೇಕಾದ್ದು ಸಹಜ. ಜನರು ಇನ್ನೂ ಒಂದು ವಿಷಯದಲ್ಲಿ ಬಹಳ ಆಶಾಜನಕವಾದ ಒಂದು ನೀತಿಯನ್ನು ಶ್ರೀಮನ್ಮಹಾರಾಜರವರ ಭಾಷಣದಲ್ಲಿ ನಿರೀಕ್ಷಿಸಿದ್ದರು. ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರದಲ್ಲಿ ಸೂಚನೆಯೇನಾದರೂ ಬರುತ್ತದೆಂದು ನಿರೀಕ್ಷೆ ಮಾಡುವುದು ಸ್ವಾಭಾವಿಕ. ಆ ಆಸೆಯು ಕಳೆದ ಐದು ವರ್ಷದಿಂದಲೂ ಇದೆ. ಆದರೆ ಆ ಸೂಚನೆ ಇಲ್ಲದ್ದರಿಂದ ಸ್ವಲ್ಪ ಆಶಾಭಂಗವಾಗಿದೆಯೆಂದು ತಿಳಿಸುವುದರಲ್ಲಿ ಸಂದೇಹವಿಲ್ಲ. ಈ ಸೂಚನೆಯನ್ನು ತೆಗೆದುಕೊಂಡು ಬೇಗ ಅದನ್ನು ರಚಿಸಿದರೆ ಅನುಕೂಲ.

ಎರಡನೆಯದಾಗಿ ಅದಕ್ಕಿಂತ ದೊಡ್ಡ ವಿಷಯವೇನೆಂದರೆ ವಿನಾಯಿತಿ ವಿಚಾರ. ರಾಜ್ಯಾಂಗದ ಪ್ರಕಾರವಾಗಿ 'ಬಿ' ಭಾಗದಲ್ಲಿರುವ ಕೆಲವು ಪ್ರಾಂತಗಳ ಜೊತೆಯಲ್ಲಿ ಮೈಸೂರೂ ಸಹ ಸೇರಿಕೊಂಡಿದೆ. ನಮ್ಮ ಸಂಸ್ಥಾನವು ಬಹು ಪುರಾತನಕಾಲದಿಂದಲೂ ಬಹಳ ಹೆಮ್ಮೆಯಿಂದ ಕೂಡಿರುವುದರಿಂದ ಅದಕ್ಕೆ ಸ್ವಲ್ಪ ರಿಯಾಯಿತಿ ದೊರೆಯಬಹುದೆಂದು ಜನ ನಿರೀಕ್ಷಣೆ ಮಾಡುತ್ತಿದ್ದರು. ಆದರೆ ಈ ದಿವಸ ಕೂಡ ಅದು ಹಾಗೆಯೇ ಇದೆ. ಆ ಬಗ್ಗೆ ಸರ್ಕಾರದ ಧೋರಣೆ ಕೂಡ ಬದಲಾಗಿ ಈ ಬಗ್ಗೆ ವಿನಾಯಿತಿ ಪಡೆಯಬೇಕು, ತನ್ಮೂಲಕ ದೇಶದ ಘನತೆ ಗೌರವ ಉಳಿಸಬೇಕು ಮತ್ತು ಹೆಚ್ಚಿಸಬೇಕು ಎಂಬುದಾಗಿತ್ತು. ಈ ಸಂದರ್ಭದಲ್ಲಿ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಈ ಬಗ್ಗೆ ಏನು ಕಾರ್ಯಕ್ರಮ ತೆಗೆದು

(ಶ್ರೀ ಎಚ್. ಎಂ. ಚನ್ನಬಸಪ್ಪನವರು.)

ಕೊಂಡಿದೆಯೆಂದು ಸೂಚನೆ ಬರಬಹುದು, ವಿನಾಯಿತಿ ಬರುತ್ತದೆ ಎಂಬ ಆಸೆಯಿಂದ ಜನರು ಎದುರುನೋಡುತ್ತಿದ್ದರು. ಆದರೆ ಆ ಬಗ್ಗೆ ಯಾವ ವಿಧವಾದ ಸೂಚನೆಯೂ ಬಾರದಿರುವುದರಿಂದ ಬಹಳ ನಿರಾಶೆಯಾಗಿರುವುದು ಸ್ವಾಭಾವಿಕವಾಗಿಯೇ ಇದೆ.

ಅಧ್ಯಕ್ಷರು.—ಆ ವಿಷಯ ಬಿಟ್ಟುಹೋಗಿದೆಯೆಂದು ತಾವು ತಿದ್ದುಪಡಿ ಕಳುಹಿಸಬಹುದಾಗಿತ್ತು. ವಿನಾಯಿತಿ ಪಡೆಯಬೇಕಾಗಿತ್ತೆಂದು ಹೇಳುವುದು ಯಾವ ನೀತಿಯ ವಿಷಯ? ತಿದ್ದುಪಡಿ ತರದೆ ಹೀಗೆ ಎಲ್ಲಾ ವಿಷಯಗಳನ್ನೂ ಹೇಳಿದರೆ ಕಷ್ಟ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—Omission and commission ಎಂಬ ವಿಚಾರದಲ್ಲಿ ಸೂಚನೆ ಕೊಡುತ್ತಿದ್ದೇನೆ. ಮುಂದಿನ ಶ್ರೀಮನ್ಮಹಾರಾಜರವರ ಭಾಷಣದಲ್ಲಾದರೂ ಈ ಸೂಚನೆಗಳು ಬಂದರೆ ಉತ್ತಮಮಟ್ಟದಲ್ಲಿ ರಾಜ್ಯಭಾರ ನಡೆಯುತ್ತಿದೆಯೆಂಬ ಒಂದು ಭಾವನೆಯಿರುತ್ತದೆ. ಈ ವಿಚಾರವನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ಇನ್ನು ತಿದ್ದುಪಡಿಯನ್ನು ಸೂಚಿಸಿರುವವರು ಹೇಳಿದ ಕೆಲವು ಅಂಶಗಳ ವಿಚಾರದಲ್ಲಿ ಎರಡುಮೂರು ಹೇಳಬೇಕಾಗಿದೆ.

"difficulties are increasing in the matter of stepping up food production"

ಎಂದು ಹೇಳಿರುವುದು ಮೊದಲನೆಯ ಅಂಶ. ಅದನ್ನು ಪರಿಶೀಲಿಸಬೇಕೆಂದೂ, ಹೆಚ್ಚಿಸಬೇಕೆಂದೂ ಹೇಳುವವರಿಗೆ ಸರ್ಕಾರ ಯಾವ ಅಡ್ಡಿ ಆತಂಕವನ್ನೂ ತಂದಿಲ್ಲ. ವ್ಯವಸಾಯ ಎನ್ನುವುದು ಸ್ವಾಭಾವಿಕವಾಗಿ ಬಹಳ ಕಷ್ಟತಮವಾದ ಉದ್ಯೋಗ. ಅದು ಹೆಚ್ಚು ಅಭಿವೃದ್ಧಿಗೆ ಬಾರದಿರುವುದಕ್ಕೆ ಸರ್ಕಾರದವರು ಕಾರಣರಲ್ಲ. ಜನರಲ್ಲಿ ಅಭಿಪ್ರಾಯವು ಬದಲಾವಣೆಯಾದ ಹೊರತು ಏನೂ ಪ್ರಯೋಜನವಾಗುವುದಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಅವರು ಹೇಳುವುದು ಒಂದಕ್ಕೊಂದಕ್ಕೆ ವಿರೋಧವಿರುವ ಹಾಗೆ ಕಾಣುತ್ತಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ತಿದ್ದುಪಡಿ ಕಳುಹಿಸಿರುವ ಮಾನ್ಯಸದಸ್ಯರು ಜನರಮೇಲೆ ಪ್ರಭಾವ ಬೀರುವ ಹಾಗೆ ವಾತಾವರಣ ಕಲ್ಪಿಸಿಲ್ಲವೆಂದು ಹೇಳಿದ್ದರೆ ಒಪ್ಪಬಹುದಾಗಿತ್ತು. ಕಷ್ಟಗಳು ಹೆಚ್ಚಿವೆಯೆಂದು ಹೇಳಿದ್ದಾರೆ. ಅದು ಮೊದಲನಿಂದಲೂ ಇದೆ. ದಿನೇ ದಿನೇ ಹೆಚ್ಚುತ್ತಲೂ ಇದೆ. ಈಗಂತೂ ಸುಲಭವಾಗಿ ಆಶಾದಾಯಕವಾಗಿ ಹಣ ಸಂಪಾದನೆಮಾಡಲು ಅವಕಾಶವಿರುವುದರಿಂದ ಕಷ್ಟ ಹೆಚ್ಚಿದೆ. ಅದಕ್ಕೆ ಸರ್ಕಾರದವರು ಕಾರಣಕರ್ತರೆಂದು ಹೇಳುವುದನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಹತೋಟಿಮಾಡುವುದೊಂದೇ ಸಾಲದು, ಯಾವುದಾದರೂ ಒಂದು ದಿವಸ ಅದನ್ನು ನಿಲ್ಲಿಸಬೇಕು ಎಂದು ಹೇಳಿ ತಕ್ಕ ಸಲಹೆ ಕೊಟ್ಟಿದ್ದರೆ ಒಪ್ಪಬಹುದಾಗಿತ್ತು.

ಆ ಮೇಲೆ "Ministers have not taken adequate steps to maintain the progressive character" ಎಂದು ಹೇಳಿದ್ದಾರೆ. ಅದು ತಪ್ಪಭಿಪ್ರಾಯ. ಬೇಕಾದಷ್ಟು ಕಾರ್ಯಕ್ರಮವಿದೆ. ಅದರ ನೀತಿಯಲ್ಲಿ ಹೆಚ್ಚುಕಡಿಮೆಯಿದ್ದರೆ ಸಲಹೆಮಾಡುವುದು ನ್ಯಾಯ.

ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ವಿದ್ಯಾಭ್ಯಾಸ, ನೀರಾವರಿ ಮತ್ತು ಇತರ ಜನೋಪಯುಕ್ತ ಬಾಬುಗ ಅಭಿವೃದ್ಧಿಗೆ ಎಷ್ಟೆಷ್ಟು ಕೋಟ್ಯಾಂತರ ರೂಪಾಯಿಗಳನ್ನೊದಗಿಸಿದ್ದಾರೆಂಬುದು ಬಡ್ಜೆಟ್ಟನ್ನು ನೋಡಿದರೆ ಗೊತ್ತಾಗುತ್ತದೆ. ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ ಅವುಗಳನ್ನು ಬೆಳೆಸಲು ಸರ್ಕಾರದವರು ಎಷ್ಟು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂಬುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಈಚೆಗೆ ಉಕ್ಕಿನ ಉತ್ಪತ್ತಿಯನ್ನು ಹೆಚ್ಚಿಸಬೇಕೆಂದು ಪ್ರಯತ್ನಮಾಡಿದ್ದಾರೆ. ಅಸೆಟಿಕ್ ಆಸಿಡ್ ದ್ರಾವಕವನ್ನು ತಯಾರಿಸಲು ಮಾಡಿರುವ ಏರ್ಪಾಡು ಇವುಗಳನ್ನೆಲ್ಲಾ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ವ್ಯವಸಾಯವನ್ನೂ ಬದಲಾವಣೆಮಾಡಬೇಕೆಂದು ಕಾರ್ಯಕ್ರಮವನ್ನೇನೋ ತೆಗೆದುಕೊಂಡಿದ್ದಾರೆ, ಆದರೆ ಕಾರ್ಯವಿಧಾನದಿಂದ ಒಳ್ಳೆಯ ಸಾಧನೆಯಾಗದೇ ಇದ್ದರೆ ಅದು ಕಾರ್ಯಕ್ರಮದ ತಪ್ಪಲ್ಲ, ಕಾರ್ಯವಿಧಾನದ ತಪ್ಪು. ವಿದ್ಯಾಭ್ಯಾಸಕ್ಕೆ ಎಂಟುಕೋಟಿ ಚಿಲ್ಲರೆ ರೂಪಾಯಿಗಳನ್ನು ಒದಗಿಸಿದ್ದಾರೆ. ಹೀಗೆ ಅವರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ, ಇಲ್ಲವೆಂದು ಹೇಳುವ ಹಾಗಿಲ್ಲ. ಈ ತಿದ್ದುಪಡಿಯಲ್ಲಿ ಅವಶ್ಯಕಪ್ರಮಾಣದಲ್ಲಿ ಕಾರ್ಯಕ್ರಮನ್ನು ಸರ್ಕಾರದವರು ತೆಗೆದುಕೊಂಡಿಲ್ಲವೆಂದು ಸೂಚಿಸಿದ್ದಾರೆ. ಇದು ಸರಿಯಲ್ಲ. ಕಾರ್ಯಕ್ರಮ ತೆಗೆದುಕೊಂಡಿದ್ದಾರೆ, ಆದರೆ ಕಾರ್ಯವಿಧಾನದಿಂದ ಸತ್ಪರಿಣಾಮವಾಗಿಲ್ಲವೆಂದು ಹೇಳಬಹುದು. ಆದಕಾರಣ ಅವರು ಈ ಸೂಚನೆಗೆ ತಂದಿರುವ ತಿದ್ದುಪಡಿಯನ್ನು ಖಂಡಿಸಬೇಕಾಗಿದೆ. ಈಗ ಈ ಸೂಚನೆಯ ಪ್ರಕಾರ ಶ್ರೀಮನ್ಮಹಾರಾಜರವರಿಗೆ ಅವರ ಭಾಷಣಕ್ಕಾಗಿ ವಂದನೆಗಳನ್ನರ್ಪಿಸಬೇಕಾಗಿದೆ. ಸರ್ಕಾರದವರು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅವರು ಮಾಡಿರುವ ಪ್ರಯತ್ನಕ್ಕೆ ಅಭಿನಂದನಾರ್ಹರು. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಕೊನೆಯಲ್ಲಿ ಮಂತ್ರಿಗಳು ಮಾತನಾಡಬೇಕಾಗುತ್ತದೆ. ಮಾನ್ಯಸದಸ್ಯರಲ್ಲಿ ಇನ್ನೂ ಮಾತನಾಡುವವರಿದ್ದರೆ ತಿಳಿಸಬಹುದು.

The Hon'ble Sri K. CHENGALARAYA REDDY (Leader of the House): I desire to point out that we have to close the debate on this motion to-day. Tomorrow and the day after are holidays and many of the Hon'ble Members have got engagements elsewhere, particularly tomorrow. Many of the Hon'ble Members are going to Mysore in connection with the Centenary Celebrations of the Maharaja's College. I would have had no objection to continue the debate tomorrow also provided there was not this impediment. Under these circumstances, we have to terminate the debate to-day and on the Government side the Ministers have to speak. Keeping that in mind, I request the Hon'ble Speaker to regulate the time for each Hon'ble Member and the number of speakers and also to indicate till what time we have to sit this evening.

MR. SPEAKER: Shall we sit till 6-30 P.M.?

The Hon'ble Sri H. C. DASAPPA.—Even till 7 we do not mind. We want an hour between we three.

Janab MOHAMED HANIEF (Bangalore—Muslim).—Mr. Speaker, Sir, until the Hon'ble Member Sri H. M. Channabasappa spoke, I had no intention of speaking at all. Sir, those who took part in the discussion to-day appear to me to have forgotten the background of this Address. After the inauguration of the Republic, Mysore, is a part and not the whole of the State; and integration necessarily resulted in making certain adjustments–adjustments, some of them advantageous and some of them disadvantageous to the Mysore State. These advantages and disadvantages became very apparent here in Mysore because Mysore before integration occupied a very advanced position industrially and from the point of view of administration and otherwise. So it is that we in Mysore began to feel that integration was not very much to the advantage of our State. While we feel in that manner, we forget a fundamental fact, that we had agreed to become part and parcel of the Indian State and to share with it the joys and sorrows without any grumble. (Hear, hear). The financial integration of a State while it advanced our interest in many departments, also resulted in very many disadvantages. The State had many an industry started; it had launched upon many an adventure with the object of making the common man in the street happy; and for that, the State had to find the wherewithal. The integration took away a good bit of their finances and the State had to fight with the Centre to get at least a portion of the income to make up the difference and in that the Ministers became the advocates of Mysore State and tried to get as much as they could from the Centre. In addition, to make up the deficiency they also negotiated with the Centre for loans and other things with the object of keeping up the standards that they had set up before this integration. Sir, I do not think there is any one here who would take exception to that state of affairs obtaining after integration. All that the Hon'ble Leader of the Opposition tried to impress upon the Government is this: that as a result of this integration certain very visible disadvantages became apparent. One such was with regard to the personnel of the army that was being maintained by the State before integration. Sir, I am certain and I know and the Leader of the Opposition had also stated the same, that the Government have not spared themselves in their attempt to put up a strong fight for the maintenance of the personnel of the army. In the integration, it may be, it was found inevitable and necessary that a portion of our forces should be disbanded and that the army which was maintained by the Mysore State should be reduced, in consonance with the general policy that the Government of India had followed with regard to the other integrating States. It may be from the point of view of efficiency, it may be from the point of view of expediency, and it may be from the point of view of finance that this policy was resorted to. All the same why should a number of our men who were loyally devoted to the country and who had given a good account of themselves in different theatres of war be unreservedly told to go out? Little did they know about it when they entered service. To be placed in that sorry position is certainly not a thing which we in Mysore State would look upon with equanimity and without taking note of it and without agitating in the matter further, agitation with a view to bring pointedly to the attention of the Government both of Mysore and India that such an attempt with regard to the military personnel of this State is not at all just. The Government of India could very well absorb them in the Indian army. We have tried men and the Government of India ought to seriously examine their cases before they put into execution the policy they have adopted with regard to reduction, revision or adjustment in the army. That was all that the Hon'ble Leader of the Opposition placed before the House and if the

(JANAB MOHAMED HANIEF).

Mysore Government have not already taken up this matter and made representation to the Government of India and brought home to them that the unrest that has been created in the personnel is not all advantageous to Mysore, I hope they would now bestir themselves and take the matter before the Government of India and fight for these people and in the alternative find some places for them in the State administration. Of course that leads us to the question of finance where our Government is under a handicap. Still, with all that, they must, to the extent they can, make amends for throwing these people out of their jobs. I am certain that the Government will not hesitate to adopt the policy that has been suggested by the Leader of the Opposition on the floor of this House.

Sir, what applies to the army applies to other services. It is inevitable that in the integration some people have to be thrown out and some adjustments have to be made. But let not those adjustments be at the cost of those who are devoted servants of Mysore State. With regard to every department where this integration has taken place, where services have been centralised and where our personnel are concerned, our Government must make it their first duty to see that they do not suffer at all as a result of this integration and that if they suffer their suffering must be minimised as far as possible. That is an appeal that the members of this House make to the Government and I make the same.

The second point to which I would advert and draw the attention of this House is the food problem and about industries. Sir, people might laugh and I once again wonder why in this country the old policy that was enunciated by Gandhiji has been given a go-by. Khadi movement would to a large extent solve the problem of nakedness. The food problem would have been solved largely by adopting his method of allotting one acre of land to one individual and also giving him a pair of bullocks. Why is it that that experiment has not been tried? Why is it that we are today spending lakhs and lakhs of rupees upon this problem? Why is it that the individual is not at all respected and why is it that trust in him is not created which will make him feel that what he grows in his land and that only the surplus is taken away from him? That idea is not inculcated and encouraged in the individual and the result is deficit on all sides. My Hon'ble friend Sri H. M. Channabasappa was eloquent on what we should do and what we should not do. May I ask the Government to have in mind the experiments of Gandhiji and to give a fair trial to them at least in Mysore?

I have got to say something about one other subject and that is Co-operation. Ever since I had the privilege of sitting in this House I have been trying to bring to the attention of the Government that if anything is going to be fruitful it is the co-operative system of economy. Whether it is agriculture, industry or otherwise, let that experiment be given a fairplay and thereby you will not only shift the burden of responsibility from the Government to the Societies, you will thereby also secure efficiency, good produce and prosperity in the land.

With these, I close my speech.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೊತ್ತಾಯಿತು. ಕೊನೆಯಲ್ಲಿ ಅವಕಾಶ ಸಿಕ್ಕಿದ್ದಕ್ಕಾಗಿ ಸಂತೋಷ. ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಭಾಷಣವನ್ನು ನಾವು ವಿಮರ್ಶೆಮಾಡುವಾಗ ಕೆಲವು ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಈಗಿನ ಪರಿಸ್ಥಿತಿಯನ್ನು ಸ್ವಲ್ಪ ಯೋಚನೆಮಾಡಬೇಕಾಗಿದೆ: ಈಗಿನ ಪರಿಸ್ಥಿತಿಹೇಗಿದೆಯೆಂದರೆ, ಹಿಂದಿನ ವರ್ಷದ ಪರಿಸ್ಥಿತಿಗಿಂತ ಕಠಿಣವಾಗಿದೆಯೆಂದು, ಖಂಡಿತ ಹೇಳಬಹುದು. ಆಹಾರದ ಬೆಳೆ ವಿಚಾರ. ಅದು ವಿಷ ಏರಿದ ಹಾಗೆ ಏರುತ್ತಾ ಇದೆ. ಆಹಾರದ ಮೊತ್ತದ ವಿಚಾರ. ಅದು ಅನೇಕ ಕಾರಣಗಳಿಂದ ಇಂಡಿಯಾ ದೇಶದಲ್ಲಿ ಕಡಿಮೆಯಾಗುತ್ತಾ ಇದೆ. ಈಗ ಅಂತರ ರಾಷ್ಟ್ರೀಯ ವಿಚಾರ ನೋಡಿದರೆ ಎಷ್ಟೋ ಜನ ಯುದ್ಧಕ್ಕೆ ಮಹಾ ಪ್ರಯತ್ನಮಾಡುತ್ತಾ ಇದ್ದಾರೆ. ನನಗೆ ಏನು ಅನ್ನಿಸುತ್ತದೆ ಎಂದರೆ ಯುದ್ಧ ಇವತ್ತಲ್ಲ ನಾಳೆ ಆದರೂ ಬರುವಹಾಗೆಯೇ ಕಾಣುತ್ತಿದೆ. ತಪ್ಪುವ ಹಾಗಿಲ್ಲ. ನನ್ನ ಮಾತು ತಪ್ಪಾದರೂ ಆಗಲೀ, ಸಂತೋಷಪಡುತ್ತೇನೆ. ನಮ್ಮ ಇಂಡಿಯಾದೇಶ ಸುರಕ್ಷಿತವಾಗಿರಬೇಕು ಎನ್ನುವಾಗ ಎಲ್ಲರೂ ಒಗ್ಗಟ್ಟಿನಿಂದ ಸೇರಿಕೊಂಡು ಈ ದೊಡ್ಡ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಪ್ರಯತ್ನಪಡಬೇಕು.

ಮೊದಲು ಮೈಸೂರು ದೇಶದ ಆಹಾರ ಪರಿಸ್ಥಿತಿಯನ್ನು ವಿಮರ್ಶೆ ಮಾಡೋಣ. ಈ ಸಾರಿ ಮಳೆ ಸಾಮಾನ್ಯವಾಗಿ ನಡೆದಿದೆ. ಆದರೆ ಬೆಳೆ ವಿಚಾರದಲ್ಲಿ ಸ್ವಲ್ಪ ತೊಂದರೆಯೂ ಇದೆ. ಕೆಲವು ಕಡೆ ಬೆಳೆ ಬಂದಿದ್ದರೂ ಕೂಡ, ತೃಪ್ತಿಕರವಾಗಿಲ್ಲ. ಆಹಾರದ ಬೆಳೆಯ ವಿಚಾರದಲ್ಲಿ ಒಂದೇ ವರ್ಷ ಅಥವಾ 10 ವರ್ಷದಲ್ಲಿ ಏಕ್‌ದಂ ವಿಶೇಷ ಪ್ರಯತ್ನಪಟ್ಟರೆ ಜಯಪ್ರದವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇನ್ನೊಂದು ವಿಷಯವೇನೆಂದರೆ ನಮ್ಮ ಮೈಸೂರು ದೇಶದ ಅಂಕಿಅಂಶಗಳನ್ನು ತೆಗೆದುಕೊಂಡರೆ ಆ ವಿಚಾರದಲ್ಲಿ ಮೊದಲಿನಿಂದಲೂ ನಮ್ಮ ಸರ್ಕಾರದಲ್ಲಿ ನ್ಯೂನತೆಯಿದೆಯೆಂದು ಹೇಳುತ್ತೇನೆ. ಅದನ್ನು ಶಾಸ್ತ್ರೀಯವಾಗಿ ಪರಿಶೀಲನೆಮಾಡಿಲ್ಲ. ಸರಿಯಾದ ಅಂಕಿಅಂಶಗಳಿದ್ದರೆ ಈಗ ಎಷ್ಟುಮಟ್ಟಿಗೆ ಮುಂದುವರಿದಿದ್ದೇವೆ, ಇನ್ನು ಎಷ್ಟು ಪ್ರಯತ್ನಪಡಬೇಕು ಎಂಬುದನ್ನು ಹೇಳುವುದಕ್ಕೆ ಅವಕಾಶವಾಗುತ್ತಿತ್ತು. ಆದರೆ ಈಗ ಹೇಳುವುದಕ್ಕೆ ಸಾಧ್ಯವಿಲ್ಲ. ಎಲ್ಲಾ "ಕೈತೂಕ, ಬಾಯಿ ಬಣ್ಣ" ಎಂದು ಹೇಳುವ ಹಾಗೆ ಆಗಿದೆ. ಅಂಕಿಅಂಶಗಳ ವಿಚಾರ ಈ ರೀತಿ ಇದೆ. ಈಗ ಮೈಸೂರು ದೇಶದ ಹಳ್ಳಿ ಪ್ರದೇಶದಲ್ಲಿ ತಿರುಗಿ ನೋಡಿದ್ದರಲ್ಲಿ ಆಹಾರದ ವಿಚಾರದಲ್ಲಿ ಅಷ್ಟು ತೊಂದರೆ ಇಲ್ಲ, ರೈತರು ಸ್ವಲ್ಪ ಹೆಚ್ಚುಕಡಿಮೆ ಪ್ರಯತ್ನಪಟ್ಟು ಸಂಪಾದನೆ ಮಾಡುತ್ತಾರೆ, ಆದರೆ ಅವರಿಗೆ ಇರುವ ಕಿರುಕುಳ ತಪ್ಪಿಸಿದರೆ ಸಾಕು ಎಂದು ನನಗೆ ಅನ್ನಿಸುತ್ತದೆ. ಹತೋಟಿಯಿರುವುದರಿಂದ ನಮ್ಮ ಆಹಾರಪದಾರ್ಥಗಳಿಗೆ ಅನುಕೂಲವಾಗುತ್ತದೆ ಎಂಬುದನ್ನು ನಂಬುವುದಕ್ಕಾಗುವುದಿಲ್ಲ. ಹಳ್ಳಿಗಳಲ್ಲಿ ಆಹಾರದ ಡಿಪೋಗಳಲ್ಲಿ ಬ್ಲಾಕ್‌ಮಾರ್ಕೆಟ್ ನಡೆಯುತ್ತಾ ಇದೆ. ಅನೇಕ ಕಡೆ ಬರೀ ಕಳ್ಳ ಲೆಕ್ಕ ಹೇಳುತ್ತಾರೆ. ಅಲ್ಲೇ ಏಕೆ, ನಮ್ಮ ಬೆಂಗಳೂರಿನಲ್ಲೂ ನಡೆಯುತ್ತಾ ಇದೆ. ಈರೀತಿ ಹತೋಟಿಯಿಂದ ಕಳ್ಳರ ಗುಂಪು ತಯಾರಾಗುತ್ತಿದೆಯೇ ಹೊರತು ಹಳ್ಳಿಗಾಡಿನವರಿಗೆ ಹೆಚ್ಚು ಅನುಕೂಲವಾಗುತ್ತಿಲ್ಲ. ಆದ್ದರಿಂದ ಹತೋಟಿಯನ್ನು ತೆಗೆದರೆ ಎಷ್ಟೋ ಅನುಕೂಲವಾಗುತ್ತದೆ. ಈ ಕಂಟ್ರೋಲ್ ಈಗಿದೆ; ಇದ್ದರೂ ಅದರಿಂದೇನೂ ಪ್ರಯೋಜನವಿಲ್ಲ. ಅದಕ್ಕೆ ಬದಲು ಅವರಿಗೆ ಸುಮ್ಮನೆ ಕಿರುಕುಳಕ್ಕೆ ಕಾರಣವಾಗಿದೆ. ಆದ್ದರಿಂದ ನೀವು ಬೇಕಾದರೆ ಸರ್ಕಾರಿ ಡಿಪೋಗಳನ್ನು ಏರ್ಪಾಡು ಮಾಡಿ ರೈತನಿಗೆ ನೇರವಾಗಿ ಹಣ ಪಾವತಿ ಮಾಡಿ, ಆಹಾರದ ಶೇಖರಣೆಯನ್ನು ಎಷ್ಟು ಬೇಕಾದರೂ ಮಾಡಿ, ಚಿಂತೆಯಿಲ್ಲ. ಇತರ ವಿಚಾರಗಳಲ್ಲಿ, ಮುಖ್ಯವಾಗಿ ನಿಮ್ಮ ಆಹಾರದ ಯೋಜನೆ ಸಫಲಗೊಳ್ಳಬೇಕಾದರೆ, ರೈತಾಪಿ ಜನಗಳಿಗಿರುವ ಈ ಕಿರುಕುಳಗಳನ್ನು ತಪ್ಪಿಸಬೇಕು. ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಬಹಳ ಕಾಲದಿಂದಲೂ ಒಂದು ದೊಡ್ಡ ಸಮಸ್ಯೆಯಾಗಿರುವ ಇನಾಂತಿ ಮತ್ತು ಜೋಡಿ ಗ್ರಾಮಗಳ ವಿಷಯ ತಮಗೆ ಸ್ವಲ್ಪ ಹೇಳಬೇಕಾಗಿದೆ. ನಿಜವಾಗಿಯೂ ಈ ನಿಮ್ಮ ಆಹಾರದ ಯೋಜನೆ ಉತ್ತಮಗೊಳ್ಳಬೇಕಾದರೆ ನೀವು ಮೊದಲು ಈ ಇನಾಂ ಗ್ರಾಮಗಳ ಕಡೆ ಗಮನ ಕೊಡುವುದು ಅವಶ್ಯಕ. ಏಕೆಂದರೆ ನಮ್ಮ ದೇಶದಲ್ಲಿ ಇವುಗಳ ಸಂಖ್ಯೆ ಸುಮಾರು 2,000 ದಷ್ಟು, ಅಂದರೆ ದೇಶದ ಒಟ್ಟು ಪ್ರದೇಶದಲ್ಲಿ $\frac{1}{4}$ ಭಾಗದಷ್ಟಿದೆ. ಇವುಗಳ ಬಗ್ಗೆ ಏನಾದರೂ ಸೂಕ್ತ ಏರ್ಪಾಡನ್ನು, ಅಂದರೆ ಕಾನೂನನ್ನು ಮಾಡಲೆಂದು ಹಿಂದೆ 1948ನೆಯ ಡಿಸೆಂಬರಿನಲ್ಲೇ ಒಂದು ಇಂಟೆರಿಂ ರಿಪೋರ್ಟನ್ನು ಕಳುಹಿಸಿಕೊಟ್ಟಿದ್ದೆವು. ಸರ್ಕಾರದವರಿಗೆ ಇದರಿಂದ ಒಂದು ವೇಳೆ ಮೂರುನಾಲ್ಕು ಕೋಟಿ ರೂಪಾಯಿಗಳು ಖರ್ಚಾದರೂ ಅದರಿಂದ ಅವರ ಆಹಾರ ಹೆಚ್ಚಿಸುವ ಯೋಜನೆಗಾದರೂ ಸಹಾಯವಾದೀತೆಂದು ಯೋಚಿಸಿ ಆ ಇಂಟೆರಿಮ್ ವರದಿಯನ್ನು ಕಳುಹಿಸಿಕೊಟ್ಟೆವು. ಹಾಲಿ ಈ ಇನಾಂ ಗ್ರಾಮಗಳಲ್ಲಿ ಬಹುಮಟ್ಟಿಗೆ ರೈತರುಗಳಿಗೂ ಇನಾಂದಾರರುಗಳಿಗೂ ಜಗಳ ಹುಟ್ಟಿ ಅಲ್ಲಿ ಒಳ್ಳೆಯ ವ್ಯವಸಾಯ ನಡೆಯುವುದೇ ಕಷ್ಟವಾಗಿದೆಯೆಂದು ತಿಳಿದುಬಂದಿದೆ. ಆದ್ದರಿಂದ ಈ ರೈತರುಗಳಿಗಿರುವ ಕಿರುಕುಳವನ್ನು, ಹಕ್ಕುಗಳನ್ನು ಕೊಡುವ ಮೂಲಕ ನೀವು ತಪ್ಪಿಸಿಕೊಟ್ಟರೆ ಅವರು ಉತ್ಸಾಹದಿಂದ ತಮ್ಮ ವ್ಯವಸಾಯ ನಡೆಸುವುದಕ್ಕೆ ಅವಕಾಶವಾಗುತ್ತದೆ. ನಾವು ಇಂಟೆರಿಮ್ ವರದಿಯನ್ನು ಕಳುಹಿಸಿಕೊಟ್ಟ ಉದ್ದೇಶವಾದರೂ, ರೈತಾಪಿ ಜನರಿಗೆ ಈ ತೊಂದರೆಗಳು ತಪ್ಪಿ ಅವರು ನೆಮ್ಮದಿಯಿಂದ ಉತ್ಸಾಹದಿಂದ ವ್ಯವಸಾಯ ನಡೆಸಲು ಉತ್ತೇಜನ ದೊರೆಯುವಂತಾಗಲಿ ಎಂಬುದೇ ಆಗಿತ್ತು. ಆದರೆ ಸರ್ಕಾರದವರು ಈ ರಚನಾತ್ಮಕ ಉದ್ದೇಶವನ್ನು ಅಷ್ಟಾಗಿ ಮನಸ್ಸಿಗೆ ತೆಗೆದುಕೊಳ್ಳಲಿಲ್ಲವೆಂದು ಕಾಣುತ್ತೆ. ಹೋಗಲಿ; ಈಗಲಾದರೂ ಈ ಜೋಡಿ ಇನಾಂ ಗ್ರಾಮಗಳಿಗೆ ಸಂಬಂಧಪಟ್ಟಂತೆ ಒಂದು ಬಿಲ್ಲನ್ನು ತರುತ್ತಾರೆಂದು ಭಾವಿಸಿದ್ದೇನೆ. ಇದರಿಂದ ಅನೇಕ ಜನ ಬಡ ರೈತರನ್ನು ಉದ್ಧಾರಮಾಡಿದಂತಾಗುತ್ತದೆ.

ಇನ್ನು ನೀರಾವರಿ ಕಾಮಗಾರಿಗಳ ವಿಷಯ. ನೀವಿಲ್ಲಿ ಹೇಳಿರುವಂತೆ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳು ನಡೆಯಬೇಕಾದ್ದೇನೋ ಅವಶ್ಯಕವೇ. ಆದರೆ, ಇಂಥಾ ದೊಡ್ಡ ಕಾಮಗಾರಿಗಳಿಂದ ನಮಗೆ ಫಲ ಲಭಿಸಬೇಕಾದರೆ ಹತ್ತು ಹನ್ನೆರಡು ವರ್ಷಗಳ ಮೇರೆಯೇ ಹೊರತು ಸಾಧ್ಯಕ್ಕಿಲ್ಲ. ಆದ್ದರಿಂದ ಈ ದೀರ್ಘಕಾಲಿಕ ಯೋಜನೆಗಳ ಜೊತೆಗೆ ಮುಂಚೆ ಸಣ್ಣ ಸಣ್ಣ ಕಾಮಗಾರಿಗಳ ಕಡೆ ಹೆಚ್ಚಿನ ನಿಗಾ ಕೊಟ್ಟರೆ ಒಳ್ಳೆಯದೆಂದು ನಾನು ಮೊದಲಿನಿಂದಲೂ ಒತ್ತಿ ಹೇಳುತ್ತಿದ್ದೇನೆ. ಹಾಲಿ ಪರಿಸ್ಥಿತಿಯನ್ನು ನೋಡಿದರೆ ಸಣ್ಣ ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಅಷ್ಟಾಗಿ ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲ. ಅದೇನು ಕಂಟ್ರಾಕ್ಟರುಗಳಿಗೆ ಸರಿಯಾಗಿ ಹಣ ಗಿಟ್ಟುತ್ತಿಲ್ಲವೋ ಅಥವಾ ಕೂಲಿಗಾರರ ಅಭಾವದಿಂದ ತೊಂದರೆಯಾಗಿದೆಯೋ, ಅಂತೂ ಈ ಕೆರೆಗಳ ಕೆಲಸ ಹೆಚ್ಚಾಗಿ ನಡೆಯುತ್ತಿಲ್ಲ; ಅವುಗಳ ಬಗ್ಗೆ ನಾವು ನಿರೀಕ್ಷಿಸಿದಷ್ಟು ಮುಂದುವರಿಯುತ್ತಿಲ್ಲ, ನಮ್ಮ ಆಹಾರ ಹೆಚ್ಚಿಸುವ ಯೋಜನೆಗೆ ಇದು ಬಹಳ ಅವಶ್ಯಕವಾದುದೆಂಬದನ್ನು ನಾವು ಮರೆಯುವ ಹಾಗಿಲ್ಲ; ಪ್ರತಿಯೊಂದು ಹಳ್ಳಿಗೂ ಈ ಅನುಕೂಲಮಾಡಿಕೊಟ್ಟರೆ ನಮ್ಮ ಯೋಜನೆ ಬಹಳಮಟ್ಟಿಗೆ ಸಫಲಗೊಳ್ಳುತ್ತದೆ. ಈಗ ಹಳ್ಳಿಗಾಡುಗಳಲ್ಲಿ ಒಂದು ಮುಖ್ಯವಾದ ತೊಂದರೆಯೆಂದರೆ ಕೂಲಿಗಾರರ ಅಭಾವ. ಕಂಟ್ರೋಲಿನ ದೆಸೆಯಿಂದ ಆಹಾರಕ್ಕಾಗಿ ಹಳ್ಳಿಗಳಿಂದ ಕೂಲಿಗಾರರನೇಕರು ಪಟ್ಟಣದ ಕಡೆಗೆ ಬರುತ್ತಲಿದ್ದಾರೆ. ಮೊನ್ನೆ ಬೊಂಬಾಯಿನಲ್ಲಿ ನಡೆದ ಆಹಾರದ ಸಮ್ಮೇಳನದಲ್ಲಿಯೂ ಈ ವಿಷಯ ಪ್ರಸ್ತಾಪಕ್ಕೆ ಬಂದು ಗ್ರಾಮಾಂತರಗಳ ಕಡೆ ಡಿ-ಕಂಟ್ರೋಲ್ ಮಾಡಬೇಕೆಂದು ಯೋಚನೆಮಾಡಿದರೆಂದು ಕೇಳಿಬಂತು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಹೊರಡಿಸಿದ ಪ್ರಕಟಣೆಯಲ್ಲೆಲ್ಲೂ ಅವರು ಹಾಗೆ ಡಿ-ಕಂಟ್ರೋಲ್ ಮಾಡಬೇಕೆಂಬ ಅಭಿಪ್ರಾಯವನ್ನು ಹೇಳಲಿಲ್ಲವಲ್ಲಾ.

ಶ್ರೀ ಎಚ್. ಟಿ. ಗುಂಡಪ್ಪಗೌಡರು.—ಇರಬಹುದು. ಆದರೂ ಏಕ್ಕವರ ವಿಚಾರ ನಮಗೆ ಬೇಡ. ನಾವೇ ಇದನ್ನೇಕೆ ಯೋಚನೆಮಾಡಕೂಡದು? ಏಕೆಂದರೆ, ನಾವೇ

(ಶ್ರೀ ಎಚ್. ಬಿ. ಗುಂಡಪ್ಪಗೌಡರು)

ನೋಡಿರುವಂತೆ ಹಳ್ಳಿಗಳ ಕಡೆಯಿಂದ ಅನೇಕ ಜನ ಕೂಲಿಗಾರರು ಪಟ್ಟಣದ ಕಡೆಗೆ ಬರುತ್ತಿದ್ದಾರೆ. ಇದರಿಂದ ಹಳ್ಳಿಗಳಲ್ಲಿ ಕೂಲಿಗಾರರಿಲ್ಲದೆ ಜಮೀನು ವ್ಯವಸಾಯ ಹಿಂದೆ ಬೀಳುತ್ತದೆ. ಆದ್ದರಿಂದ ಮುಂಚೆ ಆ ಭಾಗಗಳಲ್ಲಿ ಕಂಟ್ರೋಲ್ ತಪ್ಪಿಸಿ, ಈ ಕೂಲಿಗಾರರು ಹಳ್ಳಿಗೆ ಹಿಂತಿರುಗುವಂತೆ ಮಾಡಬೇಕು. ಹಳ್ಳಿಗಾಡಿನಲ್ಲಿ ರೈತಾಪಿ ಜನರು ಆಹಾರಕ್ಕಾಗಿ ಅಷ್ಟೊಂದು ತೊಂದರೆಪಡುತ್ತಿದ್ದಾರೆಂದು ನಾನು ನಂಬಲಾರೆ. ಹೇಗಾದರೂ ಮಾಡಿ ಸ್ವಲ್ಪಕಾಲದಲ್ಲೇ ಅವರು ಸರಿಹೊಂದಿಸಿಕೊಳ್ಳುತ್ತಾರೆ. ಒಂದು ವೇಳೆಯೇನಾದರೂ ಕೆಲವು ಕಡೆ ಅಷ್ಟು ಕಷ್ಟಬಂದಲ್ಲಿ ಬೇರೆ ಕಡೆಯಿಂದ ಬೇಗ ಆಹಾರ ಒದಗಿಸುವುದಕ್ಕೆ ನಮಗೇನೂ ಕಷ್ಟವಿರಲಾರದು. ಆದ್ದರಿಂದ ಸರ್ಕಾರದವರು ಇದನ್ನು ಆಲೋಚನೆಮಾಡುವುದು ಸಮಯೋಚಿತವಾಗಿದೆ. ಒಟ್ಟಿನಲ್ಲಿ, ಕಂಟ್ರೋಲ್ ಇದ್ದಷ್ಟೂ ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದಂತೆ ತೊಂದರೆಗಳಿದ್ದೇ ಇರುತ್ತವೆಂಬುದು ಶತಸಿದ್ಧ. ಆದ್ದರಿಂದ ಕಂಟ್ರೋಲಿಟ್ಟುಕೊಂಡು ಜನರು ಒಂದು ವರ್ಷ ತೊಂದರೆ ಅನುಭವಿಸಬಹುದು, ಎರಡುವರ್ಷ ಅನುಭವಿಸಬಹುದು. ಆದರೆ ಇದೇ ರೀತಿ ಹೋದರೆ ಎಷ್ಟು ವರ್ಷ ಕಾಲ ಹೀಗೆಯೇ ಅನುಭವಿಸುವುದು? ಒಂದು ವೇಳೆ ಯುದ್ಧ ಬಂದುಬಿಟ್ಟಿತೆಂದರೆ ನೀವು ಮಾಡಿದ್ದೆಲ್ಲಾ ಮತ್ತೆ ತರೆಕೆಳಗಾಗುತ್ತದೆ; ಕಾಲ ವಿಪರೀತಕ್ಕಿಟ್ಟುಕೊಳ್ಳುತ್ತದೆ. ಆದ್ದರಿಂದ ಆಯಾ ಕಾಲಕ್ಕೆ ತಕ್ಕಂತೆ ಹೊಂದಿಕೊಂಡು ಹೋಗಬೇಕು.

ತಾವಿಲ್ಲಿ ಕೆಲವು ದೊಡ್ಡ ಕೈಗಾರಿಕೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ; ಸಂತೋಷ. ಆದರೆ ನಮ್ಮ ದೇಶದಲ್ಲಿರುವ ಅನೇಕ ಕೈಗಾರಿಕೆಗಳಲ್ಲಿ ಸರ್ಕಾರದವರು ನಡೆಸುತ್ತಿರುವ ಕೈಗಾರಿಕೆಗಳೇಕೋ ಸರಿಯಾಗಿ ನಡೆಯುತ್ತಿಲ್ಲ. ಬಹುಶಃ "Everybody's concern is nobody's concern" ಎಂದು ಕಾಣುತ್ತೆ. ಆದ್ದರಿಂದ ಕೈಗಾರಿಕೆಗಳಿಗೆ ಹೆಚ್ಚು ಹೆಚ್ಚು ಹಣವನ್ನೊದಗಿಸುವುದನ್ನೇನೂ ನಾವು ಬೇಡವೆನ್ನದೆ ಹೋದರೂ ಅದನ್ನು ಕಾಲ ಕಾಲಕ್ಕೆ ತನಿಖೆ ನಡೆಸುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಅವು ಎಷ್ಟುಮಟ್ಟಿಗೆ ಕೆಲಸಮಾಡುತ್ತಿವೆ, ಎಷ್ಟು ಉತ್ಪತ್ತಿ ತರುತ್ತಿವೆ, ಹಿಂದೆ ಬಿದ್ದಿದ್ದರೆ ಏಕೆ ಹಾಗಾಗಿವೆ ಎಂಬುದನ್ನು ಆಗಾಗ್ಗೆ ತನಿಖೆ ಮಾಡುತ್ತಿರಬೇಕು. ಇಲ್ಲದಿದ್ದರೆ, ನಮ್ಮ ಈ ಕೈಗಾರಿಕೆಗಳು ಬೇಗ ಮುಂದುವರಿಯಲಾರವು. ಆ ಮೇಲೆ, ದೊಡ್ಡ ಕೈಗಾರಿಕೆಗಳ ವಿಷಯದಲ್ಲಿಯೂ—ಅವು ವಿದ್ಯುಚ್ಛಕ್ತಿ ಇರಾಬೆಯೇ ಆಗಲಿ, ಅಥವಾ ಇನ್ನಾವುದೇ ಆಗಲಿ—ಅವಕ್ಕಾಗಿ ಈಗ ಒಂದಕ್ಕೆ ನಾಲ್ಕರಂತೆ ಬೆಲೆ ಕೊಟ್ಟು ಸಲಕರಣೆಗಳನ್ನು ಒದಗಿಸುತ್ತಿರುತ್ತೇವೆ. ಹೀಗೆ ಖರ್ಚುಮಾಡಿದ್ದಕ್ಕೆ ತಕ್ಕಹಾಗೆ ಆಗಾಗ್ಗೆ ಇದರಿಂದ ಸ್ವಲ್ಪ ಉತ್ಪತ್ತಿಬರುವಂತೆಯೂ ಮಾಡಿಕೊಳ್ಳಬೇಕಾದ್ದು ಆವಶ್ಯಕ. ಏಕೆಂದರೆ, ಈಗ ಸದ್ಯದಲ್ಲೇ ಏನಾದರೂ ಯುದ್ಧ ಬಂದುಬಿಟ್ಟಿತೆಂದರೆ ನಮಗೆ ಸಾಕಾದಷ್ಟು ಯಂತ್ರೋಪಕರಣಗಳು ಸಿಕ್ಕದೆ ಈ ಕೆಲಸಗಳು ಮಧ್ಯೆ ನಿಲ್ಲಬೇಕಾಗಿ ಬರಬಹುದು. ಹೀಗಾಗಿ ನಾವು ವೆಚ್ಚಮಾಡಿದ ಹಣಕ್ಕೆ ಯಾವ ಪ್ರತಿಫಲವೂ ಇಲ್ಲದೆ ಹೋಗುತ್ತದೆ. ಇಂಥ ಯಾವ ಯೋಜನೆಗಳನ್ನು ಹಾಕಿಕೊಳ್ಳುವುದರಲ್ಲಿಯೂ, ಮಧ್ಯೆ ಒಂದೊಂದು ಹಂತದಲ್ಲಿ ನಿಲ್ಲಿಸಿದರೂ ಅದರಿಂದ ಸ್ವಲ್ಪ ಹಣ ಬರುವಂತೆ ಮಾಡಿಕೊಂಡಿರಬೇಕು. ಹಾಗಿಲ್ಲದೆ ಸುಮ್ಮನೆ ದೀರ್ಘಕಾಲಿಕ ಯೋಜನೆಯನ್ನು ಹಾಕಿಕೊಂಡು ಅದು ಪೂರಾ ಮುಗಿಯುವವರೆಗೂ ನಾವೇನೂ ಪ್ರತಿಫಲ ಪಡೆಯುವ ಹಾಗಿಲ್ಲದೆ ಹೋದರೆ, ಮಧ್ಯೆ ಆಕಸ್ಮಿಕವಾಗಿ ಏನಾದರೂ ಪರಿಸ್ಥಿತಿಯೊದಗಿ ಅದನ್ನು ನಿಲ್ಲಿಸಬೇಕಾಗಿ ಬಂದರೆ ಎಷ್ಟೋ ಕಾಲದವರೆಗೆ ನಮ್ಮ ಹಣಕ್ಕೆ ಏನೂ ಪ್ರತಿಫಲ ಸಿಕ್ಕದೆ ಹೋಗುತ್ತದೆ. ಹಿಂದೊಮ್ಮೆ ನಮ್ಮ ಜೋಗಿನ ಕಾಮಗಾರಿಯ ವಿಷಯದಲ್ಲಿ ಹೀಗೆಯೇ ಆಗಿತ್ತು; ಅದರ ಮೇಲೆ ನಾನಿದನ್ನು ಹೇಳುತ್ತಿದ್ದೇನೆ. ಇದಕ್ಕಾಗಿಯೇ ಹಿಂದೆ ಫೆಲ್ಪ್ಸ್ ಎಂಬೊಬ್ಬ ಅಮೆರಿಕನ್ ತಜ್ಞರನ್ನು ನೇಮಿಸಿ ನಮ್ಮ ದೇಶದಲ್ಲಿನ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವ ವಿಚಾರದಲ್ಲಿ ಅವರ ಸಲಹೆಯನ್ನು ಪಡೆಯುವ ಏರ್ಪಾಡನ್ನು ಆಗಿನ ಸರ್ಕಾರದವರು ಏರ್ಪಾಡು ಮಾಡಿದ್ದರು. ಅವರೇನಾದರೂ ರಿಪೋರ್ಟ್ ಕೊಟ್ಟರೋ, ಕೊಟ್ಟಿದ್ದರೆ ಅದೇನಾಯಿತೋ ಗೊತ್ತಿಲ್ಲ! ಅಂತೂ, ನನ್ನ ಅಭಿಪ್ರಾಯದಲ್ಲಿ ಇಂಥ ಪ್ರತಿಯೊಂದು ಕೈಗಾರಿಕೆಯ ವಿಷಯದಲ್ಲಿಯೂ ಒಂದೊಂದು ಹಂತವನ್ನು ಪೂರೈಸಿ ಸ್ವಲ್ಪಮಟ್ಟಿಗಾದರೂ ಹಣ ಬರುವಂತೆ ಮಾಡಿಕೊಂಡು ಒಟ್ಟಿಗೆ ಹೆಚ್ಚಿಗೆ ಹಣ ಗಂಟು ಬೀಳದಹಾಗೆ ತಕ್ಕ ಯೋಜನೆಮಾಡಿಕೊಳ್ಳಬೇಕು. ಜೊತೆಗೆ ಇದನ್ನು ಆಗಾಗ್ಗೆ ತನಿಖೆಮಾಡುತ್ತಿರಬೇಕು. ಸರ್ಕಾರದವರೇನೋ ಈಗಲೂ ಸರ್ವ ಸಾಧಾರಣವಾಗಿ ತನಿಖೆಮಾಡುತ್ತಿರಬಹುದು. ಆದರೂ ಒಂದು ನಿರ್ದಿಷ್ಟರೀತಿಯಲ್ಲಿ ಹೋಗುತ್ತಿಲ್ಲವೆಂದು ಕಾಣುತ್ತದೆ. ಏಕೆಂದರೆ, ಉದಾಹರಣೆಗೆ ನಮ್ಮಲ್ಲಿನ ಎಲೆಕ್ಟ್ರೋ ಫೋರ್ಸ್‌ಲೇನ್‌ಫ್ಯಾಕ್ಟರಿ ವಿಚಾರ ಹೇಳುತ್ತೇನೆ. ಈಗ ಎಷ್ಟು ವರ್ಷದಿಂದ ಅದರ ಸ್ಥಿತಿ ಹೀಗೆಯೇ ಇದೆ ನೋಡಿ! ಎಲೆಕ್ಟ್ರಿಕ್ ಕಿಲ್ನ್ ಸಹಾಯದಿಂದ ಈ ಕೈಗಾರಿಕೆಯನ್ನು ಲಾಭದಾಯಕವಾಗಿ ನಡೆಸಬಹುದೆಂದು ಹೇಳಿದಿರಿ. ಈಗ ಈ ಕಿಲ್ನ್ ಇದ್ದರೂ ಏನಾದರೂ ಅದರಿಂದ ಲಾಭ ಬರುತ್ತದೆಯೋ ನೋಡಿ. ಅದೇ ತಿರುವಾಂಕೂರಿನಲ್ಲಿ ಎಲೆಕ್ಟ್ರಿಕ್ ಕಿಲ್ನ್ ಇಲ್ಲದೆ ಲಾಭದಾಯಕವಾಗಿ ಕೆಲಸಮಾಡುತ್ತಿಲ್ಲವೇ? ನಮಗೇಕೆ ನಷ್ಟವಾಗುತ್ತಿದೆ? ಮೊನ್ನೆ ಶಿವಮೊಗ್ಗಾದಲ್ಲಿ ಬೆಂಕಿಕಡ್ಡಿ ಕಾರ್ಖಾನೆಯನ್ನು ಮುಚ್ಚಬೇಕಾಯಿತು ಎಂದು ನಾನು ಆ ಫ್ಯಾಕ್ಟರಿ ಡೈರೆಕ್ಟರುಗಳು ಮಾಡಿದ ರಿಪೋರ್ಟ್‌ನಲ್ಲಿ ಓದಿದ ಜ್ಞಾಪಕವಿದೆ. ನಮ್ಮ ದೇಶದಲ್ಲಿ ಇಷ್ಟೊಂದು ಅರಣ್ಯಪ್ರದೇಶವನ್ನಿಟ್ಟುಕೊಂಡು ಒಂದು ಬೆಂಕಿಕಡ್ಡಿ ಕಾರ್ಖಾನೆಯನ್ನು ನಡೆಸಲಾಗುತ್ತಿಲ್ಲವೆಂದರೆ ಏನು ಹೇಳೋಣ!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದೇ! ಅದರದು ಬಹಳ ಹಳೆಯ ಮಂತ್ರ.

ಶ್ರೀ ಎಚ್. ಬಿ. ಗುಂಡಪ್ಪಗೌಡರು:—ಅದೇ ಅಂಶವನ್ನೇ ನಾನು ಹೇಳುತ್ತಿರುವುದು. ಎಷ್ಟೋ ಕೈಗಾರಿಕೆಗಳು ಹೀಗೆ ಮಧ್ಯೆ ನಿಂತುಹೋಗುತ್ತವೆ. ಆದ್ದರಿಂದಲೇ ತಾವು ಹುಷಾರಿನಿಂದ ಹಣವನ್ನು ಈ ಕೈಗಾರಿಕೆಗಳ ಮೇಲೆ ಹಾಕಬೇಕೆಂದು ನಾನು ಎಚ್ಚರಿಕೆ ಕೊಡುತ್ತಿದ್ದೇನೆ.

ಇನ್ನು ಸಮಿತಿಗಳ ವಿಚಾರದಲ್ಲಿ ಒಂದೆರಡು ಮಾತು ಹೇಳುತ್ತೇನೆ. ಹಿಂದೆಯೂ ಅನೇಕ ಸ್ಥಾಯಿ ಸಮಿತಿಗಳೂ ಸಲಹಾ ಸಮಿತಿಗಳೂ ಇದ್ದುವೆಂಬುದು ಗೊತ್ತು. ಆದರೆ ನಾನು ನೋಡಿರುವಂತೆ ಈ ಸಮಿತಿಗಳ ವಿಷಯದಲ್ಲಿರುವ ಒಂದು ಮುಖ್ಯವಾದ ಕಷ್ಟವೆಂದರೆ, ಅವುಗಳಿಗೆ ಸಾಕಾದಷ್ಟು ಹಣದ ಸಹಾಯವಿರುವುದಿಲ್ಲ. ಸಮಿತಿಗಳನ್ನು ಮಾಡಿದ ಮೇಲೆ, ಸಮಿತಿಯವರು ತಮ್ಮ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ದ್ರವ್ಯಾನುಕೂಲತೆಯಿರಬೇಕು. ಅದಿಲ್ಲದಿದ್ದರೆ ಸಮಿತಿಯವರಿಗೆ ಕೆಲಸ ಮಾಡುವುದರಲ್ಲಿ ಆಸಕ್ತಿಯಿರುವುದಿಲ್ಲ.

ತಾವು ಮಾಡಿದ ಯೋಜನೆಗಳು ಯಾವಾಗ ಕಾರ್ಯರೂಪಕ್ಕೆ ಬರುವುದಿಲ್ಲವೆಂದು ಗೊತ್ತಾಗುತ್ತದೆಯೋ ಆಗ ಅದರ ಪರಿಣಾಮ ಗೊತ್ತೇ ಇದೆ. ಕೆಲಸ ಮಾಡುವುದಕ್ಕೆ ಯಾರಿಗೂ ಉತ್ಸಾಹವಿರುವುದಿಲ್ಲ. ಆದ್ದರಿಂದ ನೀವೇನಿದ್ದರೂ ಒಂದು ಪಾಲಿಸಿ ಕಮಿಟಿಯೆಂದು ನೇಮಕ ಮಾಡಿಕೊಳ್ಳಬಹುದು. ಅಷ್ಟೇ ಹೊರತು ಪ್ರತಿಯೊಂದು ಇಲಾಖೆಗೂ ಒಂದೊಂದು ಸಮಿತಿಯನ್ನು ನೇಮಿಸುವುದು ನ್ಯಾಯವಲ್ಲ. ಪ್ರಜಾಪ್ರಭುತ್ವ ಬಂದಮೇಲೆ ನಾವು ಜನಗಳಿಗೆ ಹೆಚ್ಚಿಗೆ ಪ್ರಯೋಜನವೇನಾದರೂ ಉಂಟುಮಾಡಿದ್ದೇವೆಯೇ ಅಥವಾ ಇಲ್ಲವೇ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು.

ಈಗ ಈ ಅಧಿವೇಶನದ ಮುಂದೆ ಇನ್ನು ಮುಂದಕ್ಕೆ ಈ ಸಭೆಯ ಮಾನ್ಯ ಸದಸ್ಯರುಗಳಿಗೆಲ್ಲಾ 'Payment of Salaries and Allowances' ಬಾಪತಿ ಮಾಡತಕ್ಕ ಬಗ್ಗೆ ಒಂದು ಮಸೂದೆ ಬರಲಿದೆ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದನ್ನು ಈಗ ನೂತನ ರಾಜ್ಯಾಂಗದ ವಿಧಿಗನುಸಾರವಾಗಿ ತರಲಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಂಡಿಯಾ ದೇಶದಲ್ಲೆಲ್ಲಾ ಆರೀತಿ ಈಗಾಗಲೇ ಜಾರಿಯಲ್ಲಿದೆ.

ಶ್ರೀ ಎಲ್. ಸಿದ್ದಪ್ಪನವರು.—ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಪಬ್ಲಿಕ್ ಸರ್ವಿಸ್ ಕಮಿಷನ್ನೂ ಇದೆ!

ಶ್ರೀ ಎಚ್. ಟಿ. ಗುಂಡಪ್ಪಗೌಡರು.—ಹಿಂದೆ ನಾವೆಲ್ಲರೂ ಒಂದಾನೊಂದು ಕಾಲದಲ್ಲಿ ಕಾಣಬಹುದಾಗಿದ್ದ ಜಿಲ್ಲಾ ಬೋರ್ಡು ಅಧ್ಯಕ್ಷತೆ ಅಥವಾ ಮುನಿಸಿಪಾಲಿಟಿ ಅಧ್ಯಕ್ಷತೆಗಳು ಖಾಸಗಿ ಜನರಿಗೆ ಅವಕಾಶವಿದ್ದಾಗ ರಾಜಕೀಯವು ಸುಲಭ ಖರ್ಚಿನಿಂದ ನಡೆದು ದೇಶಕ್ಕೆ ದುಡಿಯುತ್ತಿದ್ದವು. ಈಗಲಾದರೋ ಅಧಿಕಾರದಲ್ಲಿ ಖಾಸಗಿ ಜನಗಳಿಗೆ ಹೆಚ್ಚಿಗೆ ಅವಕಾಶವಿದ್ದರೂ ಪ್ರಜಾಪ್ರಭುತ್ವ ನಡೆಯಬೇಕಾದರೆ ತಿಂಗಳಿಗೆ ಸಂಬಳ ವಗೈರೆಗಳನ್ನು ಮೆಂಬರುಗಳಿಗೆ ಕೊಡುವುದಾದರೆ, ಒಂದುಕಡೆ ಖರ್ಚಿನಲ್ಲಿ ಖೋತಾಮಾಡುವ ಯೋಜನೆ ಯಾವರೀತಿ ಫಲಿಸುತ್ತೆಂದು ಯೋಚಿಸಬೇಕಾಗಿರುತ್ತೆ. ಈಗ ಮಿತವ್ಯಯ ಇತ್ಯಾದಿಗಳ ಕಡೆ ಹೆಚ್ಚು ಗಮನ ಕೊಡಬೇಕಾಗಿದೆ. ಹೀಗೆ ಇವೆರಡನ್ನೂ ಹೊಂದಾಣಿಕೆ ಮಾಡಿಕೊಂಡು ನಡೆಯುವುದು ಬಹಳ ಕಷ್ಟ. ಮತ್ತು ತಾವೀಗ ಹೇಳಿದಂಥ ಸಮಿತಿಗಳಿಂದ ಅಷ್ಟಾಗಿ ಸುಖವಿದ್ದಂತೆ ಕಾಣುತ್ತಿಲ್ಲ. ಇಂಡಿಯಾ ಸರ್ಕಾರದವರು ನಮಗೆ ಕೊಡತಕ್ಕ ಸಾಲದ ಬಗ್ಗೆ ಅವರು ವಿಧಿಸಿರತಕ್ಕ ಷರತ್ತುಗಳು ಅಷ್ಟಾಗಿ ಸಮರ್ಪಕವಾಗಿಲ್ಲ. ಅವುಗಳು ಚೆನ್ನಾಗಿಲ್ಲವೆಂದೇ ನನ್ನ ಭಾವನೆ. ಈ ಯೋಜನೆಗಳಿಗಾಗಿ ಅವರು ನಮಗೆ ಸಾಲ ಕೊಟ್ಟರೆ, ಪುನಃ ಅದನ್ನು ಅವರು ವಾಪಸ್ಸು ತೆಗೆದುಕೊಂಡೇ ತೆಗೆದುಕೊಳ್ಳುತ್ತಾರೆ. ಅವರೇನಾದರೂ ನಮಗೆ ಪುಗಸಟ್ಟೆ, ದಾನವಾಗಿ ಕೊಡುತ್ತಾರೇನು! ಅದಕ್ಕಾಗಿ ನಾವು ಬಡ್ಡಿ ತೆರುವುದಿಲ್ಲವೇನು! ಯಾವ ದಾಕ್ಷಿಣ್ಯವೂ ಇಲ್ಲದೆ ಕೊಟ್ಟಿರುವಾಗ ಆ ರೀತಿಯ ಷರತ್ತುಗಳನ್ನು ಅನುಸರಿಸಿ ದಿನ ಬೆಳಗಾದರೆ ಅವರಲ್ಲಿ ಹೋಗಿ ಸಾಲ ಕೇಳುವಂಥಾದ್ದು ಅಷ್ಟು ಚೆನ್ನಾಗಿಲ್ಲವೆಂದು ನನಗೆ ತೋಚುತ್ತಿದೆ. ಆದರೆ ಅನೇಕ ಬಾಬುಗಳಲ್ಲಿ ಮಾನ್ಯ ಹಣಕಾಸಿನ ಸಚಿವರು ಕಷ್ಟಪಟ್ಟು ಇದ್ದದ್ದರಲ್ಲಿ salvage policy ಯಿಂದ ಆದಷ್ಟು ಹಣವನ್ನು ಇಂಡಿಯಾ ಸರ್ಕಾರದಿಂದ ಪಡೆದಿರುತ್ತಾರೆ. ಇದು ಒಂದು ಸಂತೋಷದ ವಿಚಾರ. ಏನೇ ಆಗಿರಲಿ ಇಂಥಾ small mercies ಗೆ ನಾವು ಮನ ಸೋಲಬಾರದು. ಒಟ್ಟಿನಲ್ಲಿ ನನಗೆ ಕಾಣುವುದು ಮೈಸೂರು ಸಂಸ್ಥಾನದ ಪರವಾಗಿ bargaining power ಏನಾದರೂ ಕಮ್ಮಿಯಾಗಿದೆಯೇನೋ ಎಂಬ ಅನುಮಾನವಿದೆ.

(Interruption)

ಇನ್ನು ಮಿಲಿಟೆರಿಯವರ ವಿಚಾರದಲ್ಲಿ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಇದರ ಬಗ್ಗೆ ಕೊಂಚ ಸಮಾಧಾನಕರವಾಗುವಂಥ ಸೂಚನೆಯನ್ನು ತಿಳಿಸಿದ್ದರೆ ಚೆನ್ನಾಗಿತ್ತೆಂದು ನನಗೆ ಅನಿಸುತ್ತಿದೆ. ಮೊದಲು ಆ ಸೈನಿಕರೆಲ್ಲಾ ನಮ್ಮ ಆಡಳಿತಕ್ಕೊಳಪಟ್ಟದ್ದಾಗ ಅವರಿಗೆ ಸರ್ವೀಸು ಪೂರ್ಣವಾಗಿ ಪೂರೈಸುವತನಕ ನೌಕರಿಯಲ್ಲಿರುತ್ತೇವೆಂಬ ಗ್ಯಾರಂಟಿಯನ್ನು ಇಟ್ಟುಕೊಂಡಿದ್ದರು. ಅದರಂತೆ ನಮ್ಮ ಸರ್ಕಾರವೂ ಅವರಿಗೆ ಗ್ಯಾರಂಟಿ ಕೊಟ್ಟಿತ್ತು. ಹಿಂದೆಲ್ಲಾ ನಮ್ಮ ಸೈನಿಕರು ಹೊರಗಡೆ ಹೋಗಿ ನಮ್ಮ ದೇಶದ ಧವಳ ಕೀರ್ತಿಯನ್ನು ಬೆಳಗಿದ್ದಾರೆ, ಇಂಥವರ ಬಾಳ್ವೆ ಈಗ ಬೇರೆಯವರ ಆಡಳಿತಕ್ಕೊಳಗಾದ ಕಾರಣದಿಂದ ಬದ್ದುಹೋಯಿತು. ಅವರಿಗೆ ನಾವು ನೀಡಿದ್ದ ಭರವಸೆ ಈಗ ಏನಾಯಿತು? ಇದೂ ಅಲ್ಲದೆ ಈಗ ಪ್ರತಿಯೊಂದು ರಾಷ್ಟ್ರವೂ ಕೂಡ ತನ್ನ ಸೈನ್ಯ ಬಲವನ್ನು ಬಲಪಡಿಸಿಕೊಳ್ಳುತ್ತಿರುವ ಕಾಲದಲ್ಲಿ ಇವರು ಇದ್ದಂಥ ಸೈನಿಕರನ್ನೂ ಮನೆಗೆ ಕಳುಹಿಸುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ತಾವು ಮಾಡತಕ್ಕ ಹೊಸ ಹೊಸ ಪದ್ಧತಿಗಳ ರಭಸದಲ್ಲಿ ಹಳೆಯ ಪದ್ಧತಿಗಳನ್ನೆಲ್ಲಾ ನಿರ್ಮೂಲ ಮಾಡುತ್ತಿದ್ದಾರೆ. ಹೊಸ ಹೊಸ ಪದ್ಧತಿಗಳನ್ನು ಮಾಡಬೇಕಾದ್ದೇನೋ ನ್ಯಾಯವೇ ಸರಿ. ಆದರೆ ಹಿಂದೆ ಮಾಡಿದ್ದನ್ನು ಮಾತ್ರ ಅವರು ಮರೆಯಬಾರದು. ಆದ್ದರಿಂದ ಈ 12 ಹೊಸ ಕೇಡೆಟ್‌ಗಳ……………

(ಸಭೆಯಲ್ಲಿ ಅನೇಕರು 12 ಕೇಡೆಟ್ ಅಲ್ಲ, 20 ಕೇಡೆಟ್ಸ್ ಎಂದು ತಿದ್ದಿಕೊಳ್ಳಬೇಕೆಂದು ಸೂಚಿಸಿದರು.)

I thought it was 12. Do we not owe duty to our men? As Government we must feel for them. ಈಗ ಅವರು ಈ ವಯಸ್ಸಿನಲ್ಲಿ ಎಲ್ಲಿಗೆ ಹೋಗಬೇಕು! ಏನು ಕೆಲಸ ತಾನೆ ಮಾಡಲಿಕ್ಕಾಗುತ್ತದೆ! ನಾವು ಅವರು ಹೇಳಿದ ಷರತ್ತಿಗೊಳಪಟ್ಟು, ಅವರು ಇವರನ್ನೆಲ್ಲಾ ತೆಗೆದುಕೊಂಡಮೇಲೆ how can they discontinue these men the very next day! ನಾವು ಈ ಸೈನಿಕರನ್ನು ಅವರ ಆಡಳಿತಕ್ಕೊಪ್ಪಿಸುವಾಗ ಅವರಿಗೆ ಅನೇಕ ಆಶಾಭಾವನೆಗಳನ್ನು ನೀಡಿದ್ದಾಯಿತು, ಅವರಿಗೆ ಶ್ರೇಯಸ್ಸನ್ನು ಕೋರಿ ಕಳುಹಿಸಲಾಯಿತು. ಆದರೆ ಇಂದು ಇಂಡಿಯಾ ಸರ್ಕಾರ ಈ ರೀತಿ ಮಾಡಿರುವುದನ್ನು ನೋಡಿದರೆ ಅವರ ಮೇಲೆ ನಾವು ಏಕೆ ಕಾರ್ಯಕ್ರಮವನ್ನು ಈಗ ಕೈಗೊಳ್ಳಬಾರದೆಂದು ಅನಿಸುತ್ತದೆ. ಈ ವಿಚಾರದಲ್ಲಿ ನಮಗೆ ಅಷ್ಟಾಗಿ ಇಂಡಿಯಾ ಸರ್ಕಾರದವರ ಸಹಾಯ ಬೇಡ, ಬೇಕಾದ್ದೇ ಇರಲಲ್ಲ. Subject to verification, Bharatpur, Patiala and other North-Indian States and even Hyderabad, did not depend entirely upon the Government of India's concessions. ಆ ಸೈನಿಕರೆಲ್ಲ ನಮ್ಮಲ್ಲೇ ಇದ್ದು ಒಂದು ವೇಳೆ ಹೀಗಾಗಿದ್ದಲ್ಲಿ ನಾವೇನು ಪರಿಹಾರವನ್ನು ಅವರಿಗೆ ನೀಡುತ್ತಿದ್ದೆವೋ ಅದೇ ರೀತಿ ಈಗ ಅವರೂ ಕೂಡ ಇವರಿಗೆ ಪರಿಹಾರ ನೀಡಲೇಬೇಕಾಗಿದೆ. We owe a duty to our army men to see that they are given some good concessions.

The Hon'ble Sri H. C. DASAPPA.—If not enough is provided for by the Centre.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—We must fight and if they are not generous enough, we have to uphold our men. ಸ್ವಲ್ಪ ದ್ರವ್ಯ ಸಹಾಯವನ್ನು ನಾವೂ ಈಗ ಕೊಡಬಹುದು. ಆದರೆ ಇದನ್ನೆಲ್ಲಾ ತೀರ್ಮಾನ ಮಾಡಲು ಅವರಿಗೇ ಬೇಕಾದಷ್ಟು ಅವಕಾಶವಿದೆ. ರೆಫ್ಯೂಜೀಸ್ ಇತ್ಯಾದಿ ಜನಗಳಿಗೆಲ್ಲಾ ಅವರು ಬೇಕಾದಷ್ಟು ನೆರವು ನೀಡಿರುವಾಗ ದೇಶರಕ್ಷಣೆಗಾಗಿ ಪ್ರಾಣ ನೀಡುವುದಕ್ಕೆ ಹೋಗಿದ್ದಂಥ ಸೈನಿಕರಿಗೆ ನೆರವು ನೀಡಲು ಇನ್ನೂ ಹೆಚ್ಚಿನ ಅವಕಾಶವಿದೆ. ಅವರು ಕೊಡಬೇಕೆಂಬ ಇರಾದೆಯುಳ್ಳವರಾಗಿದ್ದಾರೆ. ಸಬ್‌ವೆನ್ಷನ್ ಅಥವಾ ಗ್ರಾಂಟ್ ರೂಪದಲ್ಲಾಗಲೀ, ಪೆನ್ಷನ್ ರೂಪದಲ್ಲಾಗಲೀ ಇಲ್ಲವೇ ಜಮೀನ್ ಇನಾಂತಿ ಇತ್ಯಾದಿಗಳ ಮೂಲಕವಾಗಲೀ ಸಹಾಯ ನೀಡಲು ಬೇಕಾದಷ್ಟು ಅವಕಾಶವಿದೆ. ಅವರು ಹಾಗೇನಾದರೂ ಮಾಡದಿದ್ದಲ್ಲಿ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ನಾವೂ ಕೂಡ ಯಾವ ಪ್ರಯತ್ನವನ್ನೂ ಮಾಡದೆ ಕೈಬಿಟ್ಟು ಸುಮ್ಮನೆ ಕುಳಿತರೆ ದೇಶದಲ್ಲಿ ಒಂದು ವಿಧವಾದ ಅಪಪ್ರಚಾರ ಪ್ರಾರಂಭವಾಗಲು ಅವಕಾಶವಾಗಬಹುದು. ಆದುದರಿಂದ it is not right that we should give up our loyal servants. ಈಗ ಸರ್ಕಾರದವರು ಈ ಭಗ್ಗೆ ಏನು ಮಾಡಿದ್ದಾರೆಂದು ಯಾರಾದರೂ ಕೇಳಿದರೆ ನೀವು ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಬಹಳವಾಗಿ ವಾದ ಮಾಡಿದ್ದಾರೆಂದು ಹೇಳಿಬಿಡುತ್ತೀರಿ. ಅಂದ ಮಾತ್ರಕ್ಕೇ ಅವರಿಗೆ ಇದರಿಂದ ಪರಿಹಾರ ಸಿಕ್ಕಿದಂತಾಯಿತೇನು ? 700-800 ರೂಪಾಯಿಗಳ ಸಂಬಳ ಪಡೆಯುತ್ತಿದ್ದಂಥವರಿಗೆಲ್ಲಾ ಕೇವಲ 100 ರೂಪಾಯಿಗಳ ಗ್ರಾಂಟ್ ಕೊಟ್ಟು ಹೊರಟು ಹೋಗಿ ಎಂದರೆ ಅದು ಹೇಗೆ ಸಾಧ್ಯವಾಗುತ್ತದೆ ? It is why I am impatient with the present Government. It looks as if the problem must settle of its own accord. You don't take real initiative. ಅವರಿಗೆ ಅಷ್ಟಾಗಿ ಈ ವಿಚಾರದಲ್ಲಿ ಉತ್ತೇಜನವಿಲ್ಲ. ಅದು ಸ್ವಾಭಾವಿಕವಾಗಿ ಇದೆ. ನಾನು ಇಷ್ಟೆಲ್ಲಾ ಹೇಳುತ್ತಿರುವುದು not to oblige those people. We owe a duty to them and they deserve it, because they served loyally our Government. ಇಂಥಾ ವಿಚಾರಗಳಲ್ಲಿ ಕೂಡ ನೀವು ಏಕೆ ಹೀಗೆಲ್ಲಾ ಸಾವಕಾಶಮಾಡುತ್ತಿದ್ದೀರೋ ನನಗಂತೂ ಗೊತ್ತಾಗುತ್ತಿಲ್ಲ. ಇದರಿಂದ ಮುಂದೆ ಸಮಾಜಕ್ಕೆ ಬಹಳ ಭಯಂಕರ ಪರಿಣಾಮಗಳು ಉಂಟಾಗಬಹುದು. ಆ ದೃಷ್ಟಿಯಿಂದಲಾದರೂ ತಾವು ಇಲ್ಲಿಯವರೆಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರೆಂಬ ಬಗ್ಗೆ ಒಂದು ಪ್ರಕಟಣೆಯನ್ನಾದರೂ ಹೊರಡಿಸಿ. For nearly a year they had the fear of being disbanded. Now they are thrown-out. Nearly 2,000 will be thrown out of employment. Is this the correct state of affairs ? ಪರಕೀಯ ರಾಷ್ಟ್ರಗಳಲ್ಲೆಲ್ಲಾ ಸೈನಿಕರಿಗೆ ಎಷ್ಟೆಷ್ಟು ರಿಯಾಯಿತಿಗಳನ್ನು ಕೊಟ್ಟಿದ್ದಾರೆ ನೋಡಿ. ಅದಕ್ಕೋಸ್ಕರವಾಗಿ ನೀವೂ ಕೂಡ ಇದಕ್ಕೆ ಕೂಡಲೇ ಹೆಚ್ಚಿನ ನಿಗಾ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು Grow more food ವಿಚಾರದಲ್ಲಿ ಒಂದು ಅಂಶ ತಿಳಿಸಬೇಕಾಗಿದೆ; ಅದನ್ನು ಮರೆತುಬಿಟ್ಟಿದ್ದೆ. ಅನೇಕ ಜನರಿಗೆ ಅನೇಕ ರೀತಿಯಲ್ಲಿ ಸಹಾಯ ನೀಡಿದ್ದೀರಿ. ಆದರೆ ಇಂದಿನ ಬೆಳಿಗ್ಗೆ ಪ್ರಶ್ನೋತ್ತರ ಕಾಲದಲ್ಲಿ ನಡೆದ ವಾದ ಸರಣಿಯನ್ನು ನೋಡಿದರೆ ಹಾಗೆ ನೀಡಲಾಗಿದ್ದ ಸಹಾಯ, ಸೌಕರ್ಯಗಳೆಲ್ಲಾ ಕ್ರಮವಾಗಿ ಉಪಯೋಗಿಸಲ್ಪಡುತ್ತಿಲ್ಲವೆಂಬ ಕೂಗು ಎದ್ದಿದೆ. ಆದ್ದರಿಂದ ತಾವು ಆ ಕಡೆಗೆ ಕಣ್ಣಿಡಬೇಕಾದ್ದು ಅತ್ಯಗತ್ಯ. ಆ ಬಗ್ಗೆ ತಾವು ಒಂದು ಸಮಿತಿಯನ್ನೇ ನೇಮಕ ಮಾಡಬಹುದು. ಆ ರೀತಿಯ ಕಾರ್ಯಕ್ರಮವನ್ನು ತಾವು ಕೈಗೊಳ್ಳದಿದ್ದರೆ has it been well utilised or has it been ill-utilised ? Has it given any practical results ? ಷುರುವಿನಲ್ಲಿ ಆಗಲೇ ಗಲಾಟೆ ಎದ್ದಿತು. ಹಳೇ ಬಾವಿಗಳನ್ನು ತೋರಿಸಿ ಹೊಸ ಬಾವಿಗಳೆಂದು ಹೇಳಿ ದುಡ್ಡನ್ನು ಹೊಡೆದುಕೊಂಡು ಹೋಗಿರುವಂಥ ನಿದರ್ಶನಗಳು ಇವೆ. ಇದರಂತೆಯೇ ಆ ಡೈರಿ ಫಾರಂಗಳ ವಿಚಾರವೂ ಇದೆ. ಆದುದರಿಂದ ಈಗ ತಾವು just watch the progress of it. Then you will come to know it.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಆಬ್ಕಾರಿ ಸಚಿವರು).—It is a sweeping statement. ಈಗ ಅಂಥಾದ್ದೇನೂ ಇಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆದುದರಿಂದಲೇ ನಾನು ಈ ಬಗ್ಗೆ ಒಂದು ಸಮಿತಿ ನೇಮಕ ಮಾಡಿ ಎಂದು ಹೇಳಿದ್ದು.

ಶ್ರೀ ಎಚ್. ಕೆ. ವೀರಣ್ಣಗೌಡರು.—ಸಮಿತಿಗಳನ್ನು ಮಾಡೋಣವೆಂದರೆ ಅದಕ್ಕೂ ಬೇಡವೆಂದು ವಾದಿಸುತ್ತೀರಿ. ಹೋಗಲೀ, ಬಿಟ್ಟುಬಿಡೋಣವೆಂದರೆ ಬೇಡಿ ಸಮಿತಿಗಳನ್ನು ಏರ್ಪಾಡುಮಾಡಿ ಎಂದು ಹೇಳುತ್ತೀರಿ. ಈ ವಾದಕ್ಕೆ ಏನೆಂದುಹೇಳೋಣ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ತಾವು ಬುದ್ಧಿವಂತರೆಂದು ತಿಳಿದುಕೊಂಡಿದ್ದೆ. Standing Committees ಬೇಡವೆಂದು ಹೇಳಿದ್ದೇನೆ ವಿನಾ ಇಂಥಾದ್ದಕ್ಕೆಲ್ಲಾ ಸಮಿತಿ ಮಾಡಕೂಡದೆಂದು ನಾನು ಹೇಳಲಿಲ್ಲ.

ಇನ್ನು ಡೀಲಿಮಿಟೇಷನ್ ಕಮಿಟಿಯ ವಿಚಾರವಾಗಿ ಒಂದು ಮಾತು. ಈ ಅಸೆಂಬ್ಲಿಯಲ್ಲೇ ಒಂದು ಸಮಿತಿಯು ರಚನೆಯಾಯಿತು. ಕೆಲವು ಸದಸ್ಯರು ಸೇರಿ ವಿಚಾರ ಮಾಡಿ ಒಂದು ಸಲಹೆ ಕಳುಹಿಸಿದೆವು. ಇಂಡಿಯಾದ ಪಾರ್ಲಿಮೆಂಟಿನವರು ಇಲ್ಲಿಗೆ ಬಂದು ಆ ವಿಚಾರದಲ್ಲಿ ವಿಷಯ ಸಂಗ್ರಹಣೆ ಮಾಡಿದರು. ಆದರೆ ಅವರು ಏನು ಮಾಡಿದರೆಂಬುದು ಯಾರಿಗೂ ತಿಳಿಯಲಿಲ್ಲ. ಸರ್ಕಾರಕ್ಕೆ ಆ ವಿಚಾರದಲ್ಲಿ ವರದಿ ಬಂದಿದೆಯೋ ಇಲ್ಲವೋ ಅದೂ ಗೊತ್ತಿಲ್ಲ. ಇದರ ಅರ್ಥವೇನು ? ಅದು ಜನರಿಗೆ ತಿಳಿಯಬೇಕು.

ಆ ಮೇಲೆ ನಮ್ಮ ಪ್ರತಿನಿಧಿಗಳು ಇಂಡಿಯಾ ಸರ್ಕಾರದ ಪಾರ್ಲಿಮೆಂಟಿನಲ್ಲಿದ್ದಾರೆ. ಅವರು ನಮ್ಮ ಸೈನ್ಯದ ವಿಚಾರವಾಗಿ ಒದಗಿರುವ ತೊಂದರೆ ಬಗ್ಗೆ ಏಕೆ ಅಲ್ಲಿ ಪ್ರಶ್ನೆ ಮಾಡಲಿಲ್ಲವೆಂದು ನಾವು ಅವರನ್ನು ಕೇಳಬೇಕು. ಆ ರೀತಿಯಾಗಿ ತಾವು ಪ್ರಶ್ನೆ ಮಾಡಿ ನಮ್ಮ ಪ್ರತಿನಿಧಿಗಳಿಂದ ತಕ್ಕಷ್ಟು ಸಹಾಯವಾಗುವಂತೆ ಒತ್ತಾಯಪಡಿಸಬೇಕು. ಇದು ಮಾನ್ಯ ಸದಸ್ಯರ ಮನಸ್ಸಿಗೆ ಬರಲೆಂದು ಒತ್ತಿ ಹೇಳುತ್ತೇನೆ. ನಮ್ಮವರು ಪಾರ್ಲಿಮೆಂಟಿನಲ್ಲಿ ಏನು ಮಾಡುತ್ತಿದ್ದಾರೆಂಬುದು ನಮಗೆ ಗೊತ್ತಿಲ್ಲ. ಬಹುಶಃ ಅವರು ಒಳ್ಳೆಯ ಕೆಲಸವನ್ನೇ ಮಾಡುತ್ತಿರಬಹುದು. ನಮ್ಮ ಸಂಸ್ಥಾನಕ್ಕೆ ಸಂಬಂಧ

ಷ್ಟು ವಿಷಯಗಳಲ್ಲಿ ಖಾಸಗಿ ಪ್ರತಿನಿಧಿಗಳು ಹೋಗಿ ನಮ್ಮ ಸರ್ಕಾರದವರ ಜೊತೆಸೇರಿ ಒತ್ತಾಯಮಾಡಿದರೆ ಒಳ್ಳೆಯದು. ಇದನ್ನು ತಾವು ಚೆನ್ನಾಗಿ ಯೋಚನೆ ಮಾಡಬೇಕು. ನಮ್ಮ ಸರ್ಕಾರದ ಆಡಳಿತದಲ್ಲಿ ದಕ್ಷತೆ ಯಿರಬೇಕು. ಮತ್ತು ಸರ್ಕಾರಿ ಆರ್ಡರುಗಳು ಜಾಗ್ರತೆ ಆಗಬೇಕು. ದಕ್ಷತೆಯಿಲ್ಲದ ಆಫೀಸರುಗಳಲ್ಲಿ ಕೆಲವರನ್ನು ಸಸ್‌ಪೆನ್‌ಷನ್‌ನಲ್ಲಿಟ್ಟಿದ್ದೀರಿ. ಅದು ಯಾವ ದೇವರಿಗೆ ಪ್ರೀತಿ? ಜಾಗ್ರತೆಯಾಗಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಮಾಡಬೇಕು, ನಿಧಾನ ಮಾಡಬಾರದು.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ವಿಚಾರಣೆ ಮಾಡಬೇಡವೇ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ವಿಚಾರಣೆ ಆಗಿದೆ. ಆದಾದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲು ಎಷ್ಟು ದಿವಸವಾಗಬೇಕು! ಯಾವ ಸರ್ಕಾರವೂ ಈ ರೀತಿಯಾಗಿ ನಿಧಾನ ಮಾಡುವುದಿಲ್ಲ.

What is requiied is that efficient and mmediate orders must be passed

The Hon'ble Sri K. CHENGALARAYA REDDY.—According to the Service Regulations and also to the spirit of the Indian Constitution, before any final action is taken, departmental enquiry or judicial enquiry is necessary. The Hon'ble Member knows it.

Sri H. B. GUNDAPPA GOWDA.—I know it. That is the very reason I ask, whether it requires so much time? Who are those officers who are conducting these enquiries? If any officer delays, he must be condemned as not being fit for the job. There is a wav of doing things. There must be immediate disposal. Otherwise, it will give room to all sorts of undesirable movements and other complications.

ನಮ್ಮ ದೇಶದ ಈಗಿನ ಸರ್ಕಾರದಲ್ಲಿ ಜಡತ್ವವಿದೆಯೆಂಬ ಒಂದು ಭಾವನೆ ಜನರಲ್ಲಿ ಮೂಡಿದೆ. ಅದನ್ನು ಹೇಗೆ ತಪ್ಪಿಸಿಕೊಳ್ಳಬೇಕೆಂಬುದು ನಿಮಗೇ ಗೊತ್ತಾಗಬೇಕು. ನೀವು ಮಾಡಿರುವ ವಾಗ್ದಾನಗಳು ಎತ್ತ ಕಡೆ ಹೋಗುತ್ತಿವೆಯೋ ಗೊತ್ತಿಲ್ಲ. ಸರ್ಕಾರದವರು ಏನಾದರೂ ಹೇಳಿದರೆ ಅದರಂತೆ ನಡೆದುಕೊಳ್ಳಬೇಕು. ನಿಮಗೆ ಹೆದರಿಕೆಯಿಲ್ಲವೆಂದು ಕಾಣುತ್ತಿದೆ. ನಿಮಗೆ ನಿಮ್ಮ ಪಕ್ಷದ ಬಹುಮತವಿದೆಯೆಂಬ ಅಭಿಪ್ರಾಯವಿರಬಹುದು. ಆದರೆ ಜನರಲ್ಲಿ ಮೂಡಿರುವ ಅಸಮಾಧಾನ ಹೋಗಲು ನೀವು ಜಾಗ್ರತೆ ನಿಮ್ಮ ಮಾತಿನಂತೆ ಕೆಲಸಗಳನ್ನು ಮಾಡಬೇಕು.

ಇನ್ನು ಜನಾಬ್ ಇಮಾಂರವರು ಹೇಳಿದಂತೆ ಪ್ರಜಾಪ್ರಭುತ್ವದ ವಿಚಾರ ನೋಡಿದರೆ ಮೈಸೂರು ರಾಜ್ಯದಲ್ಲಿ ಹಣಕಾಸಿನ ಅಭಾವ ತಲೆದೋರಿರುವ ಹಾಗೆ ಕಾಣುತ್ತಿದೆ. ಒಟ್ಟಿನಲ್ಲಿ ದಕ್ಷತೆಯಿರಬೇಕು. ಈಗ ಅವಿಶ್ವಾಸದ ಸೂಚನೆಗಳು ಮಂತ್ರಿಮಂಡಲದ ಮೇಲೆ ಬರುತ್ತಿರುವುದರಿಂದ ಜನರಲ್ಲಿ ಒಂದು ವಿಧವಾದ ಭಾವನೆ ಮೂಡಿದೆ. ಸರ್ಕಾರದವರು ಸುಧಾರಿಸಿಕೊಂಡರೆ ಸಾಕಾಗಿದೆ, ಅವರು ನಮ್ಮನ್ನು ಸುಧಾರಿಸುವುದೆಲ್ಲಿಂದ ಬಂತು ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಹೀಗಾದರೆ ಆಡಳಿತ ನಡೆಸಲು ಕಾಲಾವಕಾಶವೆಲ್ಲಿಂದಬರಬೇಕು? ಹೀಗೆ ಮಾನ್ಯ ಮಂತ್ರಿಗಳ ಸ್ಥಾನವು ಭದ್ರವಿಲ್ಲದಿರುವಾಗ ಅವರು ಮುಂದೆ ಬರುವವರು ನೋಡಿಕೊಳ್ಳುತ್ತಾರೆಂದು ತಮ್ಮ ಕೆಲಸಗಳನ್ನು ನಿಲ್ಲಿಸಬಹುದು. ಈ ದಿನ ಒಂದು ಗಿಡ ಹಾಕಿ ಬೆಳಗಾದರೆ ಅದನ್ನು ಕೆರೆಯುತ್ತಿದ್ದರೆ ಅದರಿಂದ ಪ್ರಯೋಜನವೇನು? ಹಾಗೆ ಮಾಡುತ್ತಿದ್ದರೆ ಗಿಡವು ಬೆಳೆದು ಹಣ್ಣು ಬಿಡುವುದು ಹೇಗೆ! ಎರಡು ತಿಂಗಳಿಂದ ಇದ್ದ ಸಂದಿಗ್ಧ ಪರಿಸ್ಥಿತಿ ಈಗ ಫೈಸಲಾಗಿದೆಯೆಂದು ಪತ್ರಿಕೆಗಳಲ್ಲಿ ಬಂದಿದೆ. ಅದರಿಂದ ಪ್ರಯೋಜನವೇನು? It looks as if we have now at this stage choose fresh constitutional methods wherein when during a year there will be confidence and no confidence motions or the constitution where there is more stability in the Government.

ಅಧ್ಯಕ್ಷರು.—ಅದಕ್ಕೆ ಸರ್ಕಾರದವರು ಏನು ಮಾಡಬೇಕು?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈ ದಿನ ಕಾಂಗ್ರೆಸ್ಸಿನ ಪಾರ್ಟಿ ಸರ್ಕಾರ ಇರುತ್ತೆ. ನಾನು ಮಾನ್ಯ ಮಂತ್ರಿಗಳ ಸ್ವಂತ ಹಿತದೃಷ್ಟಿಯಿಂದಲೂ ಮತ್ತು ಸರ್ಕಾರದ ಹಿತದೃಷ್ಟಿಯಿಂದಲೂ ದೇಶದ ಹಿತದೃಷ್ಟಿಯಿಂದಲೂ ಇದನ್ನು ಹೇಳುತ್ತಿದ್ದೇನೆ. ಸರ್ಕಾರದವರು ಕೆಲಸ ಮಾಡುತ್ತಿದ್ದೇವೆಂದು ಹೇಳಬಹುದು. ಆದರೆ ನಮಗೆ ಏನೂ ಕಾಣುತ್ತಿಲ್ಲ. Unless there is stability and a sense of security you will be unfit for democracy. ಬೆಳಗಾದರೆ ಗಲಾಟೆಯಿರುವುದರಿಂದ ಎಲ್ಲರೂ ನೋಡುವ ಹಾಗೆ ಈಗ ದೇಶಕ್ಕೆ ಒಂದು ಕಳಂಕ ಬಂದಿದೆ.

ಅಧ್ಯಕ್ಷರು.—ಇನ್ನೂ ಆ ಸ್ಥಿತಿಗೆ ಬಂದಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಬೇರೆತರದಲ್ಲಿ ಇರುವುದು ಪ್ರಬಲಿಸುವ ಹೊತ್ತಿಗೆ ಸರಿಯಾದ ಮಾರ್ಗದಲ್ಲಿ ಪ್ರವರ್ತಿಸುವುದು ಒಳ್ಳೆಯದೆಂದು ನಾನು ಹೇಳುತ್ತಿದ್ದೇನೆ. I have no personal interest in the Congress party politics. I am only talking as what an ordinary citizen of Mysore would do. ಜನರಲ್ಲಿ ಕಾಂಗ್ರೆಸ್ ಎಂದರೆ ಒಂದು ವಿಧವಾದ ಅಭಿಪ್ರಾಯ ಬಂದಿದೆ. Congress thinks country is the congress party and the congress party is the Government. ಈಗ ಕಾಂಗ್ರೆಸ್ ಪಕ್ಷ ಬಲವಾಗಿಲ್ಲವೆಂದು ಹೇಳಬಹುದು. There is a very big majority outside. Are you utilising their services? No. In these days every average Indian would naturally wish for the glory of India. ಮುಂದೆ ಬೇರೆ ಪಕ್ಷವು ಅಧಿಕಾರಕ್ಕೆ ಬರಬಹುದು. ಪ್ರಾರಂಭದಲ್ಲಿ ಅದು ಕೂಡದೆ ಇಂಡಿಯಾ ಸರ್ಕಾರದವರು ಇದನ್ನು ನೋಡಿ ಖುಷಾರಾಗಿದ್ದಾರೆ. ನಮ್ಮ ಸರ್ಕಾರ ಆ ವಿಚಾರದಲ್ಲಿ ಭಾರತ ಸರ್ಕಾರವನ್ನು ಅನುಸರಿಸಿಲ್ಲ. ಈಗ ಇಂಡಿಯಾ ದೇಶಕ್ಕೆ ಒಳ್ಳೆಯ ಹೆಸರು. ಬರಬೇಕು, ಸರ್ಕಾರ ಚೆನ್ನಾಗಿ ನಡೆಯಬೇಕು ಎಂಬ ಒಂದು ಭಾವನೆ ಇರಬೇಕು. ಹೀಗಿರುವಾಗ ಕಾಂಗ್ರೆಸ್ಸಿನಿಂದ ದೇಶವೇ ಅಥವಾ ದೇಶದಿಂದ ಕಾಂಗ್ರೆಸ್ಸೇ ಎಂಬುದನ್ನು ಸ್ವಲ್ಪ ಯೋಚನೆಮಾಡಬೇಕು. ಇಷ್ಟು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

Sri M. GOVINDA REDDY (Chitaldrug District—General).—The Congress indentifies itself with the country.

Sri H. B. GUNDAPPA GOWDA.—It can, but facts are not like that. That is my way of looking at things. I do not make any difference so far as the interest of the country is concerned. Any good suggestion is welcome. All of us want good administration. That is sufficient for us. Efficient administration, prompt justice, good and timely relief measures are the things that we require.

ಶ್ರೀ ಎಚ್.ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ). — ಸ್ವಾಮಿ, ಈ ಸಭೆಯ ಮುಂದಿರತಕ್ಕಂಥ ನಿರ್ಣಯವನ್ನು ಅಂದರೆ ಮಾನ್ಯ ಮಿತ್ರರಾದ ಶ್ರೀ ಗೋವಿಂದ ರೆಡ್ಡಿಯವರು ಶ್ರೀಮನ್ಮಹಾರಾಜರವರು ಈ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನೆಯನ್ನರ್ಪಿಸುವ ನಿರ್ಣಯವನ್ನು ಸಮರ್ಥನೆ ಮಾಡುತ್ತಾ ಮತ್ತು ಆ ಸಂಬಂಧವಾಗಿ ಮಾನ್ಯ ಮಿತ್ರರಾದ ಜನಾಬ್ ಇಮಾಂರವರು ಮಂಡಿಸಿರುವ ಒಂದು ತಿದ್ದುಪಡಿಯನ್ನು ವಿರೋಧಿಸುತ್ತಾ ಕೇವಲ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಜನಾಬ್ ಇಮಾಂ ಸಾಹೇಬರು ಸೂಚಿಸಿರುವ ತಿದ್ದುಪಡಿಯ ಪ್ರತಿಗಳು ನಮ್ಮ ಕೈಸೇರಿದಾಗ ಅದನ್ನು ಓದಿದ ಕೂಡಲೇ ಸರ್ಕಾರ ಮಾಡದೇ ಹೋಗಿರುವ ಕೆಲಸಗಳ ಆ ಪಟ್ಟಿಯನ್ನು ನೋಡಿ ಇನ್ನು ಈ ಸರ್ಕಾರ ಉಳಿಯುತ್ತದೋ ಇಲ್ಲವೋ, ಯಾವ ಕೆಲಸವನ್ನೂ ಮಾಡಿಲ್ಲವಲ್ಲ ಎಂಬ ಭಾವನೆಯುಂಟಾಯಿತು. ಆರೀತಿಯಲ್ಲಿ ಅವರು ಆ ತಿದ್ದುಪಡಿಯಲ್ಲಿ ಬರೆದಿದ್ದಾರೆ. ಆದರೆ ಈಗ ಅವರ ಭಾಷಣವನ್ನು ಕೇಳಿದ ಮೇಲೆ ಆ ಭಾವನೆ ಸಂಪೂರ್ಣವಾಗಿ ಬದಲಾವಣೆಯಾಯಿತು. ಅವರೇ ಹೇಳಿದ ಹಾಗೆ ಹಿಂದೆ ಅವರು ಮಂತ್ರಿಗಳಾಗಿದ್ದಾಗ ಅನೇಕ ಮಿತ್ರರು ಅವರ ವಿಷಯದಲ್ಲಿಯೂ ಹೀಗೆ ಟೀಕೆ ಮಾಡಿದ್ದಾರೆಂದು ಅವರು ಒಪ್ಪಿಕೊಂಡಿದ್ದಾರೆ. ಹಾಗೆಯೇ ಇವರೂ ಈಗ ಆಕ್ಷೇಪಣೆ ಮಾಡಬೇಕೆಂಬ ದೃಷ್ಟಿಯಿಂದ ಈ ತಿದ್ದುಪಡಿಯಲ್ಲಿ ಕೆಲವು ಪದಗಳನ್ನು ಸೇರಿಸಿದ್ದಾರೆಯೇ ಹೊರತು ಅದರಲ್ಲಿ ತಿರುಳಾಗಲೀ ಯಾವ ಒಂದು ತತ್ವವಾಗಲೀ ಅಡಗಿಲ್ಲವೆಂಬುದು ವ್ಯಕ್ತವಾಗುತ್ತದೆ.

ಇನ್ನು ನೀರಾವರಿ ಕೈಗಾರಿಕ, ವ್ಯವಸಾಯ, ವಿದ್ಯಾಭ್ಯಾಸ ಮುಂತಾದ ವಿಚಾರಗಳಲ್ಲಿ ಅವರ ಟೀಕೆಗೆ ಸರಿಯಾದ ಉತ್ತರ ಹೇಳಿ ಶ್ರೀ ಚನ್ನಬಸಪ್ಪನವರು ವಿಶದೀಕರಿಸಿದ್ದಾರೆ. ಹಿಂದೆ ಮಾಡುತ್ತಿದ್ದುದಕ್ಕಿಂತ ಕೋಟ್ಯಾಂತರ ರೂಪಾಯಿ ಹೆಚ್ಚು ಖರ್ಚುಮಾಡಿ, ಈಗಿನ ಸರ್ಕಾರದವರು ಇವುಗಳ ಅಭಿವೃದ್ಧಿ ಕಾರ್ಯ ಮಾಡಿದ್ದಾರೆಂದು ಶ್ರೀ ಚನ್ನಬಸಪ್ಪನವರು ಹೇಳಿದ್ದಾರೆ. ಸಾಮಾನ್ಯವಾಗಿ ಎದುರು ಪಕ್ಷದ ನಾಯಕರಾಗಿದ್ದುಕೊಂಡು ಸರ್ಕಾರವನ್ನು ಟೀಕೆ ಮಾಡುವುದು ತಮ್ಮ ಕರ್ತವ್ಯವೆಂದು ಜನಾಬ್ ಇಮಾಂರವರು ತಿಳಿದು ಈ ತಿದ್ದುಪಡಿಯನ್ನು ಸೂಚಿಸಿದ್ದಾರೆಯೇ, ಹೊರತು ಅವರ ಮನಸ್ಸಿನಲ್ಲಿ ಇಷ್ಟು ತೀಕ್ಷ್ಣವಾದ ವಿರೋಧವಿಲ್ಲವೆಂದು ನಾವು ಭಾವಿಸಬಹುದಾಗಿದೆ. ಒಂದು ವಿಷಯವಿನಾ ಅವರು ಟೀಕೆ ಮಾಡಿರುವ ವಿಷಯಗಳನ್ನು ನೋಡಿದರೆ, ಸಾಮಾನ್ಯವಾಗಿ ಯಾವ ಸರ್ಕಾರವೇ ಇರಲಿ, ಅದರ ಎದುರು ಪಕ್ಷದ ಸದಸ್ಯರು ಅಥವಾ ಸರ್ಕಾರಕ್ಕೆ ಬೆಂಬಲವಾಗಿರುವ ಶಾಸನ ಸಭೆಯ ಸದಸ್ಯರು ಮಾಡತಕ್ಕ ಟೀಕೆಗಳೇ ಹೊರತು ಹೆಚ್ಚೇನೂ ಇಲ್ಲ. ಇದರಿಂದ ಸರ್ಕಾರವನ್ನು ನಡೆಸಲು ಈ ಮಂತ್ರಿಮಂಡಲ ಲಾಯಕ್ಕಾಗಿಲ್ಲವೆಂಬುದಕ್ಕೆ ಕಾರಣವೇ ಇಲ್ಲವೆಂಬುದು ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಶಾಸನ ಸಭಾ ಸದಸ್ಯರು ಮಾಡಬೇಕಾದ ಟೀಕೆಗಳೂ ಸಲಹೆಗಳೂ ಸ್ವಾಗತಾರ್ಹವೆಂದು ಶ್ರೀ ಚನ್ನಬಸಪ್ಪನವರು ಹೇಳಿದ್ದಾರೆ. ಶ್ರೀಗಳಾದ ಹುಚ್ಚೇಗೌಡರು, ಸಿದ್ದಪ್ಪನವರು ಮತ್ತು ಗುಂಡಪ್ಪಗೌಡರು ಮಾಡಿರುವುದು ಸಾಮಾನ್ಯವಾಗಿ ಎಲ್ಲಾ ಕಾಲದಲ್ಲಿಯೂ ಮಾಡತಕ್ಕ ಟೀಕೆಗಳೇ ಹೊರತು ಸರ್ಕಾರವನ್ನು ಕಟುವಾಗಿ ಟೀಕಿಸಿ, ಸರ್ಕಾರ ಆಡಳಿತ ನಡೆಸಲು ಅಸಮರ್ಥವಾಗಿದೆಯೆಂದು ಹೇಳುವಷ್ಟು ಕಠಿಣವಾದ ಟೀಕೆಗಳಲ್ಲ.

ಬಹುವಾಗಿ ಟೀಕೆಗೊಳಗಾಗಿರುವುದೆಂದರೆ ಒಂದು ವಿಷಯ. ಅದು ನಮ್ಮ ಸೈನ್ಯದ ಇಲಾಖೆ ಕೇಂದ್ರ ಸರ್ಕಾರಕ್ಕೆ ಸೇರಿದ ಮೇಲೆ ಎರಡು ಸಾವಿರ ಮಂದಿಯನ್ನು ಕೆಲಸದಿಂದ ಅವರು ನಿವೃತ್ತಿ ಮಾಡಿರುವ ವಿಷಯ. ನಿಜವಾಗಿಯೂ ನಾವು ಈ ವಿಚಾರದಲ್ಲಿ ಕಳವಳಗೊಳ್ಳಬೇಕಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಏನೇನು ಪ್ರಯತ್ನಗಳನ್ನು ಮಾಡಿದ್ದಾರೆಂಬುದನ್ನು ಸರ್ಕಾರದವರು ವ್ಯಕ್ತಪಡಿಸಿದ್ದಾರೆ. ನನಗೆ ತಿಳಿದಮಟ್ಟಿಗೆ ನಮ್ಮ ಸರ್ಕಾರದವರು ಈ ವಿಚಾರದಲ್ಲಿ ಕೇಂದ್ರ ಸರ್ಕಾರದೊಡನೆ ಬಹಳ ಪತ್ರವ್ಯವಹಾರ ನಡೆಸಿದ್ದಾರೆ. ಕೇಂದ್ರ ಸರ್ಕಾರದವರು ಭರವಸೆ ಕೊಟ್ಟಿದ್ದಾರೆ. ಈ ವಿಷಯವನ್ನು ಹೇಳಿದರೆ ನಾನು ಗುಟ್ಟಾದ ವಿಚಾರವನ್ನು ಹೊರಪಡಿಸುತ್ತಿದ್ದೇನೆಂದು ಅವರು ತಿಳಿದುಕೊಳ್ಳುವುದಿಲ್ಲವೆಂದು ನಂಬಿದ್ದೇನೆ. ಕೆಲವರನ್ನು ನಿವೃತ್ತಿ ಮಾಡಿರುವುದು ನಿಜ. ಆದರೆ ಅವರ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಪರಿಶೀಲನೆ ನಡೆಸಿ ಯಾರಿಗೂ ಅನ್ಯಾಯವಾಗದೇಯಿರುವ ರೀತಿಯಲ್ಲಿ ನಡೆದುಕೊಳ್ಳುವುದಾಗಿ ಕೇಂದ್ರ ಸರ್ಕಾರದಿಂದ ಆಶ್ವಾಸನೆ ದೊರತಿದೆಯೆಂದು ನನಗೆ ತಿಳಿದುಬಂದಿದೆ. ಈ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳೂ ವಿವರಗಳನ್ನು ತಿಳಿಸುತ್ತಾರೆಂದು ನಂಬಿದ್ದೇನೆ.

ಎದುರು ಪಕ್ಷದ ಸ್ನೇಹಿತರು ಟೀಕೆಮಾಡುವಾಗ ಎತ್ತಿದ ಇತರ ಎಲ್ಲ ವಿಚಾರಗಳಿಗೂ ಉತ್ತರ ಕೊಡಬೇಕಾದ ಆವಶ್ಯಕವಿಲ್ಲವೆಂದು ತೋರುತ್ತದೆ. ಮುಖ್ಯ ವಿಷಯಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ಕೆಲವು ಮಾನ್ಯ ಸದಸ್ಯರು ಹತೋಟಿಗಳ ವಿಚಾರದಲ್ಲಿ ಟೀಕೆ ಮಾಡಿದರು. ಈ ವಿಚಾರ ನಮ್ಮ ಸರ್ಕಾರಕ್ಕೆ ಮಾತ್ರ ಸಂಬಂಧಪಟ್ಟುದಲ್ಲ. ಹತೋಟಿಗಳು ಎಲ್ಲ ಕಡೆಯೂ ಜಾರಿಯಲ್ಲಿವೆ. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ. ಕೇಂದ್ರ ಶಾಸನ ಸಭೆಯಲ್ಲಿಯೂ ಹತೋಟಿಗಳ ವಿಚಾರದಲ್ಲಿ ಎರಡು ಅಭಿಪ್ರಾಯಗಳಿವೆ. ಈ ಎರಡು ಅಭಿಪ್ರಾಯಗಳಲ್ಲಿಯೂ ಮನ್ನಣೆಕೊಡಬಹುದಾದ ಅಂಶಗಳಿವೆ. ನಾವು ಕೇಂದ್ರ ಸರ್ಕಾರದ ಒಂದು ಭಾಗವಾಗಿರುವುದರಿಂದ ಅಖಿಲಭಾರತಕ್ಕೆ ಸಂಬಂಧಪಟ್ಟ ಈ ವಿಚಾರಗಳಲ್ಲಿ ಎಷ್ಟು ಮಟ್ಟಿಗೆ ಅಗತ್ಯವೋ, ಎಷ್ಟುದೂರ ಅಗತ್ಯವೋ ಅಷ್ಟು ಮಾತ್ರ ನಾವು ಹತೋಟಿ ಅಜ್ಞೆಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಶಾಶ್ವತವಾಗಿ ಈ ಹತೋಟಿಗಳಿರಲೆಂದು ಯಾರಿಗೂ ಇಷ್ಟವಿಲ್ಲ: ಸರ್ಕಾರದವರದೂ ಇದೇ ಅಭಿಪ್ರಾಯವೆಂದು ನಂಬಿದ್ದೇನೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ತಾವೇ ಜೋಳಿಗೆ ಹಿಡಿದುಕೊಂಡು ಬಂದು ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಪ್ರಜೆಗಳಿಗೆ ಹಂಚುತ್ತೇವೆಂದು

ಹೇಳುತ್ತಿದ್ದರು. ಈಗ ಏನೂ ಮಾಡುತ್ತಿಲ್ಲವೆಂದು ಶ್ರೀ ಹುಚ್ಚೇಗೌಡರು ಟೀಕಿಸಿದರು. ಈಗ ಸರ್ಕಾರದವರು ಶೇಖರಣೆ ಮಾಡುವುದು ಕೂಡ ಜೋಳಿಗೆ ಹಿಡಿದುಕೊಂಡು ಹೋಗುವಂತೆಯೇ ಅಲ್ಲವೆ? ಹಣಕೊಟ್ಟು ಧಾನ್ಯವನ್ನು ತಂದು ಶೇಖರಣೆಮಾಡಿ ಯಾರು ಬೆಳೆಯುವುದಿಲ್ಲವೋ ಅಂಥವರಿಗೆ ಆಹಾರ ಒದಗಿಸುತ್ತಿದ್ದಾರೆ. ಎಂದು ಟೀಕಿಸಿದರು. ಕಾಂಗ್ರೆಸ್ ಮಂತ್ರಿಗಳು ಹಿಂದೇ ಜನರಿಗೆ ಯಾವ ಆಶೋತ್ತರಗಳನ್ನು ನೀಡಿದ್ದರೊ ಅವುಗಳೆಲ್ಲವನ್ನೂ ಕಾರ್ಯತಃ ಅಕ್ಷರಶಃ ನಡೆಸುತ್ತಿದ್ದಾರೆ. ಇದು ಶ್ರೀ ಹುಚ್ಚೇಗೌಡರ ಮನಸ್ಸಿಗೂ ಗೊತ್ತಾಗಿದೆ. ಈಗ ಟೀಕೆ ಮಾಡಿದಂತಹ ಶ್ರೀ ಹುಚ್ಚೇಗೌಡರು ಸಭೆಯಲ್ಲಿಲ್ಲ. ಟೀಕೆಮಾಡಿ ಹೊರಟು ಹೋಗುವುದು ಸದಸ್ಯರಿಗೆ ಉಚಿತವಲ್ಲವೆಂದು ನಾನು ಹೇಳಬೇಕಾಗಿದೆ.

ಇನ್ನು ನಮ್ಮ ಸಿವಿಲ್ ಸರ್ವಿಸ್ ಕೇಂದ್ರ ಅಡ್ಮಿನಿಸ್ಟ್ರೇಟಿವ್ ಸರ್ವಿಸ್‌ನೊಡನೆ ವಿಲೀನೀಕರಣವಾಗುವುದರಿಂದ ಬಹಳ ಕೆಡಕಾಗಿದೆಯೆಂದು ಬಂದಿರುವ ಆಕ್ಷೇಪಣೆ ವಿಚಾರ. ಅವರು ಹೇಳಿದಂತೆ ಕೆಡಕೇನೂ ಆಗುವಂತೆ ಕಾಣುವುದಿಲ್ಲ. ಈ ವಿಚಾರದಲ್ಲಿ ನಿನ್ನೆ ದಿನ ಮುಖ್ಯಮಂತ್ರಿಗಳು ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ನಮ್ಮ ಸರ್ಕಾರದವರು ಕೂಡ ಕೇಂದ್ರ ಸರ್ಕಾರದೊಡನೆ ಎಷ್ಟು ಮಟ್ಟಿಗೆ ಸಾಧ್ಯವೋ ಅಷ್ಟು ಮಟ್ಟಿಗೂ ಪ್ರಯತ್ನಪಟ್ಟು ಯಾರಿಗೂ ತೊಂದರೆ ಆಗದಂತೆ ಮಾಡಲು ಸಾಹಸ ಮಾಡಿದ್ದಾರೆ. ಇನ್ನೂ ಇದು ಪೂರ್ತಿಯಾಗಿ ಇತ್ಯರ್ಥವಾಗಿಲ್ಲ. ನಮ್ಮ ಸರ್ಕಾರದವರ ಸಲಹೆಯನ್ನೂ ಅಭಿಪ್ರಾಯವನ್ನೂ ತೆಗೆದುಕೊಳ್ಳದೆ ಕೇಂದ್ರ ಸರ್ಕಾರದವರು ಈ ವಿಷಯದಲ್ಲಿ ಯಾವ ತೀರ್ಮಾನವನ್ನೂ ಮಾಡುವುಲ್ಲ. ಮೊನ್ನೆ ಸಂಸ್ಥಾನಶಾಖೆಯ ಕಾರ್ಯದರ್ಶಿಗಳು ಇಲ್ಲಿಗೆ ಬಂದಿದ್ದಾಗ ನಮ್ಮ ಸಿವಿಲ್‌ಸರ್ವಿಸ್ ಅಧಿಕಾರಿಗಳಿಗೆ ಭರವಸೆಕೊಟ್ಟ ಮೇಲೆ ಇವರಲ್ಲಿ ಉತ್ಸಾಹ ಬಂದಿದೆಯೆಂದು ತಿಳಿದುಬಂದಿದೆ ಆದಕಾರಣ ನಮ್ಮ ಅಧಿಕಾರಿಗಳಿಗೆ ಅನಾನುಕೂಲ ಅಥವಾ ಅನ್ಯಾಯವೇನೂ ಆಗುವುದಿಲ್ಲವೆಂದು ನಾವು ನಂಬಬಹುದಾಗಿದೆ.

ಶ್ರೀಮನ್ಮಹಾರಾಜರವರ ಭಾಷಣದಲ್ಲಿ ನಮೂದಾಗಿರುವ ಮತ್ತು ಅದಕ್ಕೆ ಸಂಬಂಧಪಟ್ಟಿರುವ ಇನ್ನೂ ಅನೇಕ ವಿಚಾರಗಳನ್ನು ಶ್ರೀ ಹುಚ್ಚೇಗೌಡರು ಪ್ರಸ್ತಾಪಮಾಡಿದ್ದಾರೆ. ಪಾನನಿರೋಧದ ವಿಚಾರದಲ್ಲಿ ಟೀಕೆ ಮಾಡಿದ್ದಾರೆ. ನಾನು ಮೊದಲೇ ಹೇಳಿದಹಾಗೆ ಯಾರೇ ಸರ್ಕಾರವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಲಿ ಅವರ ವಿಚಾರದಲ್ಲಿ ಟೀಕೆ ಮಾಡುವುದಕ್ಕೆ ಅವಕಾಶವಿರುತ್ತದೆ. ಪಾನನಿರೋಧ ಜಾರಿಮಾಡಿದರೆ ಏಕೆ ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬೇಕೆಂದು ಟೀಕಿಸುತ್ತಾರೆ. ಜಾರಿ ಮಾಡದಿದ್ದರೆ ಏಕೆ ಮಾಡಲಿಲ್ಲವೆಂದು ಕೇಳುತ್ತಾರೆ. ಹೀಗೆ ಟೀಕೆ ಮಾಡಬೇಕಾದರೆ ಎರಡು ರೀತಿಯಲ್ಲಿಯೂ ಮಾಡಬಹುದು. ಇಂತಹ ಟೀಕೆಗಳಿಂದ ಬಾಧಕವೇನೂ ಇಲ್ಲವೆಂದು ನನ್ನ ಭಾವನೆ.

ನಿಧಾನವಾಗುವ ಹಾಗೆ ಸ್ಟ್ಯಾಂಡಿಂಗ್ ಸಮಿತಿಗಳು, ಎಕ್ಸ್‌ಕ್ವೈರಿ ಸಮಿತಿಗಳು—ಇವುಗಳನ್ನು ಮಾಡಿ ಕೆಲಸ ನಿಧಾನವಾಗುವ ಹಾಗೆ ಮಾಡಿದರು ಎಂದು ಟೀಕಿಸಿದರು. ಸ್ಟಾಂಡಿಂಗ ಸಮಿತಿಗೂ, ಎಕ್ಸ್‌ಕ್ವೈರಿಸಮಿತಿಗೂ, ಉದ್ದೇಶದಲ್ಲಿ ವ್ಯತ್ಯಾಸವಿದೆ. ಸ್ಟಾಂಡಿಂಗ್ ಸಮಿತಿ ಆಯಾಯ ಆಡಳಿತದಲ್ಲಿ ದಿನದಿನಕ್ಕೆ ನಡೆಯತಕ್ಕ ಕೆಲಸ ಕಾರ್ಯಗಳನ್ನು ಪರಿಶೀಲಿಸಿ 3—4 ತಿಂಗಳಿಗೊಂದು ಸಾರಿ ಸಲಹೆ ಕೊಡತಕ್ಕದ್ದಾಗಿದೆ. ಉದಾಹರಣೆಗೆ ಇದಕ್ಕೂ, ಭೂ ಸುಧಾರಣಾ ಸಮಿತಿ, ಪಾನ ನಿರೋಧ ಸಮಿತಿ ಇವುಗಳಿಗೂ ವ್ಯತ್ಯಾಸವಿದೆ. ಅಂಥ ಸಮಿತಿಯ ವರದಿ ಬರಬೇಕು. ಅವರಲ್ಲಿ ಅವರ ಅಭಿಪ್ರಾಯ ಸೂಚಿಸಿರುತ್ತಾರೆ. ಸ್ಥಾಯಿ ಸಮಿತಿಗಳಲ್ಲಿ ಮಂತ್ರಿಗಳು ಇರುತ್ತಾರೆ, ಸೆಕ್ರೆಟರಿಗಳು ಇರುತ್ತಾರೆ. ಸದಸ್ಯರು ಹೀಗೆ ಮಾಡಿ ಎಂದು ಸಲಹೆ ಕೊಡುತ್ತಾರೆ. ಹೀಗಿರುವಾಗ ಸ್ಥಾಯಿ ಸಮಿತಿ ನೇಮಿಸಿ ಕಾಲಹರಣಮಾಡುವುದಕ್ಕೆ ಯತ್ನಿಸುತ್ತಿದ್ದೀರಿ ಎಂದು ಹೇಳುವ 'ಆಕ್ಷೇಪಣೆ ಸಲ್ಲದು ಎಂದು ಹೇಳಬೇಕಾಗಿದೆ. ಶ್ರೀ ಗುಂಡಪ್ಪಗೌಡರು ಮಾಡಿರತಕ್ಕ ಭಾಷಣದಲ್ಲಿ ಸರ್ಕಾರ ಮಾಡಿರುವುದು ಎಲ್ಲಾ ಒಳ್ಳೆಯದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅವರು ಮಂತ್ರಿಗಳಾಗಿ ಕೆಲಸಮಾಡಿ ಅರಿತು ನುರಿತವರಾಗಿದ್ದಾರೆ. ಅವರು ಎಷ್ಟೇ ಟೀಕೆಮಾಡಿದರೂ ನೀವು ಈ ರೀತಿ ಮಾಡಬೇಕೆಂದು ಇದ್ದೀರಿ ಒಳ್ಳೆಯದು. ಈ ರೀತಿಮಾಡಿ, ಹೀಗೆ ಮಾಡಿದರೆ ಒಳ್ಳೆಯದು ಎಂದು ಹೇಳಿದ್ದಾರೆ. ಅಂಥಾ ಹಿತೋಪದೇಶದ ಟೀಕೆಗಳನ್ನು ಶ್ರೀ ಚೆನ್ನಬಸಪ್ಪನವರು ಹೇಳಿದ ಹಾಗೆ ಒಳ್ಳೆಯ ಭಾವನೆಯಲ್ಲಿ ತೆಗೆದುಕೊಳ್ಳುವುದು ಉತ್ತಮ. ನಾನಂತೂ ಅವರ ಒಳ್ಳೆಯ ಅಭಿಪ್ರಾಯಕ್ಕೆ ಕೃತಜ್ಞನಾಗಿದ್ದೇನೆ. ಅವರು ಕೆಲವು ಸಮಿತಿಗಳನ್ನು ತೆಗೆದುಹಾಕಬೇಕು, ಒಂದಕ್ಕೊಂದಕ್ಕೆ ಸಂಬಂಧವಿಲ್ಲ ಎಂದು ಹೇಳಿದರು. ಸಮಿತಿ ಮಾಡುವುದು ಕಾಲಹರಣಮಾಡುವುದಕ್ಕೆ ಎಂದು ಹೇಳುವುದಲ್ಲದೆ ಬಹಳ ದುಡ್ಡು ಸಹ ಖರ್ಚಾಗುತ್ತದೆ ಎಂದು ಹೇಳಿದರು. ಕಾಲ, ಸನ್ನಿವೇಶ ನೋಡಿಕೊಂಡು ಕೆಲವು ಸಮಿತಿಗಳನ್ನು ಮಾಡಬೇಕಾಗುತ್ತದೆ. ಅದೇರೀತಿ ಕೆಲವು ಸಮಿತಿಗಳ ಅಗತ್ಯವಿಲ್ಲ ಎಂದು ಶ್ರೀ ಗುಂಡಪ್ಪಗೌಡರು ಹೇಳಿದರು. ಅದನ್ನು ನಾವು ಒಪ್ಪಿಕೊಂಡಿದ್ದೇವೆ.

ಇನ್ನು ಈ ವರ್ಷಕ್ಕೆ ಸಂಬಂಧಪಡದೇ ಇರತಕ್ಕ ವಿಚಾರದಲ್ಲಿ ಜನಾಬ್ ಇಮಾಂರವರು ಡೆಮೊಕ್ರಸಿ ಎಂಬ ಪದ ಸೇರಿಸಿ ನಮ್ಮ ಪಕ್ಷದಲ್ಲಿ ಉಂಟಾಗಿರತಕ್ಕ ಒಂದು ಅಭಿಪ್ರಾಯದ ವಿಚಾರದಲ್ಲಿ ಪ್ರಸ್ತಾಪಿಸುವುದಕ್ಕೆ ಪ್ರಯತ್ನ ಮಾಡಿದರು. ಅದು ಸರಿಯಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ನಾನು ಒಂದು ಕ್ರಿಯಾರೋಪವನ್ನು ಸೂಚಿಸುತ್ತೇನೆ. ಡೆಮಾಕ್ರಸಿ ವಿಚಾರದಲ್ಲಿ ಮಾತನಾಡಕೂಡದು ಎಂದು ಆಗಲೇ ರೂಲಿಂಗ್ ಆಗಿದೆ.

ಅಧ್ಯಕ್ಷರು.—ನೀವು ಏನು ಹೇಳಿದ್ದಿರೋ, ಅದನ್ನೇ ಹೇಳುತ್ತಿದ್ದಾರೆ ಅಷ್ಟೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಶ್ರೀ ಗುಂಡಪ್ಪಗೌಡರು ಇಂದು ಸಂದಿಗ್ಧ ಪರಿಸ್ಥಿತಿ ಉಂಟಾಗುವುದರಿಂದ ಸರ್ಕಾರದವರಿಗೆ ಕೆಲಸ ಮಾಡಲು ಮನಸ್ಸಿರುವುದಿಲ್ಲ, ಮುಂದೆ ಯಾರು ಬರುತ್ತಾರೋ ಏನೋ' ಅವರೇ ಮಾಡಲಿ ಎಂದು ಉದಾಸೀನವುಂಟಾಗುತ್ತದೆ ಎಂದು ಹೇಳಿದರು. ಅದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಈಗ ಆ ದೃಷ್ಟಿಯಿಂದ ಯಾವ ಕೆಲಸವೂ ನಡೆಯದೇ ನಿಂತು ಹೋಗಿಲ್ಲ. ಕೆಲಸದ ಪಾಡಿಗೆ ಅದು ಆಗುತ್ತಾ ಇದೆ. ನಮ್ಮ ಮಂತ್ರಿಗಳಿಗೆ ಸ್ಥಿಮಿತ ಮನಸ್ಸು ಇದೆ. ಉದಾಹರಣೆಗೆ ನಮ್ಮ ಮುಂದಿರತಕ್ಕ ಭಾರಿಭಾರಿ ಮಸೂದೆಗಳನ್ನು ನೋಡಿ, ಎಷ್ಟೊಂದು ಮಸೂದೆಯನ್ನು ತಂದಿದ್ದಾರೆ. ಇದು 1–2 ತಿಂಗಳಿನಿಂದ ಈಚೆಗೆ ಆಗಿರತಕ್ಕ ಕೆಲಸವಲ್ಲವೇ! ಹೊರಟುಹೋಗುತ್ತೇವೆ ಎಂಬ ಭಯದಿಂದ ಯಾರೂ ಜಪ ಮಾಡುತ್ತ ಇರಲಿಲ್ಲ. ಎಷ್ಟು ಮಟ್ಟಿಗೆ ಕೆಲಸ ಮಾಡಬಹುದೋ ಅಷ್ಟು ಮಟ್ಟಿಗ ಪ್ರತಿಭೆಯಿಂದ, ಉತ್ಸಾಹದಿಂದ ಮಾಡಿದ್ದಾರೆ. ಶ್ರೀ ಭೀಮಪ್ಪನಾಯಕರ ಸಮಿತಿಯೂ ಕೂಡ..............

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಿಮ್ಮ ಸಮಿತಿ ಕೆಲಸ ಏನಾಗಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡರು.—ಅದು ಸರ್ಕಾರದ ಪರ್ಯಾಲೋಚನೆಯಲ್ಲಿದೆ ಎಂದು ಹೇಳಿದ್ದಾರೆ ಅದೂ ಬರುತ್ತದೆ. ಮಾನ್ಯ ಸ್ಪೀಕರ್ ಆಗಿರತಕ್ಕ ಶ್ರೀ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಆಗಿದ್ದ ಸಮಿತಿಯ ವರದಿಯ ಮೇಲೂ ಒಂದು ಮಸೂದೆ ಬಂದಿದೆ ಮತ್ತು ಇನ್ನೂ ಅನೇಕ ಹೊಸ ಮಸೂದೆಗಳೂ ಮತ್ತು ತಿದ್ದುಪಡಿ ಮಸೂದಾ ಕಾನೂನುಗಳೂ ಎಷ್ಟೋ ಇವೆ. ಸರ್ಕಾರದವರು ಏನೂ ಕೆಲಸವನ್ಮಾಡದೇ ಇಲ್ಲ. ಇವೆಲ್ಲಾ 9 ತಿಂಗಳಿನಿಂದೀಚೆಗೆ ಮಾಡಿರುವುದೆಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಆದರೂ ಶ್ರೀ ಗುಂಡಪ್ಪಗೌಡರು ಹೇಳಿದ ಹಾಗೆ ಪದೇಪದೇ ಈ ಪರಿಸ್ಥಿತಿ ಉಂಟಾಗುವುದು ದೇಶಕ್ಕೆ ಒಳೆಯದಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಈಗಿನ ಮಂತ್ರಿಮಂಡಲದವರು ಹೆಚ್ಚು ಮೋರೆ ಹಾಕಿಕೊಂಡು ಕುಳಿತಿದ್ದಾರೆ ಎನ್ನುವುದು ಸರಿಯಲ್ಲ. ಯಾವ ರೀತಿ ಕೆಲಸಮಾಡಿದ್ದಾರೆ ಎಂಬುದು ಸಭೆಯ ಮುಂದೆ ಇರತಕ್ಕ ಕಾರ್ಯಕ್ರಮದ ಪಟ್ಟಿಯಿಂದಲೇ ವ್ಯಕ್ತವಾಗುತ್ತದೆ.

ಇಷ್ಟು ಮಾತುಗಳನ್ನು ಮಾತ್ರ ಹೇಳಿ, ನಮ್ಮ ಮಿತ್ರರಾದ ಜನಾಬ್ ಇಮಾಂರವರು ಏನೋ ತರಬೇಕು ಎಂಬ ಉದ್ದೇಶದಿಂದ ತಿದ್ದುಪಡಿ ತರಬೇಕಾಯಿತು. ಆದ್ದರಿಂದ ಆ ತಿದ್ದುಪಡಿಯಲ್ಲಿ ಸ್ವಾರಸ್ಯವಿಲ್ಲವೆಂದು ಭಾವಿಸುತ್ತಾರೆ ಎಂದು ತಿಳಿದುಕೊಂಡು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ. ಅವರ ತಿದ್ದುಪಡಿಯಲ್ಲಿರತಕ್ಕ ಅಂಶಗಳಲ್ಲಿ ಏನೂ ತಿರುಳಿಲ್ಲ. ಅದಕ್ಕೆ ಅನೇಕರು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಅವರು ಅದನ್ನು ವಾಪಸ್ಸು ತೆಗೆದುಕೊಂಡು ಶ್ರೀ ಗೋವಿಂದರೆಡ್ಡಿಯವರು ತಂದಿರತಕ್ಕ ಅಂಶಗಳಲ್ಲಿ ನಿರ್ಣಯಕ್ಕೆ ಸರ್ವಾನುಮತವಾಗಿ ಸಭೆಯ ಒಪ್ಪಿಗೆ ಪಡೆಯುವುದಕ್ಕೆ ಅವಕಾಶ ಮಾಡಬೇಕೆಂದು ಬೇಡಿಕೊಂಡು ಶ್ರೀ ಗೋವಿಂದರೆಡ್ಡಿಯವರು ಈ ನಿರ್ಣಯ ತಂದಿದ್ದನ್ನು ಮನಃಪೂರ್ವಕವಾಗಿ ಒಪ್ಪುತ್ತೇನೆ.

ಅಧ್ಯಕ್ಷರು.—ನಿರ್ಣಯವನ್ನು ಸೂಚಿಸಿದ ಶ್ರೀ ಗೋವಿಂದರೆಡ್ಡಿಯವರು ಈಗ ಮಾತನಾಡಬಹುದು.

Sri M. GOVINDA REDDY.—Sir, I wish to thank all the Hon'ble Members who have participated in discussing this motion, those members who have supported this motion heartily and those members who while not expressly supporting the motion have differed from the policy of the Government and at the same time not supported the amendment. I am glad for one thing that with the exception of one or two members, other members who have participated in the discussions have contributed a good deal by offering constructive suggestions to the Government which I am sure the Government will take note of. As far as the amendment is concerned, the mover of the amendment has moved it technically but not substantiated his amendment. Just take one sentence :

> "...Your Highness's Ministers have not taken adequate steps to maintain the progressive character of the State in the matter of Irrigation, Industry, Agriculture, Economic, Education and other development..."

He has not substantiated this at all. I have to point out that he was in duty bound, when he moves an amendment, to substantiate it and prove by facts what he has alleged in the amendment. He has not done so. He has attended to only one aspect of the amendment and I think he did not want to substantiate the amendment. My own argument is that he cleverly wanted to escape substantiating his amendment for if he had proceeded to substantiate it, he would have found cause to congratulate the Government for its progressive character, for becoming more and more progressive.

Janab J. MOHAMED IMAM.—I have reserved it for the next occasion.

Sri M. GOVINDA REDDY.—The Hon'ble Member cannot substantiate his amendment or the substance of it at any time later, because he was a member of the Government and he knows what that Government was doing, how much they were spending and how much social service they were doing to the State. Now for one school there are ten schools, for one hospital there are two hospitals, for one college there are six colleges. The Agricultural Department which was confined only to Hebbal during his time is spread all over the State and he must refer to the figures of expenditure in the Agricultural Department to see whether that was the department which was under him. For that matter of fact if they now survey any field of administration, they can hardly recognise whether that was the administration which they were in charge of. They find it transformed in such a manner, that it has progressed to such a degree that it is impossible for them to contend that there is no progress. I have listened very respectfully and cautiously to the attitude of some of our veteran members who have spoken on this motion, particularly those who were members of the Government some time ago.

Apart from referring to one or two items they have concluded by generalising that this Address in not satisfactory. Even Sri H. B. Gundappa Gowda said very many good things but ended by saying "ಏನೂ ಮಾಡಿಲ್ಲ."

Sri H. B. GUNDAPPA GOWDA.—I must get corrected. If an Hon'ble Member says something which is not correct, after looking to the records he must be prepared to stand corrected. You must accept the assurance more than anything else.

Sri M. GOVINDA REDDY.—I accept the assurance given by him and I accept the suggestion given also. But I wish to say that this attitude of generalising against the Government is not good, and particularly by those who had the experience of running the Government.

I am reminded at this stage of one thing. There was a peacock on a river side which was enjoying in the cool shade of a glade by spreading its plumage. A monkey which was sitting at the top of a tree nearby would look at the beauty of the peacock and she would feel jealous. Again and again she was looking at the beautiful bird and looking at herself and in the end the monkey felt so envious that she could not contend herself and went to the peacock and said, "Do not be vain that you are beautiful. You only look at your legs. They are so ugly. You are not beautiful, you are ugly." The peacock said, "Very good. Everyone who looks at me praises my beauty. But you looked at the legs and said I am ugly. If you look at yourself, you have no beauty either in the legs, or in the tail or in the body." (laughter). It is just the moral of this lesson I want to submit to this House. We cannot criticise the Government by what it has not done. We should not look at a picture and say it cannot be this, it cannot be that, it is not this and it is not that. We can appreciate the art only by the beauty and the colour that impress us and not by what it is not. We should admire at the beauty it contains. Similarly, the achievements of the Government must be looked not from the point of view of what anoth r Government would have been, what another Government would have done and so on. What has this Government done in the setting in which it is functioning—from that standpoint the Government must be looked at.

Sri H. B. GUNDAPPA GOWDA.—Then there is no improvement.

Sri M. GOVINDA REDDY.—By simply condemning the Government there will be no improvement. But appeciate the situation in which the Government is functioning, its difficulties and facilities it has. Constructive suggestions can be offered in that spirit.

Coming to the details, I do not wish to refer to many cases because I am glad that Ministers are participating in the discussion.

Sri L. SIDDAPPA.—Is this all introductory?

Sri M. GOVINDA REDDY.—Well, I do not bother you. I leave other points to be answered by competent quarters. Hon'ble Janab Imam, while talking of principles of democracy, in that guise, said that there was selfishness, there was scramble for power. That is a thing which came to me as a shock. If Governments could be attributed with such things, there is a lot which can be said against those who have run the Governments in the past. I could say why a particular tank was constructed in a particular place, why a particular road went in that particular way and not this way, why so many other things were done only in one way and not in another way against technical advice when capital was available and when experts were available. Many such charges may be made. Well, the most important topic raised, in which all members have participated, is the question of integration. I may only say one thing on that subject of integration and demobilisation of the Military personnel. Now, as far as integration is concerned, every Hon'ble Member knows and should admit that there was no escape at all and in the setting in which we started our independence, the motives of the Government of India could not be questioned, the purpose of integration could not be questioned. We were bound to fall in line with them; if not, we would have

(SRI M. GOVINDA REDDY.)

been unpatriotic, we would have done no service to India and as a result of such position there would have been hardship. Of course the demobilisation of the military is a hardship and I am sure that the Government will take note of it and try to do something. But Hon'ble Members should also learn that this is a question which has affected the whole of India. In the whole of India there is demobilisation not in any other interest but in the interest of the country. They have to save every pie that they can to help the common man. In these troublous times when there is the threat of the world war, it would have been deemed a failure on the part of the Government to reduce its military. But the Government of India, regardless of the consequences, have only one thing in view—the public weal—and they have done everything to reduce their expenditure and consequently the reduction of expenditure in the military by demobilisation.

SRI L. SIDDAPPA.—Have they not been making fresh recruitment to the army now?

SRI M. GOVINDA REDDY.—They are making fresh recruitments only in particular departments, departments of a technical nature where there is no adequate staff. But they have reduced expenditure on the Army on a large scale and as a consequence our people have also suffered. But it is open to our Government to take note of the situation and I trust they will do everything in their power to help those who had the misfortune to lose their jobs.

The other question I would like to deal with is the question of usefulness or otherwise of the committees that the Government have thought fit to constitute. Of course, Hon'ble Members who have spoken before me have referred to it but one point that I would like to emphasise, is the point of utility. I was surprised to see Sri L. Siddappa and Sri H. B. Gundappa Gowda questioning the utility of these committees. It is a recognised principle of democracy and followed in all countries that the Executive should associate with itself the members of the legislature in as many respects of administration as possible. I would like to question the Hon'ble Members whether, with the experience those Hon'ble Members who have run the Government have, they would not be useful to this Government if they give their ripe experience to the Government. To that extent they would certainly be helping the Government. Moreover Governments are run by people who have developed a set outlook. They cannot look at the other side. It is for us to see what defects there are, where improvements can be made. It is for us to suggest, to observe upon it and help by offering constructive suggestions. It is in that way that these Committees, I am sure, are bound to be useful and I am only sorry that without giving them due credit, they have said that these Committees will not be very useful.

One other point to which I would like to refer in this connection is the Land Revenue Committee. Hon'ble Member Sri L. Siddappa said that this Committee was very large. It is true that it was very large, and I agree with him in the principle enunciated that these Committees should as far as possible be small to do effective work. There is no dispute about it. But, for the Land Revenue Committee being large there was full justification. I wish to point out that in Mysore on a question connected with land revenue we have got various aspects. We have got the Malnad and the Maidan and in the Maidan itself there are lands which are assessed at 1½ annas per acre and there are lands which are assessed at Rs. 2-14-0 per acre. There have been Jagirs, Zamindaries and there are temple properties, so that on this Committee the Government were bound to take a large number of representatives of several aspects.

SRI L. SIDDAPPA.—This state of affairs prevails even in the neighbouring States. In fact it was open to every subject of the State to go and give evidence before the Committee.

SRI M. GOVINDA REDDY.—I cannot speak for those States. I can only state—and I am sure that Hon'ble Sri

Gundappa Gowda agrees with me—that in this Committee every member contributed his best and that the representative character was maintained very effectively and it was good that it was done so.

There is one other point to which I would like to refer. I am sorry Janab Hanief is not here. While giving very good and constructive suggestions, he said 'You have given up Gandhian creed, you should have come to the assistance of the rural people, for instance by encouraging Khadi." He gave it as an instance. I am sorry he was never in the khadi field. He does not know what it is. I wish he were present.

The Hon'ble Sri H. C. DASAPPA.—Janab Hanief was once upon a time in the Congress.

Sri M. GOVINDA REDDY.—I do remember he was once. But I can say this much that he has no experience of this industry. Some of those who are engaged in this industry know full well that it is impossible to encourage the ryots, to persuade them to spin. A new psychology has been developing in society. As an instance of it, I am only giving a small incident which happened in my own country house. There was a servant. Previously, servants used to work during all waking hours except their bed time. But now they have got a different psychology. One day in the morning when the servant was removing cow-dung, the calf forced itself free and went to the mother and was feeding at the udder of the mother. A passer-by who happened to notice it said: "Well, it is feeding itself. Why don't you tie it?" The servant said: ಪೋನಿರೇ ತಾಕೊಳ್ಳೇನಿರೇ! ಅನ್ನನಂಟ.
Let it drink. This fellow does not give me as fine clothes as he wears". I apprised my brother-in-law about his grievance. "Look here, he has a right grievance. Why don't you give him fine clothes?" His answer was: 'If every master begins to supply servants with cloth which costs Rs. 2 a yard, he cannot afford to maintain any servant". That is just the communistic outlook that is developing.

In the field of industry, the Government are giving subsidies for starting home industries. I am sure many are not availing themselves of this help with the real idea of improving the industries, with the idea of eking out their livelihood. But they avail of it with the idea of taking money from the Government and defaulting. The present state of psychology, freedom, this Swatantra business, every one feeling himself equal to the best in society—this is coming in the way of the Government doing anything, and any Government would have found it difficult to do anything in this atmosphere and I pity those who are in charge of Governments that while being victims of this charge they are powerless with the best of their energies to prosecute such helpful industries like cottage industries. Our Government are doing their best for cottage industries. The famous Sir M. Visveswaraya's scheme is going on and they have already spent more than Rs. 5 lakhs. They are doing everything to encourage the people, but I am sure people are unwilling to take advantage of this scheme.

I do not like to take much time of this House. I wish to say that almost every member has agreed to this motion and has given his support to it and I may request the Hon'ble Janab Mohamed Imam to withdraw his amendment, firstly because he has not moved the amendment in spirit, secondly because he has not made out any point against the Government so much so that he has found no reason to differ from the Address and lastly, our respect for His Highness should go unqualified.

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ ಶ್ರೀಮನ್ಮಹಾರಾಜರವರಿಗೆ ಅರ್ಪಿಸಬೇಕಾಗಿರುವ ವಂದನೆಯ ನಿರ್ಣಯಕ್ಕೆ ತಿದ್ದುಪಡಿಯನ್ನು ಸೂಚಿಸಿ ಅದನ್ನು ಸಭೆಯ ಮುಂದಿಡುವಾಗ ನನ್ನ ಆಡಳಿತಕ್ಕೊಳಪಟ್ಟ ಬಾಬುಗಳಲ್ಲಿ ಕೆಲವುಗಳ ಮೇಲೂ ಟೀಕೆಗಳು ಬಂದಿವೆ. ಹಾಗೆ ನನ್ನ ಪಾಲಗೆ ಬಂದಿರತಕ್ಕ ಒಂದೆರಡು ಆಕ್ಷೇಪಣೆಗಳ ಬಗ್ಗೆ ಕೆಲವು ಅಂಶಗಳನ್ನು ಸ್ಪಷ್ಟಪಡಿಸಲಚ್ಛಿಸುತ್ತೇನೆ.

ಜನಾಬ್ ಮಹಮದ್ ಇಮಾಂರವರು ಮಿಲಟರಿಯ ವಿಚಾರವಾಗಿ ಪ್ರಸ್ತಾಪಮಾಡಿದ್ದಾರೆ. ಆದರೆ ಅವರು ಈ ಬಗ್ಗೆ ನಿಜವಾದ ವಾಸ್ತವಾಂಶವೇನಿದೆಯೆಂಬುದನ್ನು ಅವರು ತಿಳಿದುಕೊಂಡಿದ್ದರೆ ಅವರ ವಾಕ್ ಧೋರಣೆ ಆ ರೀತಿ ಇರುತ್ತಿರಲಿಲ್ಲವೆಂದು ನಾನು ತಿಳಿಯುತ್ತೇನೆ. ಅವರು ನನ್ನಲ್ಲಿಗೆ ಬಂದು ಕೇಳಿದ್ದರೂ ನಾನು ಸಂಪೂರ್ಣವಾಗಿ ಎಲ್ಲ ವಿಚಾರಗಳನ್ನೂ ಅವರಿಗೆ ತಿಳಿಸುತ್ತಿದ್ದೆನು.

(ಮಾನ್ಯ ಶ್ರೀ ಟಿ. ಮರಿಯಪ್ಪನವರು)

ಆ ವಿಚಾರಗಳೆಲ್ಲವೂ ಈಗ ಯಾವ ಮಟ್ಟದಲ್ಲಿವೆ ಎಂಬುದನ್ನು ಅವರು ಗ್ರಹಿಸಿದ್ದರೆ ಆಗ ಅವರು ಮಾಡಿದ ಟೀಕೆಗೇ ಅವಕಾಶವಾಗುತ್ತಿರಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

Sri H. B. GUNDAPPA GOWDA.—Supposing on account of lack of information some Hon'ble Member were to pursue some line of argument, It is always open to the Hon'ble Minister to step in at that stage and make the position clear so that discussion may continue on right lines and others may take cue of it."

ಜನಾಬ್ ಜೆ. ಮಹಮದ್ ಇಮಾಂರವರು.—ಅಷ್ಟೆಲ್ಲಾ ಬುದ್ಧಿ ಅವರಿಗೆಲ್ಲದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ದಾರ್ ವಲ್ಲಭಾಯಿ ಪಟೇಲರವರ ನಿಧನದ ಬಗ್ಗೆ ಸಂತಾಪ ಸೂಚನೆಯನ್ನು ಸೂಚಿಸಿರತಕ್ಕ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದ ಕಾಲದಲ್ಲಿ ಅವರ ಗುಣಗಾನಮಾಡುತ್ತಾ, ಯಾರು ಅವರು ದೇಶದ ಐಕಮತ್ಯತೆಗೆ ಮತ್ತು ಒಡೆದು ಹೋಗಿದ್ದ ದೇಶಗಳನ್ನು ಮತ್ತೆ ಒಂದುಗೂಡಿಸಲು ಪಟ್ಟ ಶ್ರಮದ ಬಗ್ಗೆ ಮತ್ತು ಇಂಡಿಯಾದೇಶದಲ್ಲಿರುವ ಸರ್ವರೂ ಒಂದೇ ದೇಶದ ಪ್ರಜೆಗಳೆಂಬ ಭಾವನೆ ಎಲ್ಲರಲ್ಲೂ ಮೂಡುವಂತೆ ಮಾಡಿದ ಕಾರ್ಯಗಳನ್ನು ಶ್ಲಾಘಿಸುತ್ತಾ ಇವರು ಯೂನಿಯನ್ ಪ್ರಜೆಗಳು, ಇವರು ಸಂಸ್ಥಾನದ ಪ್ರಜೆಗಳು, ಇವರು ಫೆಡರಲ್ ಪ್ರದೇಶದ ಪ್ರಜೆಗಳು ಎಂಬ ಯಾವ ಭೇದಭಾವನೆಯೂ ಇಲ್ಲದಂತೆ ಎಲ್ಲವನ್ನೂ ಒಂದುಗೂಡಿಸಲು ಅವರು ಬಹಳವಾಗಿ ಶ್ರಮಿಸಿದರೆಂದೂ ವರ್ಣನೆ ಮಾಡಿದ್ದರೋ ಅದೇ ಮಹನೀಯರು ಈಗ ಈ ಆಕ್ಷೇಪಣೆಯನ್ನೇ ಎತ್ತಿರುವುದು ಬಹಳ ಆಶ್ಚರ್ಯಕರವಾಗಿದೆ! ಇಂಥ ಪ್ರಶ್ನೆಯನ್ನೆತ್ತತಕ್ಕದ್ದು ಯಾವ ಭಾರತೀಯನಿಗೂ ಸರಿಯಾದುದಲ್ಲ. ಎಂದಿನವರೆಗೆ ಇಡೀ ಇಂಡಿಯಾದೇಶದ ಭದ್ರತೆಗೆ ಐಕ್ಯಮತ್ಯತೆಗೆ ಎಲ್ಲರೂ ಏಕಮತದಿಂದ ದುಡಿಯಬೇಕೆಂದು ಯಾರು ಯಾರು ಅರಿತಿರುತ್ತಾರೋ ಅವರು ಭಾರತವೇ ಬೇರೆ ನಮ್ಮ ಮೈಸೂರೇ ಬೇರೆ ಎಂಬ ಭಾವನೆಯನ್ನೇ ಮರೆತುಬಿಡಬೇಕಾಗಿದೆ. ಸೈನ್ಯದ ವಿಚಾರವೆಲ್ಲಾ ಕೇಂದ್ರ ಸರ್ಕಾರಕ್ಕೆ ಸೇರಿದ್ದು. ನಮ್ಮ ಸೈನ್ಯವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿರುವುದರಲ್ಲಿ ಯಾರೂ ಯಾವ ವಿಧವಾದ ಆಕ್ಷೇಪಣೆ ಮಾಡುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ, ಹೊಸ ರಾಜ್ಯಾಂಗದ ಪ್ರಕಾರ ನಾವು ಇಡೀ ಭಾರತೀಯರೆಲ್ಲಾ ಒಂದೇ ಆಗಿರುವುದರಿಂದ ಮೈಸೂರಿನವರು ಇಂಡಿಯಾ ಸರ್ಕಾರದ ಕಷ್ಟಸುಖಗಳಲ್ಲಿ ಭಾಗಿಗಳಾಗಲೇ ಬೇಕು, ಅಲ್ಲಿ ನಮ್ಮ ಪ್ರತಿನಿಧಿಗಳೂ ಇದ್ದಾರೆ. ನಮ್ಮ ಸೈನಿಕರು ಮೈಸೂರಿಗೇ ಅಲ್ಲದೆ ಭಾರತಕ್ಕೂ ಹೇರಳವಾದ ಸೇವೆ ಸಲ್ಲಿಸಿದ್ದಾರೆ. ಹಿಂದೆ ಯುದ್ಧದಲ್ಲಿ ಸಹಾಯಮಾಡಿದ್ದಾರೆ. ಹೈದರಾಬಾದಿನಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಕಲ ಸಹಾಯವನ್ನೂ ನೀಡಿದ್ದಾರೆ. ಆ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ನಾವು ನಮ್ಮ ಸೈನಿಕರನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸುವಾಗ ಅವರ ಹಿತವನ್ನು ಎಷ್ಟರಮಟ್ಟಿಗೆ ರಕ್ಷಣೆಮಾಡಬೇಕೋ ಅಷ್ಟರಮಟ್ಟಿಗೆ ಮಾಡಲೇಬೇಕೆಂದು ಒತ್ತಾಯ ಮಾಡಿದ್ದೇವೆ. ಅವರ ಹಿತಕ್ಕೆ ಧಕ್ಕೆ ಬರಬಾರದೆಂದು ವಿಶೇಷ ಪ್ರಯತ್ನ ಮಾಡಿದ್ದೇವೆ. ಆ ವಿಚಾರವನ್ನು ಶ್ರೀ ಮೆನನ್ರವರು ಇಲ್ಲಿಗೆ ಬಂದಿದ್ದಾಗ ಕೂಡ ಪ್ರಸ್ತಾಪಮಾಡಿ ಚೆನ್ನಾಗಿ ತಿಳಿಸಿದ್ದೇವೆ. ಆ ಬಗ್ಗೆ ನಿಧಾನವಾಗಲಿ, ಆಲಸ್ಯವಾಗಲಿ ಇಲ್ಲ. ಶ್ರೀ ಗುಂಡಪ್ಪಗೌಡರು ಎಷ್ಟು ತೀವ್ರವಾಗಿ ಕೆಲಸಮಾಡುತ್ತಿದ್ದರೋ ನಾವೂ ಸಹ ಅಷ್ಟೇ ತೀವ್ರತೆಯಿಂದ ಮಾಡುತ್ತಿದ್ದೇವೆಂದು ಹೇಳಿದರೆ ಯಾರೂ ತಪ್ಪಭಿಪ್ರಾಯಪಡಬಾರದು. ಕೇಂದ್ರದಲ್ಲಿ ಕೆಲವು ಸನ್ನಿವೇಶಗಳು ಒದಗಿದವು. ಪಕ್ಷದ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ಒಂದು ನೀತಿಯನ್ನು ಅನುಸರಿಸುತ್ತಿದೆ. ಆ ನೀತಿಯನ್ನು ನಮ್ಮ ಜನರ ಹಿತಕ್ಕಾಗಿ ಎಷ್ಟು ಬದಲಾಯಿಸಬೇಕೋ ಅಷ್ಟು ಪ್ರಯತ್ನಮಾಡಿ ಸ್ವಲ್ಪಮಟ್ಟಿಗೆ ಕೃತಕೃತ್ಯರಾಗಿದ್ದೇವೆ. ನಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಆಫೀಸರುಗಳನ್ನು ಕೆಲಸದಿಂದ ತೆಗೆಯಬಾರದೆಂದು ಮನವಿಯನ್ನು ಸಲ್ಲಿಸಿದ್ದೇವೆ. ಪ್ರಾಯಶಃ ಮೂರು ನಾಲ್ಕು ಮಂದಿಯನ್ನು ಬಿಟ್ಟರೆ ಬಾಕಿಯವರಿಗೆ ಇನ್ನೂ ಒಂದು ವರ್ಷ ಕಾಲವಿರಲು ಅವಕಾಶ ಕೊಟ್ಟಿದ್ದಾರೆ. ಜನಾಬ್ ಇಮಾಂರವರು ಎಷ್ಟು ಆಸಕ್ತಿಯನ್ನು ತೋರಿಸುತ್ತಿದ್ದಾರೋ ಅದಕ್ಕೆ ಕಡಿಮೆಯಿಲ್ಲದಷ್ಟು ಆಸಕ್ತಿ ನಮಗೂ ಇದೆ. ಅವರು ಮಾತನಾಡುವಾಗ ಹೊರಗಿನವರಿಗೆ ಒಂದು ಭಾವನೆ ಬರುವ ಹಾಗೆ ಹೇಳಿದರು. ಅದು ಸರಿಯಲ್ಲ. ಒಂಬತ್ತು ಬ್ಯಾಟಾಲಿಯನ್ ಕಳುಹಿಸಿದೆಯೆಂದು ಜನಾಬ್ ಇಮಾಂರವರು ಹೇಳಿದುದು ಸರಿಯಲ್ಲ. ಬ್ಯಾಟಾಲಿಯನ್ ಎಂಬ ಪದ ಭಿನ್ನ ಭಾವನೆಗೆ ಅವಕಾಶವಾಗಿದೆ. ಒಂಬತ್ತು ಯೂನಿಟ್ಟುಗಳು ಮಾತ್ರ ಕಳುಹಿಸಲ್ಪಟ್ಟಿವೆ. ಆಫೀಸರು ಏಳು, ಯೂನಿಟ್ ಕಮ್ಯಾಂಡ್ ಆಫೀಸರು 130 ಮತ್ತು ಇತರ ಪರ್ಸನಲ್ 3,335 ಮಂದಿಯನ್ನು ನಾವು ಕಳುಹಿಸಿದ್ದೇವೆ. ಕೇಂದ್ರ ಸರ್ಕಾರದ ನೀತಿಯಂತೆ ಇವರು ವರ್ಗಾಯಿಸಲ್ಪಟ್ಟಮೇಲೆ ಇಂಡಿಯಾದ ಸೈನ್ಯದಲ್ಲಿ ಸೇರಿಸಿಕೊಳ್ಳಬೇಕಾದರೆ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಪ್ರತಿನಿಧಿಗಳು ಬಂದು ಚುನಾಯಿಸಬೇಕು. ರಾಜ್ಯಾಂಗದ ಪ್ರಕಾರ ಒಂದು ಚುನಾವಣಾ ಬೋರ್ಡಿದೆ. ಅದರಲ್ಲಿ ನಮ್ಮ ಪ್ರತಿನಿಧಿಗಳೂ ಇದ್ದಾರೆ. ಚೀಫ್ ಕಮ್ಯಾಂಡೆಂಟರು ಕೂಡ ಸೈನಿಕರ ಹಿತವನ್ನು ರಕ್ಷಣೆಮಾಡಿದ್ದಾರೆ. ಕರ್ನಲ್ ಬಸವರಾಜೇ ಅರಸಿನವರು ಅಲ್ಲಿದ್ದಾರೆ. ನಮ್ಮ ಅಧಿಕಾರಿಗಳಲ್ಲಿ ದಕ್ಷತೆಯು ಸ್ವಲ್ಪವೂ ಕಡಿಮೆಯಿಲ್ಲ. ಇಂಡಿಯಾದ ಸೈನ್ಯಕ್ಕಾಗಿರುವಷ್ಟು ಶಿಕ್ಷಣವು ನಮ್ಮವರಿಗಿರಲಿಲ್ಲ. ಆದ್ದರಿಂದ ಅದನ್ನೇ ಒಂದು ಕಾರಣವಾಗಿಟ್ಟುಕೊಂಡು ನಮ್ಮವರಿಗೆ ಸಾಕಷ್ಟು ಪ್ರೋತ್ಸಾಹ ಕೊಡುವುದನ್ನು ತಪ್ಪಿಸಬೇಡಿ, ನಮ್ಮವರಿಗೆ ಶಿಕ್ಷಣ ಪಡೆಯಲು ಅವಕಾಶ ಕೊಡಬೇಕು, ಆದಾದ ನಂತರ ಚುನಾಯಿಸಬೇಕೆಂದು ಹೇಳಿದೆವು. ಅದರಮೇಲೆ ಕೇಂದ್ರದವರು ಒಂದು ಕಾಲಾವಧಿಯನ್ನು ಕೊಟ್ಟು ಒಂದು ವರ್ಷದವರೆಗೆ ಯಾರನ್ನೂ ವಾಪಸ್ಸು ಕಳುಹಿಸುವುದಿಲ್ಲ, ತೀರಾ ನಾಲಾಯಕ್ಕಾದಂಥ ಎರಡು ಮೂರು ಮಂದಿ ಮಾತ್ರ ಹೋಗಬಹುದು, ಬಾಕಿಯವರು ಅರ್ಹತೆ ಪಡೆಯಬಹುದು ಎಂದು ಭರವಸೆ ಕೊಟ್ಟಿರುವರು. ಇದೇ ಈಗಿನ ಪರಿಸ್ಥಿತಿ. ಹೆಚ್ಚು ಜನರು ಹೋದರೆಂದು ಹೇಳುವುದು ಸರಿಯಲ್ಲ. ಏಳು ಜನರನ್ನು ತೆಗೆಯಬೇಕೆಂದಿತ್ತು. ಆದರೆ ಕೆಲವರಿಗೆ ನಾನಾ ಕಾರಣಗಳಿಂದ ರಿಯಾಯಿತಿ ಕೊಟ್ಟಮೇಲೆ ಪ್ರಾಯಶಃ 2—3 ಜನರನ್ನು ಮಾತ್ರ ತೆಗೆದುಕೊಳ್ಳುವುದಿಲ್ಲ. ಅಷ್ಟು ವಿನಾ ಬಾಕಿ ಆಫೀಸರುಗಳಿಗೆ ಅವಕಾಶವಿದೆ. ಮುಖ್ಯವಾಗಿ ತೊಂದರೆಯಾಗಿರುವುದು ಸಿಪಾಯಿಗಳಿಗೆ ಮಾತ್ರ. 3,335 ಮಂದಿ ವರ್ಗಮಾಡಲ್ಪಟ್ಟಿರುವವರ ಪೈಕಿ 1,952 ಜನರನ್ನು ಮಾತ್ರ ತೆಗೆಯಬೇಕೆಂದಿರುವುದಾಗಿ ತಿಳಿದುಬಂದಿದೆ. ಅದು ನಿಜವಾಗಿಯೂ ವ್ಯಸನ

ಕರವಾದ ವಿಚಾರ. ಆದರಿಂದ ಅವರುಗಳಿಗೆ ತೊಂದರೆ ಯಾಗಬಾರದೆಂದೂ, ನಮ್ಮಲ್ಲಿ ಸಾಧ್ಯವಾದಷ್ಟು ಜಾಗಗಳನ್ನು ಕೊಡಬೇಕೆಂದೂ ಯೋಚಿಸಿ. ರಿಸರ್ವ್ ಪೋಲೀಸ್ ಜಾಗಗಳನ್ನು ಕೊಡಲು ಏರ್ಪಾಡಾಗಿದೆ. ಆದ್ದರಿಂದ ಅವರ ವಿಚಾರದಲ್ಲಿ ಜಾಗರೂಕತೆಯಿಂದಿಲ್ಲ, ಸರಿಯಾದ ವ್ಯವಸ್ಥೆ ಮಾಡಿಲ್ಲ ಎಂದು ಯಾರೂ ವೃಥಾ ಆಕ್ಷೇಪಮಾಡಬಾರದು. ಚೆನ್ನಾಗಿ ಸೈನ್ಯದಲ್ಲಿ ತಯಾರಾಗಿರುವ ಅವರನ್ನು ಕೆಲಸವಿಲ್ಲದೇ ಇರುವಂತೆ ಮಾಡಬಾರದು ಎಂದು ಯೋಚಿಸಿ ತಕ್ಕ ನಿಗಾ ಕೊಟ್ಟಿದ್ದೇವೆ. ಇದರ ಜೊತೆಗೆ ಸಿಪಾಯಿಗಳ ದರ್ಜೆ ಮುಖ್ಯವೆಂದು ಭಾವಿಸಿ ಆ ಬಗ್ಗೆ ಸ್ವಲ್ಪ ಹಣವನ್ನು ಮೀಸಲಾಗಿಟ್ಟಿದೆ. ಕೆಲಸದಿಂದ ತೆಗೆದವರಿಗೆ ತಕ್ಕ ವ್ಯವಸ್ಥೆ ಮಾಡಲು ಎಂದು ಲಕ್ಷ ರೂಪಾಯಿಗಳವರೆಗೂ ಖರ್ಚುಮಾಡಬೇಕೆಂಬ ಒಂದು ಯೋಜನೆ ಬೇರೆ ಇದೆ. ಇದರ ಸಂಪೂರ್ಣ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೆ ಸೇರಿದ್ದಾಗ್ಯೂ ಸಹ ನಾವೂ ಅವರ ಯೋಗಕ್ಷೇಮ ಸಾಧನೆಗಾಗಿ ಪ್ರಯತ್ನಪಟ್ಟಿದ್ದೇವೆ. ಅವರಿಗೆ ಎಲ್ಲಾ ಸೌಕರ್ಯಗಳನ್ನೂ ಕೊಡಬೇಕೆಂದು ಕೇಂದ್ರ ಸರ್ಕಾರದಲ್ಲಿ ಪ್ರಾರ್ಥನೆಮಾಡಿದ್ದೇವೆ. ಶ್ರೀ ಮೆನನ್‌ರವರೂ ಕೂಡ ಆ ವಿಚಾರವನ್ನು ಸಹಾನುಭೂತಿಯಿಂದ ನೋಡುವುದಾಗಿ ತಿಳಿಸಿರುತ್ತಾರೆ. ಅವರ ಸೌಕರ್ಯಗಳಿಗಾಗಿ ಸೂಕ್ತ ಕಾರ್ಯಕ್ರಮ ಕೈಕೊಂಡು ಹಣದ ಸಹಾಯವನ್ನು ಮಾಡುವುದಾಗಿಯೂ ಹೇಳಿದ್ದಾರೆ. ಒಟ್ಟಿನಲ್ಲಿ ಈ ಸಭೆಯ ಮೂಲಕ ಸೈನ್ಯದ ಅಧಿಕಾರಿಗಳಿಗೂ ಮತ್ತು ಇತರರಿಗೂ ಭರವಸೆಯನ್ನು ಕೊಡುವುದು ಅವರ ಹಿತವನ್ನು ಸಾಧ್ಯವಾದಷ್ಟು ಜಾಗರೂಕತೆಯಿಂದ ರಕ್ಷಣೆ ಮಾಡಬೇಕೆಂದಿದ್ದೇವೆ. ಸನ್ನಿವೇಶ ಸಿಕ್ಕಿದಾಗ ಲೆಲ್ಲಾ ಕೇಂದ್ರಕ್ಕೆ ಒತ್ತಾಯ ಪೂರ್ವಕವಾಗಿ ಹೇಳಿದೆ, ಆದರೆ ಒಂದು ಅಂಶ, ಮೊನ್ನೆತಾನೆ ಪಾರ್ಲಿಮೆಂಟಿನಲ್ಲಿ ಪಂಡಿತ ನೆಹ್ರುರವರು ಒಂದು ವಿಚಾರ ಹೇಳಿದ್ದಾರೆ. ಮಿಲಿಟರಿ ಖರ್ಚು ವಿಪರೀತವಾಯಿತೆಂದೂ, ಅದನ್ನು ಸರಿದೂಗಿಸುವುದು ಕಷ್ಟವೆಂದೂ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದಾಗ ಅದನ್ನು ಕಡಮೆಮಾಡಬೇಕಾಗಿದೆ, ಆದರೆ ದಕ್ಷತೆಯು ಕಡಮೆಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ನಮ್ಮ ಸೈನ್ಯ ಒಂದೇ ಅಲ್ಲದೆ ಹೈದರಾಬಾದಿನ ಸೈನ್ಯವನ್ನು ಪೂರ್ತಿಯಾಗಿ ತೆಗೆದಿದ್ದಾರೆ. ಕೊಚಿನ್, ತಿರುವಾಂಕೂರುಗಳ ಸೈನ್ಯದಲ್ಲೂ ಹೀಗೆಯೆ ಮಾಡಿದ್ದಾರೆ. ನನಗೆ ಗೊತ್ತಿರುವಹಾಗೆ ಮೈಸೂರು ಮತ್ತು ತಿರುವಾಂಕೂರು ಇವೆರಡಕ್ಕೆ ಮಾತ್ರ ಇಂಡಿಯಾದ ಸೈನ್ಯದಲ್ಲಿ ಹೆಚ್ಚು ಅನುಕೂಲತೆಗಳನ್ನು ಒದಗಿಸಿದ್ದಾರೆ. ಇಂಡಿಯಾದಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಏನು ಅನ್ವಯಿಸುತ್ತದೆಯೋ ಅದು ಮಾತ್ರ ನಮಗೆ ಅನ್ವಯವಾಗಬೇಕೇ ವಿನಾ ಬೇರೆ ಹೊಸದಾಗಿ ಏನೂ ಆಗಲಾರದು. ಪರಿಸ್ಥಿತಿ ಹೀಗಿರುವಲ್ಲಿ ಜನರ ಮನಸ್ಸಿನಲ್ಲಿ ಬೇರೆ ಭಾವನೆಯು ಬರುವಂತೆ ಮಾಡಬಾರದು. ಹೈದರಾಬಾದು ಮತ್ತು ತಿರುವಾಂಕೂರಿನಲ್ಲಿ ಏನು ಕೊಟ್ಟಿದ್ದಾರೆಂಬುದನ್ನು ಅವರು ಹೇಳಬೇಕಾಗಿತ್ತು. ಕ್ಯಾಡೆಟ್ ವಿಚಾರವನ್ನು ಹೇಳಿದರು; ನಿಜ. ನಮ್ಮ ಮಾನ್ಯ ಅಧ್ಯಕ್ಷರು ಕೂಡ ಆ ಸಮಿತಿಯಲ್ಲಿದ್ದರು. ಮೊದಲು ನಮ್ಮ ಹುಡುಗರಿಗೆ ಒಳ್ಳೆಯ ಮಿಲಿಟರಿ ಶಿಕ್ಷಣ ಕೊಡಬೇಕೆಂಬ ಉದ್ದೇಶದಿಂದ ಶಿಕ್ಷಣ ಕೊಡಲಾಯಿತು. ಆದರೆ ಏಕ್‌ದಮ್ ಕಮಿಷನ್ ದರ್ಜೆಗೆ ಅವರೆಲ್ಲರನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ರಿಜರ್ವ್ ಪೋಲೀಸಿನಲ್ಲಿ ಎಷ್ಟೆಷ್ಟು ಸ್ಥಾನಗಳು ಖಾಲಿ ಇವೆ, ಯಾರು ಯಾರು ಯಾವ ಯಾವ ಸ್ಥಾನಗಳಿಗೆ ಅರ್ಹರು ಎಂಬುದನ್ನೆಲ್ಲಾ ಯೋಚನೆ ಮಾಡುತ್ತಿದ್ದೇವೆ. ನಮ್ಮ ಯುವಕರಿಗೆ ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡಿ ನಾವು ಶಿಕ್ಷಣ ಕೊಟ್ಟಿದ್ದೇವೆ. ಹೀಗಿರುವಾಗ ಅವರನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ಯೋಚನೆಯೂ ನಮಗಿದೆ.

ಇನ್ನು ಎಕಾನಮಿ ಆಫೀಸರ ಶಿಫಾರಸುಗಳನ್ನು ಜಾರಿಗೆ ಕೊಟ್ಟಿಲ್ಲವೆಂದು ಆಕ್ಷೇಪಿಸಿದರು. ಪೋಲೀಸ್ ಇಲಾಖೆಯಲ್ಲಿ ಏಳು ನೂರು ಕಾನ್‌ಸ್ಟೇಬಲ್ಲುಗಳನ್ನು ಈಗಾಗಲೇ ಕಡಿಮೆ ಮಾಡಿದ್ದೇವೆ. ಹೀಗೆಯೇ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಖರ್ಚು ಕಡಿಮೆ ಮಾಡುತ್ತಿದ್ದೇವೆ.

ಶ್ರೀ ಎಲ್. ಸಿದ್ದಪ್ಪನವರು.—ಎರಡು ಚೀಫ್ ಇಂಜಿನಿಯರ್ ಸ್ಥಾನಗಳನ್ನು ಮಾಡಿದಿರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಿಮ್ಮ ಕಾಲದಲ್ಲಿ ನೀವೇನೇನು ಮಾಡಿದ್ದೀರೆಂಬುದನ್ನೂ ಹೇಳುತ್ತೇನೆ.

ಡೀಮೊಬಿಲೈಸ್ ಮಾಡಿರುವ ವಿಚಾರದಲ್ಲಿ ಟೀಕೆ ಮಾಡಿದರು. ಅವಶ್ಯಕ ಬಿದ್ದರೆ ಯಾರಾದರೂ ಮಾಡಲೇಬೇಕಾಗುತ್ತದೆ. ಈ ವಿಚಾರದಲ್ಲಿ ಅವರ ವಾದದಲ್ಲಿ ತಿರುಳಿಲ್ಲ.

ಇನ್ನು ಹತೋಟಿಗಳ ವಿಚಾರದಲ್ಲಿ ಅವರು ಆಕ್ಷೇಪಿಸಿದರು. ಹತೋಟಿಗಳಿರಬಾರದು. ಅವುಗಳಿಂದ ತೊಂದರೆಗಳಿವೆ, ನಿಜ. ಇದು ಜನರನ್ನವಲಂಬಿಸಿರುವ ವಿಚಾರ. ಜನರ ನೈತಿಕ ಮಟ್ಟ ಬ್ರಿಟನ್ನಲ್ಲಿರುವ ಹಾಗಿದ್ದರೆ ಹತೋಟಿಗಳು ಚೆನ್ನಾಗಿ ಕೆಲಸ ಮಾಡುತ್ತವೆ. ಕಳೆದ ಯುದ್ಧವಾದಮೇಲೆ ನಮ್ಮ ದೇಶದ ವಾತಾವರಣ ಒಂದು ರೀತಿಯಾಗಿದೆ. ಈ ವಿಷಯವಾಗಿ ನಾನು ಹೆಚ್ಚೇನೂ ಹೇಳಬೇಕಾಗಿಲ್ಲ. ಎಲ್ಲರಿಗೂ ಗೊತ್ತಿರುವ ವಿಚಾರ. ಮೈಸೂರು ದೇಶ ಮಾತ್ರ ಈ ಹತೋಟಿ ನಿಯಂತ್ರಣಗಳನ್ನು ಹಾಕಿಕೊಂಡಿದ್ದರೆ ಆಗ ನಮ್ಮನ್ನು ಆಕ್ಷೇಪಣೆ ಮಾಡಬಹುದಾಗಿತ್ತು. ಈಗ ಭಾರತ ಸರ್ಕಾರದವರು ಅನುಸರಿಸುವ ನೀತಿಯನ್ನು ನಾವು ಅನುಸರಿಸಬೇಕಾಗಿದೆ. ಮೈಸೂರು ದೇಶದಲ್ಲಿ ಅಕ್ಕಿ ಅಭಾವ ಹೆಚ್ಚು, ಮಿಲೆಟ್ಸ್ ವಿಚಾರದಲ್ಲಿ ಸ್ವಪರಿಪೂರ್ಣತೆ ಆಗಿದೆ ಎಂದು ಹೇಳಿದರು. ಇದು ಇಪ್ಪತ್ತು ವರ್ಷಗಳ ಹಿಂದೆ ನಿಜವಾಗಿರಬಹುದು. ಆದರೆ ಈಗ ಜನಸಂಖ್ಯೆ ಬಹಳ ಹೆಚ್ಚಾಗಿದೆಯಲ್ಲದೆ ರಾಗಿ ಬೆಳೆಯುವ ಜಮೀನು ವಿಸ್ತೀರ್ಣ ಕೂಡ ಕಡಿಮೆಯಾಗಿದೆ. ಈ ಪ್ರದೇಶದ ವಿಸ್ತೀರ್ಣ 1943-44ರವರೆಗೆ ಏರಿಕೊಂಡು ಹೋಗಿ 1944ರಲ್ಲಿ ಕಡಿಮೆಯಾಗಿದೆ, ಮೈಸೂರು ದೇಶ ಒಂದರಲ್ಲೇ ಹೀಗಾಗಿಲ್ಲ, ಭಾರತದ ಇತರ ಕಡೆಗಳಲ್ಲೂ ಹೀಗಾಗಿದೆ. ಇದಕ್ಕೆ ಕಾರಣ ಗೊತ್ತೇ ಇದೆ. ಅಕ್ಕಿ ರಾಗಿ ಬೆಳೆದರೆ ಅದರಿಂದ ಹೆಚ್ಚು ಹಣಬರುವುದಿಲ್ಲ. ಕಡಲೇಕಾಯಿ ಮುಂತಾದ ಇತರ ಬೆಳೆಗಳನ್ನು ಬೆಳೆದರೆ ಹೆಚ್ಚು ಹಣ ಬರುತ್ತದೆ ಎಂಬ ಆಶೆ ಜನರಿಗೆ ಇದೆ. ಬತ್ತ ಬೆಳೆಯುವ ಪ್ರದೇಶದ ವಿಸ್ತೀರ್ಣ ಸುಮಾರು 775,000 ದಿಂದ 780,000 ಎಕರೆವರೆಗಿದೆ. ಮಳೆ ಬಾರದೇ ಹೋದರೆ ಕೆರೆಗಳ ಕೆಳಗಿನ ಜಮೀನುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಹಾಗಿಲ್ಲ. ಈಗ ಶಾಸ್ತ್ರೀಯವಾಗಿ ಈ ಅಂಶಗಳನ್ನು ಸಂಗ್ರಹಿಸಲು ಸರಿಯಾದ ಸಿಬ್ಬಂದಿ ನಮ್ಮಲ್ಲಿಲ್ಲ. ಈಗ ನಿಜವಾಗಿ ನಾವು ಈ ವಿವರಗಳನ್ನು ಸಂಗ್ರಹ ಮಾಡುತ್ತಿರುವುದು ರೆವೆನ್ಯೂ ಸಿಬ್ಬಂದಿಯ ಮೂಲಕ. ಆದರೂ ಕೂಡ ಸಾಧ್ಯವಾದಷ್ಟು checks and counter checks ಇಟ್ಟುಕೊಂಡಿದ್ದೇವೆ. ನಮ್ಮ ದೇಶದಲ್ಲಿ ಜನಸಂಖ್ಯೆ ಅವ್ಯಾಹತವಾಗಿ ಬೆಳೆಯುತ್ತಿದೆ. ಆದರೆ ಇದಕ್ಕೆ ತಕ್ಕಂತೆ ಆಹಾರ ಬೆಳೆಗಳನ್ನು ಬೆಳೆಯತಕ್ಕ ಪ್ರದೇಶ ಮತ್ತು ಬೆಳೆಯತಕ್ಕ

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಪ್ರಮಾಣ ಹೆಚ್ಚುತ್ತಿಲ್ಲ. ಹೀಗಿರುವಾಗ ಹತೋಟಿಗಳನ್ನು ತೆಗೆದರೆ ಅದರಿಂದ ದೇಶದಲ್ಲಿ ಏನು ಪರಿಣಾಮವಾಗುತ್ತದೆಂಬುದನ್ನು ಮಾನ್ಯ ಸದಸ್ಯರು ಯೋಚಿಸಬೇಕು. ಧೈರ್ಯ ಮಾಡಬೇಕೆಂದು ಹೇಳಬಹುದು. 1948ನೆಯ ಇಸವಿಯಲ್ಲಿ ಧೈರ್ಯ ಮಾಡಿ ನಿಯಂತ್ರಣವನ್ನು ತೆಗೆದಿದ್ದುದಾಯಿತು. ಹಾಗೆ ತೆಗೆದ ಒಂದೇ ಒಂದು ತಿಂಗಳೊಳಗೆ ಶೇಕಡ 200 ರಷ್ಟು ಬೆಲೆಗಳು ಏರಿದವು. ಆದಕಾರಣ ನಾನು ಈಗ ಈ ವಿಚಾರದ ಪರವಾಗಿಯಾಗಲೀ ವಿರೋಧವಾಗಿಯಾಗಲೀ ವಾದಿಸುವ ಆವಶ್ಯಕತೆಯಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ನಾವು ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ನೀತಿಯನ್ನೇ ಅನುಸರಿಸುತ್ತಿದ್ದೇವೆ. ದೇಶದಲ್ಲಿ ಆಹಾರಾಭಾವವಿರುವುದರಿಂದ ಹತೋಟಿಗಳನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಮೊನ್ನೆ ಬೊಂಬಾಯಿನಲ್ಲಿ ಆಹಾರ ಮಂತ್ರಿಗಳ ಸಮ್ಮೇಳನ ನಡೆದಾಗ ಅದರಲ್ಲಿ ಖಚಿತವಾಗಿ ನಿರ್ಣಯವಾಗಿದೆ.

ಅಖಿಲ ಭಾರತದಲ್ಲಿ ಎಲ್ಲ ಕಡೆಯೂ ಒಂದೇ ರೀತಿ ನೀತಿಯಿಂದ ನಿಯಂತ್ರಣ ನಡೆಯಬೇಕೆಂದು ತೀರ್ಮಾನವಾಗಿದೆ. ಯಾವುದೋ ಒಂದು ಪ್ರದೇಶದಲ್ಲಿ ಆಹಾರ ಹೆಚ್ಚಾಗಿದ್ದರೆ, ಅಂತಹ ಪ್ರದೇಶದಲ್ಲಿ ಸಡಿಲ ಮಾಡಿರಬಹುದು. ಮದರಾಸಿನಲ್ಲಿ ಅವರು ಕೆಲವು ಭಾಗಗಳನ್ನು ಸರ್‌ಪ್ಲಸ್ ಎಂದು, ಸೆಲ್ಫ್ ಸಫಿಷಿಯೆಂಟ್ ಎಂದೂ, ಹೆಚ್ಚು ಡೆಫಿಸಿಟ್ ಮತ್ತು ಸ್ವಲ್ಪ ಡೆಫಿಸಿಟ್ ಪ್ರದೇಶಗಳೆಂದೂ ನಾಲ್ಕು ವಿಭಾಗ ಮಾಡಿದ್ದಾರೆ. ಸರ್‌ಪ್ಲಸ್ ಪ್ರದೇಶದಲ್ಲಿ procurement and rationing ಎರಡೂ ಇವೆ. ಪೂರಾ ಡೆಫಿಸಿಟ್ ಇರುವ ಪ್ರದೇಶದಲ್ಲಿಯೂ ಹಾಗೆಯೇ ಇದೆ. ಸ್ವಲ್ಪ ಡೆಫಿಸಿಟ್ ಇರುವ ಪ್ರದೇಶದಲ್ಲಿ ಮಾತ್ರ ಇದೇ ಜನವರಿ 7ನೆಯ ತಾರೀಖಿನಿಂದ ಒಂದು ಪ್ರಯೋಗವನ್ನು ಮಾಡಿದ್ದಾರೆ. ಈ ವಿಚಾರದಲ್ಲಿ ಅವರಿಂದ ನಾವು ಆಗಾಗ ವರದಿಯನ್ನು ತರಿಸುತ್ತಿದ್ದೇವೆ. ನಮ್ಮ ಪಕ್ಕದಲ್ಲಿರುವ ಚಿತ್ತೂರಿನಲ್ಲಿ ಈ ಪ್ರಯೋಗ ಆರಂಭವಾದ ನಾಲ್ಕು ದಿನಗಳು ಮಾತ್ರ ಹತೋಟಿಯಲ್ಲಿದ್ದವು. ಆಮೇಲೆ ವಿಪರೀತವಾಗಿ ಹೆಚ್ಚಲಾರಂಭವಾಗಿವೆ. ಸೇಕಡ ಐವತ್ತು ಎಪ್ಪತ್ತರಷ್ಟು ಹೆಚ್ಚಾಗಿವೆ. ಈ ಹೊತ್ತಿನ ಪತ್ರಿಕೆಗಳಲ್ಲಿ ನೋಡಿದರೆ ಎಂತಹ ಪರಿಸ್ಥಿತಿಯೊದಗಿವೆಯೆಂಬುದು ಗೊತ್ತಾಗುತ್ತದೆ. ಅಲ್ಲಿನ ಒಂದು ಪಡಿ ಎಂದರೆ ನಮ್ಮ ಒಂದೂವರೆ ಸೇರಿಗೆ ಒಂದೂ ಮುಕ್ಕಾಲು ರೂಪಾಯಾಗಿವೆ. ಈಗಾಗಲೆ ಸಾರ್ವಜನಿಕರು ಮಂತ್ರಿಗಳಲ್ಲಿಗೆ ಡೆಪ್ಯುಟೇಷನ್ ಹೋಗುತ್ತಿದ್ದಾರೆ. ಒಟ್ಟಿನಲ್ಲಿ, ಹತೋಟಿಗಳಿರಬೇಕೆಂದು ಯಾರೂ ಬಯಸುವುದಿಲ್ಲ, ಈಗಿನ ಪರಿಸ್ಥಿತಿಯಿಂದ ವಿಧಿಯಿಲ್ಲದೆ ನಾವು ಈ ಬೇಜಾರಿನ ಕೆಲಸವನ್ನು ನಿರ್ವಹಿಸಬೇಕಾಗಿದೆ. ಚಿತ್ತೂರಿನಲ್ಲಿ ಈಗ ಕಾಳೆಲ್ಲ ಮಾಯವಾಗಿದೆ. ಯಾರಲ್ಲಿ ಹಣವಿತ್ತೊ ಅವರೆಲ್ಲ ಬೇಕಾದಷ್ಟನ್ನು ಕೊಂಡು ಇಟ್ಟುಕೊಂಡಿದ್ದಾರೆ. ಕೆಲವರು ಬೆಳೆದವರು ಕೂಡ ತಮಗೆ ಬೇಕಾದಷ್ಟು ಕಾಳನ್ನು ಇಟ್ಟುಕೊಳ್ಳದೆ, ಹೇಗಿದ್ದರೂ ರೇಷನ್ ಸಿಕ್ಕುತ್ತದೆಂದು ಮಾರಿದ್ದಾರೆಂದು ವರದಿಯಾಗಿದೆ. ಅದರಲ್ಲಿಯೂ ಹರಿಜನರಿಗೂ ನೇಯ್ಗೆಯವರಿಗೂ ಬಹಳ ಕಷ್ಟವಾಗಿದೆಯೆಂದು ವರದಿಯಾಗಿದೆ. ಇವರೆಲ್ಲರೂ ಮಂತ್ರಿಗಳಲ್ಲಿ ನಿಯೋಗ ಹೋಗಿದ್ದರೆಂದು ಪತ್ರಿಕೆಗಳಲ್ಲಿ ವರದಿಯಾಗಿವೆ. ಎಲ್ಲಿಯವರೆಗೆ ಪ್ರಜೆಗಳಲ್ಲಿ ಬೇರೆ ಬೇರೆ ಪರಿಸ್ಥಿತಿಗೆ ಹೊಂದಿಕೊಳ್ಳುವ ಚೈತನ್ಯವಿರುವುದಿಲ್ಲವೋ ಅಲ್ಲಿಯವರೆಗೆ ಇಂತಹ ಲೋಪದೋಷಗಳು ಬಂದೇ ಬರುತ್ತವೆ. 1948ರಲ್ಲಿ ತೆಗೆದು ಮತ್ತೆ ಜಾರಿ ಮಾಡಬೇಕಾಯಿತು. ಮದರಾಸಿನಲ್ಲಿ ಏನಾಗುತ್ತದೆಂಬುದನ್ನು ನೋಡಿಕೊಂಡು ಎಚ್ಚರಿಕೆಯಿಂದ ಮುಂದುವರಿಯಬೇಕು. 1948ರಲ್ಲಿ ಏನಾಯಿತೆಂಬುದು ಅನೇಕರಿಗೆ ಮರೆತುಹೋಯಿತೆಂದು ಕಾಣುತ್ತದೆ, ಜ್ಞಾಪಕಶಕ್ತಿ ಕಡಿಮೆ, ಏನು ಮಾಡುವುದು ? ದೇಶದಲ್ಲಿ ಎಲ್ಲರೂ ಸತ್ಯಹರಿಶ್ಚಂದ್ರರಂತಹವರೇ ಇದ್ದರೆ ಏನೂ ಕಷ್ಟವೇ ಇಲ್ಲ. ಆದರೆ ಹಾಗಿಲ್ಲ. ಮನುಷ್ಯನ ಸ್ವಭಾವ ಒಂದೇ ರೀತಿಯಾಗಿ ಮೇಲ್ಮಟ್ಟದ್ದಾಗಿರುವುದಿಲ್ಲ. ಹತೋಟಿಗಳು ಸರಿಯಾಗಿ ನಡೆಯುವುದು ಅಥವಾ ನಡೆಯದೇಯಿರುವುದು ಮನುಷ್ಯರ ಗುಣಾವಗುಣಗಳನ್ನವಲಂಬಿಸಿರುತ್ತವೆ. ಎಲ್ಲಿ ಮನುಷ್ಯರು ಸರಿಯಾಗಿರುತ್ತಾರೊ ಅಲ್ಲಿ ಸರಿಯಾಗಿ ನಡೆಯುತ್ತವೆ. ಎಲ್ಲಿ ಮನುಷ್ಯರಲ್ಲಿ ಲೋಪದೋಷಗಳಿರುತ್ತವೆಯೋ ಅಲ್ಲಿ ಸರಿಯಾಗಿ ನಡೆಯುವುದಿಲ್ಲ. ಏಕ್‌ದಮ್ ಹತೋಟಿಯನ್ನು ತೆಗೆದರೆ ಏನಾಗುತ್ತದೆಂದರೆ, ಯಾರಿಗೆ ಹೆಚ್ಚು ಹಣ ಕೊಟ್ಟು ತೆಗೆದುಕೊಳ್ಳಲು ಶಕ್ತಿಯಿರುತ್ತದೆಯೋ, ಎಲ್ಲಾದರೂ ಹೋಗಿ ತೆಗೆದುಕೊಂಡು ಬರಲು ಚೈತನ್ಯವಿರುತ್ತದೆಯೋ ಅವರಿಗೆ ತೊಂದರೆ ಅಷ್ಟಾಗುವುದಿಲ್ಲ, ಬಡವರಿಗೆ ಬಹಳ ತೊಂದರೆಯಾಗಿ ಈ ದಿನ ಚಿತ್ತೂರಿನಲ್ಲಿ ಬಂದಿರುವ ತೊಂದರೆ ಇಲ್ಲಿಯೂ ಬರುತ್ತದೆ. ಗ್ರಾಮಾಂತರಗಳಲ್ಲಿ ಯಾರು ಹನ್ನೆರಡು ತಿಂಗಳಿಗೂ ಸಾಕಾಗುವಷ್ಟು ಬೆಳೆಯುತ್ತಾರೋ ಅವರಿಗೆ ಅನುಕೂಲ, ಕಷ್ಟವಿಲ್ಲ. ಯಾರು ಸಾಕಾಗುವಷ್ಟು ಬೆಳೆಯುವುದಿಲ್ಲವೋ ಅವರಿಗೆ ಕಷ್ಟ ಬರುತ್ತದೆ. ಹತೋಟಿ ತೆಗೆದರೆ ಡಿಕ್ಲರೇಷನ್ ಕೊಡಬೇಕಾಗಿಲ್ಲ, ಸಂಗ್ರಹಣೆ ತೊಂದರೆಯಿಲ್ಲವೆಂದು ಅವರು ಹೇಳಿದರು. ಯಾರು 12 ತಿಂಗಳಿನಲ್ಲಿ ಜಾಸ್ತಿ ಬೆಳೆಯುತ್ತಾರೋ ಅವರಿಗೆ ಬಹಳ ಸಂತೋಷ, ಏನೂ ಅನುಮಾನವಿಲ್ಲ. ಹೆಚ್ಚು ಜನ ಒಳ್ಳೆಯ ಬೆಳೆ ಮಾಡಿರಬಹುದು. ಅನೇಕ ವರ್ಷಗಳಿಂದ ಕಾಣದೇ ಇರತಕ್ಕ ಹಣವನ್ನು ಕಂಡಿರಬಹುದು. ಆದ್ದರಿಂದ ಯಾರು ಸಂತೋಷಪಟ್ಟರು ಎಂಬುದನ್ನು ಸಭೆಯವರ ತೀರ್ಮಾನಕ್ಕೆ ಬಿಡುತ್ತೇನೆ. ಆದರೆ ಒಂದು ಅಂಶವಾದ್ದನ್ನು ಶ್ರೀಮನ್ಮಹಾರಾಜರವರು ದಿವ್ಯವಾಣಿಯಲ್ಲಿ ನುಡಿದಿದ್ದಾರೆ. ಇಡೀ ದೇಶಕ್ಕೆ ಕಷ್ಟ ಬಂದಿತ್ತು. ಕೋಟ್ಯಾಂತರ ರೂಪಾಯಿ ಹಾಳು ಮಾಡಿದೆವು. ಈಗ ಆಹಾರ ಪದಾರ್ಥಗಳನ್ನು ಹೊರದೇಶಗಳಿಂದ ತರಿಸುವುದಕ್ಕೆ 200 ಕೋಟಿ ರೂಪಾಯಿಗಳವರೆಗೂ ಖರ್ಚಾಗಬಹುದೆಂದು ಪತ್ರಿಕೆಗಳಲ್ಲೂ ವರದಿ ಬಂದಿದೆ. ಇಷ್ಟು ದಿನವೂ ನಮ್ಮ ದೇಶದಲ್ಲಿ ಮುಗ್ಗಲು ಅಕ್ಕಿ, ಮುಗ್ಗಲು ಗೋಧಿ, ಹುಳುಕಲು ಅಕ್ಕಿ, ಹುಳುಕಲು ಗೋಧಿ ಕೊಟ್ಟಿದ್ದೇವೆ. ಜನ ತಿಂದಿದ್ದಾರೆ. ಯಥೇಷ್ಟವಾಗಿ ಇದ್ದಿದ್ದರೆ ಏಕೆ ತಿನ್ನಬೇಕಾಗಿತ್ತು ? ದೇಶದಲ್ಲಿ ನಿಜವಾಗಿಯೂ ಆಹಾರದ ಅಭಾವ ಇದೆ. ಜನಗಳಿಗೆ ಇರತಕ್ಕದ್ದನ್ನು ಸರಿಯಾಗಿ ವಿಲೇ ಮಾಡಬೇಕಾದರೂ ಅನೇಕ ಕಷ್ಟನಿಷ್ಠೂರಗಳಿವೆ. ಆದ್ದರಿಂದ ಯಾರು ಸ್ವಪರಿಪೂರ್ಣವಾಗಿದ್ದಾರೋ ಅಂಥವರು ನಿಜವಾಗಿಯೂ ಸ್ವಲ್ಪ ಹೊಟ್ಟೆ ಕಟ್ಟಬೇಕಾದ್ದು, ತೊಂದರೆ ಅನುಭವಿಸಬೇಕಾದ್ದು ಸಹಜವಾಗಿದೆ. ದೇಶ ಸ್ವಲ್ಪ ಸ್ವಾವಲಂಬಿಯಾಗಿದ್ದರೆ ಆಗ ಹತೋಟಿಯ ಅವಶ್ಯಕತೆ ಖಂಡಿತವಾಗಿಯೂ ಇಲ್ಲ. ಈಗ ಬತ್ತದ ಅಭಾವ ಇದೆ. ಆ ವಿಚಾರ ಹೆಚ್ಚು ಪ್ರಸ್ತಾಪ ಮಾಡಬೇಕಾಗಿಲ್ಲ. ಈ ಹತೋಟಿಯನ್ನು ನಾವೇನೂ ಹೊಸದಾಗಿ ಪ್ರಾರಂಭಿಸಿಲ್ಲ. 1943ನೆಯ ಆಗಸ್ಟ್‌ನಲ್ಲಿ ಪ್ರಾರಂಭವಾಯಿತು. 1944ನೇ ಜನವರಿಯಿಂದ ಉದ್ದಕ್ಕೂ ನಡೆದುಕೊಂಡು ಬಂದಿದೆ. ಅದರ ಅನುಭವ ಸದಸ್ಯರೆಲ್ಲರಿಗೂ ಇದೆ. ಹತೋಟಿ ತೆಗೆದುಬಿಡಿ ಎಂದು ವಾದಿಸುವುದೇನೋ ಪುರಸ್ಕರಿಸಬೇಕಾದ

ವಿಷಯ. ಆದರೆ ಅಭಾವವಿರುವಾಗ ಇದನ್ನು ತೆಗೆಯುವುದು ಸ್ವಲ್ಪ ಅಪಾಯ. ಅದರಲ್ಲೂ ಎಲ್ಲ ಅಲ್ಲದಿದ್ದರೂ ಕೈಗಾರಿಕಾ ಟೌನ್ ಮುನಿಸಿಪಲ್ ಪ್ರದೇಶಗಳಲ್ಲಿ ಕಷ್ಟವಾಗುತ್ತದೆ. ಅವರಿಗೆ ಹೆಚ್ಚು ಬೆಲೆ ಕೊಟ್ಟು ತೆಗೆದುಕೊಳ್ಳತಕ್ಕ ಶಕ್ತಿ ಇರುವುದಿಲ್ಲ. ಈಗಲೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಕೊಡುತ್ತಿಲ್ಲ. ಮೈಸೂರು ದೇಶದಲ್ಲಿ 12½ ಲಕ್ಷ ಜನ ಸ್ಟ್ಯಾಚ್ಯುಟರಿ ಪ್ರದೇಶದಲ್ಲಿ ಇದ್ದಾರೆ. ಇನ್‌ಫಾರ್ಮಲ್ ರೇಷನಿಂಗ್ ಪ್ರದೇಶದಲ್ಲಿ 35ಲಕ್ಷ ಜನ ಇದ್ದಾರೆ. ಇವರೆಲ್ಲರೂ ರೇಷನ್ ಡಿಪೋಗಳಿಂದಲೇ ಆಹಾರ ಪದಾರ್ಥವನ್ನು ತೆಗೆದುಕೊಂಡು ಊಟಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಬೋಗಸ್ ರೇಷನ್ ಕಾರ್ಡಿನಿಂದ ವ್ಯಾಪಾರವಾಡಬಹುದು. ಈ ಸಂದರ್ಭದಲ್ಲಿ ಆಹಾರದ ಇಲಾಖೆಯವರು ಮಾಡಿರತಕ್ಕ ಕಾರ್ಯಕ್ರಮವನ್ನು ನೋಡಿ. ಬೆಂಗಳೂರು ಸಿಟಿಯಲ್ಲಿ 30-35 ಸಾವಿರ ಜನರನ್ನು ಹಿಡಿದಿದ್ದಾರೆ. ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಪ್ರೆಸ್ ಹೇಳಿಕೆಯನ್ನು ಸಹ ಕೊಟ್ಟಿದ್ದೇವೆ. ಎಷ್ಟೋ ಬೋಗಸ್ ಕಾರ್ಡುಗಳು ಬರುತ್ತವೆ. ಅದು ನಮ್ಮ ಜನಗಳ ನೈತಿಕ ಮಟ್ಟವನ್ನು ಅವಲಂಬಿಸಿದೆ. ಆದ್ದರಿಂದ ಆಹಾರ ನಿಯಂತ್ರಣದ ವಿಚಾರದಲ್ಲಿ ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡಬೇಕು. ಆಳವಾಗಿ ಪರಿಶೀಲಿಸಬೇಕೇ ಹೊರತು ಜಿಗುಪ್ಸೆಯಿಂದ ಪರಿಶೀಲನೆ ಮಾಡಬಾರದು. ಜನತೆಗೆ ಕಿರುಕುಳ ಇದೆ. ನಿಜ. ದೇಶಕ್ಕೆ ಕಷ್ಟ ಬಂದಿರುವಾಗ ಲಾಭಕೋರತನ ಮತ್ತು ಸಮಯ ಸಿಕ್ಕಿದಾಗ ಹಣ ಸಂಪಾದನೆ ಮಾಡತಕ್ಕ ಮನೋಭಾವ ಬಂದುಬಿಟ್ಟಿದೆ. ಆದ್ದರಿಂದ ಎಚ್ಚರಿಕೆಯಿಂದ ಇರಬೇಕೆಂದು ಹೇಳುತ್ತೇನೆ. ಹೆಚ್ಚು ಆಹಾರ ಬೆಳೆಯುವ ವಿಚಾರದಲ್ಲಿ ನಾನು ವಿಶೇಷವಾಗಿ ಪ್ರಸ್ತಾಪಿಸುವುದಿಲ್ಲ. ಕೇಂದ್ರ ಸರ್ಕಾರದವರು ಸಹಾಯ ನೀಡಿದ್ದಾರೆ. 1949-50 ರಲ್ಲಿ ಕಾರ್ಯಕ್ರಮ ಹಾಕಿಕೊಂಡು ಕೇಂದ್ರ ಸರ್ಕಾರದವರು ಹಣ ಕೊಟ್ಟಿದ್ದಾರೆ. ರೀಜನಲ್ ಫುಡ್ ಕಮಿಷನರಾದ ಎಸ್. ವಿ. ರಾಮಮೂರ್ತಿ, ದಾತಾರ್‌ಸಿಂಗ್ ಮತ್ತು ಎಸ್. ವಿ. ಕೃಷ್ಣಸ್ವಾಮಿಯವರು ಬಂದು ನಮ್ಮ ಕೆಲಸ ಕಾರ್ಯಗಳ ಒಂದೊಂದು ಅಂಶವನ್ನೂ ಚೆಕ್ ಮಾಡಿದ್ದಾರೆ. ಅದೂ ಅಲ್ಲದೇ ಪ್ರೋಫಾರ್ಮ ಭರ್ತಿ ಮಾಡಿ ಇಂತಿಂಥಾ ಉದ್ಯಮಕ್ಕೆ ಇಷ್ಟಿಷ್ಟು ಹಣ ಬೇಕು ಎಂದು ಹೇಳಿ ಕಳುಹಿಸಿದಾಗ ಅವನ್ನು ಚೆಕ್ ಮಾಡುತ್ತಾರೆ. ಅವರ ಹಿಂದಿನ ಅನುಭವದ ಮೇಲೆ ಪ್ರಾಂತ್ಯಗಳಿಗೆ ಕೋಟ್ಯಾಂತರ ರೂಪಾಯಿ ಕೊಡುವಾಗ ಒಂದು ನಿಯಮವನ್ನು ಹಾಕಿದ್ದಾರೆ. ಇನ್ನೊಂದು ಭಾವನೆ ಬರಬಹುದು. ಕೇಂದ್ರವೇ ಬೇರೆ ನಾವೇ ಬೇರೆ ಎಂದು ಅಲ್ಲ. ಎಲ್ಲವೂ ಒಂದೇ. ಕೇಂದ್ರಕ್ಕೆ ಕೆಲವು ಆದಾಯ ಹೋಗಿದೆ, ನಮಗೆ ಕೆಲವು ಬರುತ್ತವೆ. ಆ ಆದಾಯದಲ್ಲಿ ನಮಗೆ ಅವರು ಹಣ ಕೊಡುತ್ತಾರೆ. ಆದ್ದರಿಂದ ಅವರು ಕೊಡುವವರು, ನಾವು ತೆಗೆದುಕೊಳ್ಳುವವರು ಎಂಬ ಭಾವನೆ ಖಂಡಿತವಾಗಿಯೂ ಇರಬಾರದು. ಆದ್ದರಿಂದ ನಮಗೂ ಅವರಿಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಎರಡೂ ಹಾಸು ಹೊಕ್ಕಾಗಿ ಇದ್ದಹಾಗೆ. ಆದ್ದರಿಂದ ಅವರು ಅನೇಕ ಬಾಬುಗಳಿಗಾಗಿ ಹಣ ಕೊಟ್ಟಿದ್ದಾರೆ. ಇರಿಗೇಷನ್ ಕೆಲಸ ಕಾರ್ಯಗಳಿಗೆ 1 ಕೋಟಿ ಅಲ್ಲ ಎರಡುಕೋಟಿ ಆದರೂ ಕೊಡುತ್ತೇವೆ ಎಂದು ಹೇಳಿದ್ದಾರೆ. The only limiting factor is your capacity to spend. ಕೆರೆ ಮಂಜೂರಾಗುತ್ತದೆ. ಆದರೆ ಕಾರ್ಯರೂಪಕ್ಕೆ ಬರುವುದಿಲ್ಲ. ಆದ್ದರಿಂದ ಅಚ್ಚುಕಟ್ಟುದಾರರಿಗೆ ಮೊದಲನೆ ಸ್ಥಾನ ಕೊಡಬೇಕಾಗಿದೆ. ಏಕೆಂದರೆ ಅವರಿಗೆ ಉತ್ಸಾಹವಿಲ್ಲ. ಕಂಟ್ರಾಕ್ಟರುಗಳೂ ಬರುವುದಿಲ್ಲ. ಒಂದು ವೇಳೆ ಬಂದರೂ ರೇಟ್ ಸಾಲದು ಎಂದು ತಕರಾರು ಮಾಡುತ್ತಾರೆ. ಈ ರೀತಿ ನಿಧಾನವಾಗುತ್ತದೆ. ಆದ್ದರಿಂದ ಅವರಿಗೆ ಪ್ರೋತ್ಸಾಹ ಕೊಟ್ಟು 1949-50ರಲ್ಲಿ ಅನೇಕ ಕಾಮಗಾರಿಗಳನ್ನು ನಾವು ಮುಂದುವರಿಸಿದ್ದೇವೆ. ಇದನ್ನು ನೋಡಿ ಕೇಂದ್ರ ಸರ್ಕಾರದವರು ಸಂತೋಷಪಟ್ಟು 1951-52ಕ್ಕೆ ಈಗಾಗಲೇ ಹಣ ಕೊಟ್ಟಿದ್ದಾರೆ. ಚೆಕ್ಕು ಸಹ ಬಂದಿದೆ. 1952-53 ರಿಂದಲೂ ಕೂಡ ಫೈನಲೈಸ್ ಆಗಿ ಹೋಗಿ ಫಾರ್ಮಲ್ ಅಪ್ರೂವಲ್‌ಗೆ ಬಂದಿದೆ. ಪ್ರತಿಯೊಂದು ಅಂಶವನ್ನೂ ದಾತಾರ್ ಸಿಂಗ್‌ರವರು ಪರಿಶೀಲನೆ ಮಾಡಿದ್ದಾರೆ. He examined each item and when he saw the usefulness of each item and the capacity of the Government to execute it in time, they have granted this amount. ಆದ್ದರಿಂದ ಆತುರಪಡಬಾರದು. ಕಾವೇರಿ ನಾಲಾ ಪ್ರದೇಶ, ಯಳಂದೂರು ಪ್ರದೇಶ ಮತ್ತು ವಿಶ್ವೇಶ್ವರಯ್ಯ ನಾಲಾ ಪ್ರದೇಶ, ಅಲ್ಲದೆ ಶ್ರೀ ಸಿದ್ದಪ್ಪನವರು ಇರುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸೂಳೆಕೆರೆ ಎಷ್ಟುವರ್ಷದಿಂದ ಪಾಳುಬಿದ್ದು ಹೋಗಿತ್ತು, ಹಾಗೆ ಹಳ್ಳ ಎಷ್ಟು ಮಟ್ಟಿಗೆ ಇತ್ತು, ಈಗ ಹೇಗಿದೆ ಎಂಬುದನ್ನೆಲ್ಲಾ ಖುದ್ದಾಗಿ ನೋಡಬೇಕು. ಜನಾಬ್ ಇಮಾಂರವರು ಜಗಳೂರಿನಲ್ಲಿ ಪ್ರಾರಂಭಮಾಡಿದ ಕೆರೆಗಳು ಯಾವ ಸ್ಥಿತಿಯಲ್ಲಿವೆ ಎಂಬುದನ್ನು ನೋಡಬೇಕು. ಇಂಡಿಯಾ ಸರ್ಕಾರದವರು ತಮ್ಮ ಯೋಜನೆ ಪ್ರಕಾರ ಹಣ ಕೊಡದೇ ಇದ್ದರೆ ಅವೆಲ್ಲಾ wind up ಆಗುತ್ತಾ ಇದ್ದುವು. ಜನಾಬ್ ಇಮಾಂರವರ ತಾಲ್ಲೂಕಿನಲ್ಲಿರತಕ್ಕ ಸಂಗನಹಳ್ಳಿ, ಗಡಿಮಾಕುಂಟೆ, ಕುಪ್ಪದಹಳ್ಳಿ ಕೆರೆಗಳನ್ನು ಪೂರ್ತಿ ಮಾಡುತ್ತಾ ಇದ್ದೇವೆ. ಅದೇ ರೀತಿ ಚಿತ್ರದುರ್ಗ ಜಿಲ್ಲೆಯಲ್ಲಿ ಪರಶುರಾಮಪುರ ಕೆರೆ ಪೂರ್ಣವಾಗಿ ಒಣಗಿಹೋಗುತ್ತೆ ಎಂದು ಹೇಳುತ್ತಾ ಇದ್ದರು.

ಶ್ರೀ ಎಲ್. ಸಿದ್ದಪ್ಪನವರು.—ಪರಶುರಾಮಪುರ ಕೆರೆಯಲ್ಲಿ ನಾವೇ ನೀರು ಬಿಟ್ಟಿದ್ದೆವು. ಅದು ಒಣಗಿಹೋಗಿರಲ್ಲ.

ಜನಾಬ್ ಜಿ. ಮಹಮದ್ ಇಮಾಂರವರು.—ಆಗ ಕೆರೆ ಕಟ್ಟೆಗಳೆಲ್ಲವೂ ತುಂಬಿ ತುಳುಕುತ್ತಾ ಇದ್ದುವು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಪರಶುರಾಮಪುರ ಕೆರೆ ಅವರು ಇದ್ದಾಗ ಯಾವಸ್ಥಿತಿಯಲ್ಲಿತ್ತು ಅದು ಯಾವ ಕಾಲದಲ್ಲಿ ಪ್ರಾರಂಭವಾಯಿತು ಎಂಬುದನ್ನು ನೋಡಬೇಕು.

Sri L. SIDDAPPA.—When an incorrect statement is made it is our duty to protest against such an incorrect statement.

The Hon'ble Sri T. MARIAPPA.—There will be another occasion to do that. ಆದ್ದರಿಂದ ಅಲ್ಪಕಾಲಾವಧಿ ನೀರಾವರಿ ಪ್ರಾಜೆಕ್ಟುಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದೇವೆ. ಅವು 1952 ರಲ್ಲಿ ಪೂರ್ತಿಯಾಗಿ ನೀರನ್ನು ವ್ಯವಸಾಯಕ್ಕೆ ಕೊಡಬೇಕು. ಈಗ ನಾವು ಆಹಾರದ ಬೆಳೆಗಳಿಗೆ tail-end lands ಗೂ ಸಹ ನೀರು ಕೊಟ್ಟಿದ್ದೇವೆ. ವ್ಯವಸಾಯ ಉತ್ತಮವಾಗಿದೆ. ಇದೇ ರೀತಿ ಈ ವರ್ಷ ಮಾಡತಕ್ಕ ಕಾರ್ಯಕ್ರಮವೇ ಮುಂದಿನ ವರ್ಷವೂ ಬರುತ್ತದೆ. ಬರೀ ಕೆಲಸ ಮುಗಿದಾಕ್ಷಣಕ್ಕೆ ಬೆಳೆ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಜನ

(THE HON'BLE SRI T. MARIAPPA.)
ಗಳ ಆರೋಗ್ಯವನ್ನು ಅವಲಂಬಿಸಿರುತ್ತದೆ. ಎತ್ತು ಕರುಗಳು ಆರೋಗ್ಯವಾಗಿರಬೇಕು. ಆದ್ದರಿಂದ ಬರೀ ಕಾರ್ಯಕ್ರಮದಿಂದಲೇ ಏನೂ ಆಗಲಲ್ಲ ಎಂದು ಹೇಳುವುದು ಸರಿಯಲ್ಲ. ಅನೇಕ ಕಾರಣಗಳಿಗೆ ಸಂಬಂಧವಿರತಕ್ಕ ಈ ಪ್ರಶ್ನೆಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಬೇಕು ಮತ್ತು ರಚನಾತ್ಮಕ ದೃಷ್ಟಿಯಿಂದ ನೋಡಬೇಕು.

ನನಗೆ ಸಂಬಂಧಪಟ್ಟಂಥ ಇಲಾಖೆಗಳ ವಿಷಯವಾಗಿ ಇಷ್ಟುಮಾತ್ರ ಹೇಳಿ ಮುಗಿಸುತ್ತೇನೆ. ಇನ್ನು ಬಾಕಿ ವಿಷಯಗಳನ್ನು ಮಾನ್ಯ ಹಣ ಕಾಸಿನ ಮಂತ್ರಿಗಳಿಗೂ ಮತ್ತು ನಮ್ಮ ನಾಯಕರಿಗೂ ಹೇಳುವುದಕ್ಕೆ ಬಿಡುತ್ತೇನೆ.

The Hon'ble Sri H. C. DASAPPA (Minister for Finance and Industries).—Mr. Speaker, Sir, I do not think I should detain this House very long at this late hour and since the Hon'ble Chief Minister has yet to speak, I better bring my remarks to a close very early. On the whole, I must say, it is very gratifying to note that the House has taken very kindly to the Address and barring here and there occasional criticism, they have been fairly fulsome in their praise.

The Motion of Thanks has been very ably moved by my Hon'ble friend Sri M. Govinda Reddy and the others who have followed in support of it have also placed the matter very clearly before the House. I would only take a few minutes to answer some of the points raised by the Hon'ble Leader of the Opposition and one or two of his supporters.

It has been stated that the Address does not contain anything refreshingly new and that it is more or less a repetition of what has already been placed before the House in one form or other. That such a criticism should have emanated from a man of experience is somewhat strange. If this Address of His Highness has fulfilled one purpose, it is that it has referred to the various plans and programmes that we have before us and how far we have been able to implement them during the course of the year. The criticism that was levelled by Sri L. Siddappa that there was nothing very new in the Address is, I think, one which can more appropriately be applied to his own remarks because, as I am going to show presently, there is hardly any single observation which he has made to-day which he has not made more than a year ago. And the surprise was all the greater......

Sri L. SIDDAPPA.—It was necessitated on account of the Address.

The Hon'ble Sri H. C. DASAPPA.—......that having the boot in his own leg he is looking at somebody else's. He said with regards to the question of integration, that things had not moved very satisfactorily. I just sent for the proceedings of the October 1949 session and I find there in his remarks, that he has said nothing new or fresh to-day. In regard to integration I do not want to enter into a controversy. I was somewhat surprised at the way in which my Hon'ble friends, the Leader of the Opposition and Sri L. Siddappa, are looking at the question of integration. They seem to be still harping on the idea that there is an intention of surrendering something which could be well retained. I must frankly say that it is not only a wholly impossible idea but which would be extremely unwise. With a constitution such as we have before us, how is it possible for us to do otherwise than integrating in this very manner that we have done? I ask whether it is a sin on the part of this Government that, while accepting to the integration as per the Constitution, they have made supermost efforts to get some concessions which they have no right to expect from the Central Government and which the Centre was not bound to give. That is all the point that I want to place before them. It is also said, I think Janab Haneef said it, that we had got a large portion of the net revenue gap that we have lost. It is not exactly that. We have got the whole of it and something more than the whole of it for the five years. Take for instance the Railway. We had the highest revenue especially during the years 1948-49 and quite regardless of the fact that all the scales of salaries would be revised and would be brought approximately to the high level of the salaries prevailing in other railways which would give a considerably reduced net income of railways, they have taken

the average of the best two years which you can ever think of and give it back for these five years. Is that a wrong or wise policy? Likewise Income-tax. They could have just taken what exactly the income was in the department. But they have given us almost every concession imaginable including a thing like what additional income-tax we would have recovered in case the gold duty did not exist in those days. That would mean an income of Rs. 42 lakhs every year for the next five years. I could repeat things like these. Imagine also the Government of India thinking that the heavy cigarette duty that was imposed in 1948-49 also existed in 1946-47 and giving us the advantage of 15 lakhs, which on an average comes to 7½ lakhs for another five years and then in a tapering of arrangement in the next five or ten years. Sri L. Siddappa was refering to something of railways. Again I want to tell him that in 1946-47 when we had put into the railway depreciation fund 19 lakhs of rupees more than what we need have done under the Railway Board rules, they have given us the advantage of that so that we get nearly 9 or 9½ lakhs there for 5 years and then tapering again for another five years. These are some of the points which I expect the Hon'ble Members who know things, to appreciate as substantial concessions which the Centre was under no obligation to confer on this State. Again with regard to the Railway Depreciation Fund, Sri L. Siddappa is always harping on the question of Rs. 140 lakhs. There are two points to bear in mind. The first thing is that we cannot chalk out an altogether independent life all for ourselves when in the case of all other States and Unions the Centre has followed one definite policy. This question of a functional distribution is one of the cardinal principles on which they have gone. In no place have they tried to pay for the assets they have secured. Those assets that we built up for railway should have been built up from sources of federal revenue which should have gone to the Federal Government. That is the basis on which they have treated the whole question. There is no question of paying any concession. Now when that is a cardinal principle on which they have proceeded with regard to the whole range of integration, how can we now go and say that for Mysore alone they must adopt a different policy? If for instance they paid anything for any of our assets, they would have to pay likewise to the entire States—Baroda, Kathiawar and so on. (*A Voice*: We do not want any compensation.)

When you say that there is no question of compensation, all the other assets which have gone with the Departments must necessarily go to the Centre without compensation.

Sri L. Siddappa's point is "You must advance these as matters of equity for snatching some more concessions from the Centre." I may assure my Hon'ble friend that we have done this in a manner which I do not think anybody could improve upon. But all that I can say is that we have not overlooked this point and we have put forward this in order to get other concessions and advantages.

There is one more point also, as I said, which should be noted with regard to the railway reserve fund. We have extracted a promise from them that this railway reserve is not going to be pooled into the rest of the railway reserves that they have got in India, but the whole of the amount, if it comes to a necessity, would be used for the development of railways within the State.

Then with regard to the question of the sharing of assets and liabilities, I must say I am sorry it is quite possible we could have added a para, but the matter is yet to be settled. As to what exactly the sharing should be and how much should go to them, is a matter which is still under examination. But I do not think I will be committing an act of indiscretion if I were to take the Hon'ble Members of this House into confidence and say that the mere apportionment of the assets and liabilities means nothing unless these reserve funds and so on are backed up by other

(THE HON'BLE SRI H. C. DASAPPA.)

cash amounts or by liquid securities. Unless they are backed up by cash or by securities, the mere apportionment means nothing very much. I was saying this morning in answer to supplementaries put by Janab Imam that we had to sell away most of the securities and to-day it stands almost at the irreducible minimum. That itself is indicative of the fact that some of the funds which had plenty of power formerly and which we both could have shared—well those securities are not present to-day. Most of them are, what I may say, book balances and not exactly supported by what is there, except to say that whatever securities are now available for the sharing, that will go in the proportion. If it were say ten times what we have, they would have had a larger share. If it were one-tenth of what is expected to be on the face of it, then you know exactly the quantity that they will get. So I think on the whole this is being overdone a little and unnecessarily, not only that it is fundamentally wrong and incorrect, but even in effect it is not going to materially change the position.

I just want to say one other matter with regard to this. Friends have said and the motion for amendment also suggests as though we yield to the Centre. I am afraid that view is shared by quite a large number of only in this House—not exactly a large number of people here, very few—but outside. One of the Hon'ble Members, I do not know whether it is Janab Imam, was referring to the views expressed by Sir M. Visveswaraya. Now I tell you—I have already said—that under the Constitution there is no meaning in trying to avoid our responsibilities with regard to this integration. It would be stark madness for us to attempt to stand up against the Constitution; but quite apart from that, I ask 'Are there any really substantial advantages?'; not merely all the concessions that we have derived in the negotiations but even otherwise? Not only that we got back every pie that is now being lifted to the Centre in regard to these Departments in which we have integrated, not only that we have got that amount enhanced to Rs. 345 lakhs from what was Rs. 325 lakhs, even after obtaining the concessions to which I have referred, to which I referred also in October 1949, we have got Rs. 20 lakhs more. I ask my Hon'ble friends to tell me whether, if we had not integrated in the manner that we have done, the Centre would have been inclined to give all these grants and loans which they have given for 'Grow More Food' Schemes. Where would have been the obligation on the part of the Centre to make any of those grants if we had not integrated? Take a small sum of Rs. 2·50 lakhs under the Sir M. Visvesvaraya's rural development scheme. Where would be the obligation on their part to give a grant for this? I think Mysore is always known to be very fair-minded in its dealings with all people, whether Governments or individuals and I do not want an impression to get out anywhere that Mysore is not appreciative of the way in which the Centre has treated us. I think I would drop the matter there and proceed to some other points.

Take again the other question allied to this. Even before this financial integration agreement and even before the 26th of January 1950, we had decided to make over Defence to the Centre. It was quite within the Centre's rights to lift up the entire Military and do what they like with the Military thereafter. Not that it was not open to them, but we said that it would not be very wise, and through negotiations we said: "Let the I.S.F. be separated from the non-I.S.F. here, and keep back a force which would be costing us an expenditure of roughly Rs. 16 or 17 lakhs." Please appreciate this point, namely, that in view of the fact that we retained this military costing Rs. 16 or 17 lakhs, we are now in a position to effect any retrenchments that we choose there and save the money for the State. Whereas if they had lifted the whole of the military, surely nobody would have found fault with them if with regard to the various forces, they had chosen to say they did not come up to the standard and demobbed them. I only indicate here and

there a few points to show that the integration viewed from any standpoint is to the distinct advantage of the State.

